بِسۡمِ اللّٰہِ الرَّحۡمٰنِ الرَّحِیۡمِ نَحْمَدُهٗ وَنُصَلِّیْ عَلٰی رَسُوْلِهِ الْكَرِيْمِ وَعَلٰی عَبْدِهِ الْمَسِيْحِ الْمَوْعُوْدِ

وَلَقَدۡ نَصَرَکُمُ اللّٰہُ بِبَدۡرٍ وَّ اَنۡتُمۡ اَذِلَّۃٌ

ಕನ್ನಡ
# ಬದರ್
ವಾರ ಪತ್ರಿಕೆ
WEEKLY BADAR QADIAN KANNADA

ವರ್ಷ: 01

ಸಂಚಿಕೆ: 22

ವಾರ್ಷಿಕ ಶುಲ್ಕ ರೂ.500/-

ಸಂಪಾದಕರು: ತಾರಿಖ್ ಅಹ್ಮದ್ ಇದ್ರೀಸ್.

11 ಜೂನ್ 2020, 11 ಎಹ್‌ಸಾನ್ 1399 ಹಿಜರಿ ಶಮ್‌ಸಿ,
18 ಶವ್ವಾಲ್ 1441 ಹಿಜರಿ ಖಮರಿ.

## ಅಹ್ಮದಿಯಾ ವಾರ್ತೆ

ಅಲ್‌ಹಮ್ದುಲಿಲ್ಲಾಹ್! ಹುಝೂರ್ ಅನ್ವರ್ ಅಯ್ಯದಹುಲ್ಲಾಹುತಆಲ ಬಿನಸ್ರಿಹಿಲ್ ಅಝೀಝ್‌ರವರು ಆರೋಗ್ಯವಾಗಿದ್ದಾರೆ. ಹುಝೂರ್ ರವರ ಯೋಗಕ್ಷೇಮಕ್ಕಾಗಿ, ಶುಭಕಾರ್ಯಗಳಲ್ಲಿ ಯಶಸ್ಸುಗಳಿಸಲಿಕ್ಕಾಗಿ ದುಆ ಮಾಡುತ್ತಾ ಇರಿ, ಅಲ್ಲಾಹನು ಹುಝೂರ್ ರವರನ್ನು ಪ್ರತಿಕ್ಷಣ ಸಂರಕ್ಷಿಸಲಿ- **ಆಮೀನ್**

اَللّٰھُمَّ اَیِّدْ اِمَامَنَا بِرُوْحِ الْقُدُسِ
وَبَارِكْ لَنَا فِیْ عُمُرِهٖ وَاَمْرِهٖ

## ಅಲ್ಲಾಹನ ಉಪದೇಶ

وَلَا تُؤۡتُوا السُّفَہَآءَ اَمۡوَالَکُمُ
الَّتِیۡ جَعَلَ اللّٰہُ لَکُمۡ قِیٰمًا
وَّ ارۡزُقُوۡہُمۡ فِیۡہَا وَ اکۡسُوۡہُمۡ وَ قُوۡلُوۡا
لَہُمۡ قَوۡلًا مَّعۡرُوۡفًا

*(ಅನ್ನಿಸಾಅ್:06)*

ಅಂದರೆ: ನಿಮ್ಮ ಜೀವನದ ಆಸರೆಯಾಗಿ ಅಲ್ಲಾಹನು ನಿಮಗೆ ನಿಶ್ಚಯಿಸಿದ ನಿಮ್ಮ ಧನವನ್ನು ಬುದ್ಧಿ ಪಕ್ವತೆ ಇಲ್ಲದವರಿಗೆ ವಹಿಸಿಕೊಡಬೇಡಿರಿ.ಆದರೆ ಅದರಿಂದ ಅವರಿಗೆ ಉಣ್ಣಲು ಮತ್ತು ಉಡಲು ಕೊಡಿರಿ ಹಾಗೂ ಅವರೊಂದಿಗೆ ಸದುಪದೇಶದ ಮಾತನ್ನು ಆಡಿರಿ.

**ನಮಾಝಿನಲ್ಲಿ ಸಂತೋಷ ಮತ್ತು ಸಂತೃಪ್ತಿಯೂ ದೇವತ್ವ ದಾಸತ್ವದ ಸಂಬಂಧದಿಂದ ಉಂಟಾಗುತ್ತದೆ. ಎಲ್ಲಿಯತನಕ ತಾನು ಅಸಹಾಯಕ ಮತ್ತು ಅಶಕ್ತ ಎಂಬ ಅರಿವು ಉಂಟಾಗುವುದಿಲ್ಲವೋ ಹಾಗೂ ಅವನ ಮುಂದೆ ಬಾಗವುದಿಲ್ಲವೋ ಅಲ್ಲಿಯವರೆಗೆ ಅವನ ಅನುಗ್ರಹ ಮತ್ತು ಆಶ್ರಯ ದೊರೆಯುವುದಿಲ್ಲ. ಅವನ ಮುಂದೆ ಬಾಗಿದರೆ ಮಾತ್ರ ಉನ್ನತ ದರ್ಜೆಯ ಸಂತೋಷ ಲಭಿಸುತ್ತದೆ. ಅದು ಪಾರಿಪಾಲಕನ ಹಕ್ಕಾಗಿದೆ. ಅದಕ್ಕಿಂತ ಮಿಗಿಲಾದ ಸಂತೋಷ ಬೇರೊಂದಿಲ್ಲ.**

## ಸಯ್ಯದುನಾ ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಅಧ್ಯಾಪನೆಗಳು

### ನಮಾಝ್ ಕಾರ್ಯಗಳ ಯಥಾರ್ಥತೆ

ನಮಾಝ್ ಕಾರ್ಯಗಳು ವಾಸ್ತವದಲ್ಲಿ ಆಧ್ಯಾತ್ಮಿಕ ಕಾರ್ಯಗಳ ಎರಡು ಭಾಗಗಳಾಗಿವೆ. ಮನುಷ್ಯನು ಅಲ್ಲಾಹನ ಮುಂದೆ ನಿಲ್ಲಬೇಕಾಗುತ್ತದೆ. ನಿಲ್ಲುವಿಕೆಯೂ ಸೇವಾ ಭಾವನೆಯಿಂದ ಕೂಡಿರಬೇಕು. ಅದರ ಎರಡನೆಯ ಭಾಗವಾದ ರುಕು ಅಲ್ಲಾಹನ ಎಲ್ಲಾ ಆದೇಶದ ಪಾಲನೆಯ ಸಿದ್ಧತೆಗೋಸ್ಕರ ತಲೆ ಬಾಗಿಸುವುದಾಗಿದೆ ಮತ್ತು ಸಾಷ್ಟಾಂಗ ಪ್ರಣಾಮವು ಅಲ್ಲಾಹನಿಗಾಗಿ ತನ್ನ ಅಸ್ತಿತ್ವವನ್ನೇ ಅರ್ಪಿಸುವುದಾಗಿದೆ. ಅದು ಆರಾಧನೆಯ ಮೂಲ ಉದ್ದೇಶವಾಗಿದೆ. ಈ ಕಾರ್ಯಗಳು ಅಲ್ಲಾಹನು ತನ್ನ ಸ್ಮರಣೆಗೋಸ್ಕರ ನಿಯೋಜಿಸಿದ್ದಾನೆ. ಆದುದರಿಂದ ಆಧ್ಯಾತ್ಮಿಕ ಉನ್ನತಿಗಾಗಿ ಒಂದು ಬಾಹ್ಯ ರೀತಿಯೂ ತೋರಿಸಿದ್ದಾನೆ. ಈ ಬಾಹ್ಯ ರೀತಿಯಲ್ಲಿ (ಅದು ಅಂತರಂಗ ಮತ್ತು ಬಹಿರಂಗ ಕಾರ್ಯಗಳ ಒಂದು ಪ್ರತಿಬಿಂಬವಾಗಿದೆ) ಕೇವಲ ಕಾಟಾಚಾರ ರೂಪದಲ್ಲಿ ಒಂದು ಭಾರ ಎಂದು ತಿಳಿದುಕೊಂಡು ನಿರ್ವಹಿಸುವುದಾದರೆ ನೀವೇ ಹೇಳಿ ಹೇಗೆ ಸಂತೋಷ ಸಂತೃಪ್ತಿ ದೊರೆಯಬಹುದು? ಸಂತೋಷ ಸಂತೃಪ್ತಿ ದೊರೆಯದೆ ಅದರ ವಾಸ್ತವ ತಿಳಿಯದು. ಅದು ತನ್ನ ಅಸ್ತಿತ್ವವನ್ನೇ ಅರ್ಪಿಸಿ, ಹೃದಯವು ವಿನಯಾನ್ವಿತವಾಗಿ ಆತ್ಮವು ಉಚ್ಚರಿಸಬೇಕು. ಆಗ ಒಂದು ಸಂತೃಪ್ತಿ ಮತ್ತು ಪ್ರಕಾಶ ಹಾಗೂ ಸಂತೋಷ ದೊರೆಯುತ್ತದೆ. ಅದರ ತಾತ್ಪರ್ಯವೇನೆಂದರೆ ನಮಾಝಿನಲ್ಲಿ ಸಂತೋಷ ಸಂತೃಪ್ತಿಯೂ ದೇವತ್ವ ದಾಸತ್ವದ ಸಂಬಂಧದಿಂದ ಉಂಟಾಗುತ್ತದೆ. ಎಲ್ಲಿಯತನಕ ತಾನು ಅಸಹಾಯಕ ಮತ್ತು ಅಶಕ್ತ ಎಂಬ ಅರಿವು ಉಂಟಾಗುವುದಿಲ್ಲವೋ ಹಾಗೂ ಅವನ ಮುಂದೆ ಬಾಗುವುದಿಲ್ಲವೋ ಅಲ್ಲಿಯವರೆಗೆ ಅವನ ಅನುಗ್ರಹ ಮತ್ತು ಆಶ್ರಯ ದೊರೆಯುವುದಿಲ್ಲ. ಅವನ ಮುಂದೆ ಬಾಗಿದರೆ ಮಾತ್ರ ಉನ್ನತ ದರ್ಜೆಯ ಸಂತೋಷ ಲಭಿಸುತ್ತದೆ. ಅದು ಪಾರಿಪಾಲಕನ ಹಕ್ಕಾಗಿದೆ. ಅದಕ್ಕಿಂತ ಮಿಗಿಲಾದ ಸಂತೋಷ ಬೇರೊಂದಿಲ್ಲ.

### ಯಥಾರ್ಥವಾದ ನಮಾಝ್

ಆ ಸ್ಥಾನದಲ್ಲಿ ಮಾನವನ ಆತ್ಮ ತನ್ನ ಅಸ್ತಿತ್ವವನ್ನೇ ಕಳೆದುಕೊಂಡು ಅಲ್ಲಾಹನೆಡೆ ಒಂದು ಸರೋವರದಂತೆ ಹರಿಯುತ್ತದೆ ಮತ್ತು ಅಲ್ಲಾಹನ ಹೊರತು ಬೇರೆ ದಿಕ್ಕು ತೋಚದಂತಾಗುತ್ತದೆ. ಆಗ ಅಲ್ಲಾಹನ ಪ್ರೀತಿ ಅವನ ಮೇಲೆ ಎರಗುತ್ತದೆ. ಆ ಮಿಲನ ಸಮಯ ಆ ಎರಡು ಕಡೆಯ ಉತ್ಸಾಹ  ಪರಿಪಾಲಕನಾದ ಅಲ್ಲಾಹನ ಉತ್ಸಾಹ ಮತ್ತು ಕೆಳಗಿನಿಂದ ದಾಸನ ಉತ್ಸಾಹ ಸಮ್ಮಿಳಿತಗೊಳ್ಳುತ್ತದೆ. ಆಗ ಒಂದು ವಿಶೇಷ ರೀತಿಯ ಭಾವನೆ ಉಂಟಾಗುತ್ತದೆ. ಅದರ ಹೆಸರು "ಸಲಾತ್" ಆಗಿದೆ. ಆ ಸಲಾತ್ (ನಮಾಝ್) ಪಾಪಗಳನ್ನು ಭಸ್ಮಗೊಳಿಸುತ್ತದೆ ಮತ್ತು ಅದರ ಜಾಗದಲ್ಲಿ ಒಂದು ಪ್ರಕಾಶ ಹಾಗೂ ಹೊಳಪು ಬಿಟ್ಟು ಹೋಗುತ್ತದೆ. ಅದು ದಾಸನ ಮಾರ್ಗದಲ್ಲಿ ಬರುವ ಎಲ್ಲ ಅಪಾಯಗಳ, ಕಠಿಣತೆಗಳ ಸಮಯದಲ್ಲಿ ಪ್ರಕಾಶಮಯ ದೀಪವಾಗಿ ನೆರವಾಗುತ್ತದೆ. ಎಲ್ಲ ರೀತಿಯ ಕಸಕಡ್ಡಿಗಳನ್ನು ಮತ್ತು ಎಡರು ತೊಡರುಗಳನ್ನು ದೂರ ಮಾಡುತ್ತದೆ. ಅದರಿಂದ ರಕ್ಷಿಸುತ್ತದೆ. ಅಂತಹ ದೆಸೆಯೇ- **"ಇನ್ನಸ್ಸಲಾತ್ ತನ್‌ಹಾ ಅನಿಲ್ ಫಹಶಾಯಿ ವಲ್-ಮುನ್ಕರಿ"** (ಅಲ್-ಅನ್‌ಕಬೂತ್ -46) ಸೂಚಕವಾಗುತ್ತದೆ. ಏಕೆಂದರೆ ಆ ಪ್ರಕಾಶಮಯ ದೀಪವು ಅವನ ಕೈಯಲ್ಲಿ ಅಲ್ಲ. ಅವನ ಹೃದಯದಲ್ಲಿ ಸ್ಥಾಪಿತವಾಗಿರುತ್ತದೆ. ಅದು ಪರಿಪೂರ್ಣ ವಿನಯ, ಪರಿಪೂರ್ಣ ಸಮರ್ಪಣೆ, ಅನುಸರಣೆಯಿಂದ ದೊರೆಯುತ್ತದೆ. ಆಗ ಅವನಿಗೆ ಪಾಪಗಳ ಕಡೆ ವಾಲಲು ಹೇಗೆ ಸಾಧ್ಯ. ನಿರಾಕರಣೆಯ ಭಾವವೇ ಉಂಟಾಗುವುದಿಲ್ಲ. ದುವರ್ತನೆ ಕಡೆ ದೃಷ್ಟಿಯೇ ಬೀಳುವುದಿಲ್ಲ. ಆಗ ಉಂಟಾಗುವಂತ ಸಂತೋಷ ಸಂತೃಪ್ತಿ ವರ್ಣಿಸಲು ಸಾಧ್ಯವಿಲ್ಲದಂತಾಗುತ್ತದೆ.

### ಬಹುದೇವಾರಾಧನೆಯ ಕಡೆ ವಾಲುವಿಕೆ

ಈ ಮಾತು ನೆನಪಿಡುವಂತಹದ್ದೇ. ಯಥಾರ್ಥವಾದ ನಮಾಝ್ ಪ್ರಾರ್ಥನೆಯಿಂದಲೇ ಪಡೆಯಬಹುದಾಗಿದೆ. ಅಲ್ಲಾಹನ ಹೊರತಾಗಿ ಬೇಡುವುದು ಸತ್ಯವಿಶ್ವಾಸಿಯ ಕಾರ್ಯವಲ್ಲ. ಏಕೆಂದರೆ ಪ್ರಾರ್ಥನೆಯ ಹಕ್ಕುದಾರ ಅಲ್ಲಾಹನು ಮಾತ್ರನಾಗಿದ್ದಾನೆ. ಎಲ್ಲಿಯತನಕ ಮನುಷ್ಯನು ಪೂರ್ಣ ರೀತಿಯಲ್ಲಿ ವಿನೀತನಾಗಿ ಅಲ್ಲಾಹನೊಡನೆ ಕೇಳಿಕೊಳ್ಳುವುದಿಲ್ಲವೊ. ಅವನೊಡನೆ ಬೇಡಿಕೊಳ್ಳುವುದಿಲ್ಲವೋ, ನಿಜಾರ್ಥದಲ್ಲಿ ಅವನು ಸತ್ಯ ಮುಸಲ್ಮಾನ ಮತ್ತು ಸತ್ಯವಿಶ್ವಾಸಿ ಎನಿಸಿಕೊಳ್ಳಲು ಅರ್ಹನಲ್ಲ. ಇಸ್ಲಾಮಿನ ಸಾರಾಂಶವೇ ಮನುಷ್ಯನು ತನ್ನೆಲ್ಲ ಆಂತರಿಕ ಶಕ್ತಿಯಾಗಲೀ, ಬಹಿರಂಗ ಶಕ್ತಿಯನ್ನಾಗಲೀ ಎಲ್ಲವೂ ಅಲ್ಲಾಹನಿಗೆ ಅರ್ಪಿಸಬೇಕು. ಯಾವ ರೀತಿ ಒಂದು ಬೃಹತ್ ಎಂಜಿನ್ ಹಲವು ಯಂತ್ರಗಳನ್ನು ನಡೆಸುತ್ತವೆಯೋ ಅದೇ ರೀತಿ ಎಲ್ಲಿಯ ತನಕ ಮನುಷ್ಯನು ತನ್ನ ಪ್ರತಿ ಕಾರ್ಯ ಮತ್ತು ಚಟುವಟಿಕೆಗಳನ್ನು ದೇವ ಸ್ವರೂಪಿ. ಆ ಬೃಹತ್ ಎಂಜಿನಿನ ಅಡಿಯಲ್ಲಿ ಕಾರ್ಯವೆಸಗುವುದಿಲ್ಲವೋ ಅಲ್ಲಾಹನ ಏಕತ್ವ ಸಾರಲು ಹೇಗೆ ಸಾಧ್ಯವಾಯಿತು. ತನ್ನನ್ನು ತಾನು **"ಇನ್ನೀ ವಜ್ಜಿತು ವಜ್‌ಹೀ ಲಿಲ್ಲಝೀ ಫತರ ಸ್ಸಮಾವಾತಿ ವಲ್‌ಆರ್ಝು ಹನೀಫನ್ ವಮಾ ಅನಾ ಮಿನಲ್ ಮುಶ್ರಿಕೀನ್** (ಅಲ-ಅನ್‌ಆಮ್ -80) ಹೇಳುವಾಗ "ಹನೀಫ್" ಎನ್ನಲು ಸಾಧ್ಯವೇ? ಬಾಯಿಯಿಂದ ಉಚ್ಚರಿಸಿದ ಹಾಗೆ ಅವನೆಡೆಯೇ ಲಕ್ಷ್ಯವಿದ್ದರೆ ನಿಸ್ಸಂದೇಹವಾಗಿ ಅವನು ಮುಸ್ಲಿಮನು. ಅವನು ಮೂಮಿನ್ ಮತ್ತು ಹನೀಫ್ ಆಗಿದ್ದಾನೆ. ಆದರೆ ಯಾವ ವ್ಯಕ್ತಿ ಅಲ್ಲಾಹನ ಹೊರತಾಗಿ ಬೇರೆಯವರೊಂದಿಗೆ ಪ್ರಶ್ನಿಸುವನೋ

*(ಪುಟ ಸಂಖೆ 07 ರಲ್ಲಿ ಮುಂದುವರಿಸಲಾಗಿದೆ)*

# ಖುತ್‌ಬ ಜುಮುಅ

**ಏಲೈ ಜನರೇ!! ಅಲ್ಲಾಹನ ತಖ್ವ ಗಳಿಸಿರಿ ಮತ್ತು ತಾಳ್ಮೆ ವಹಿಸಿರಿ......**
**ಅಲ್ಲಾಹನ ತಖ್ವ ಗಳಿಸಿರಿ ಏಕೆಂದರೆ ಅಲ್ಲಾಹನೇ ನಿಮ್ಮೆಲ್ಲರ ಕಾರ್ಯಗಳನ್ನು ತೆರೆಯುವವನೂ ಹಾಗೂ ನಿಮ್ಮೆಲ್ಲರನ್ನು ಪ್ರತಿಫಲ ನೀಡುವವನಾಗಿದ್ದಾನೆ.**

---

**ನಿಮಗಿಂತ ಮುಂಚೆ ಎಂತಹ ಜನರು ಗತಿಸಿ ಹೋಗಿರುವರೆಂದರೆ, ಮನುಷ್ಯನನ್ನು ಹೊಂಡದಲ್ಲಿ ಹೂತು ಹಾಕಲಾಗುತ್ತಿತ್ತು. ಅನಂತರ ಗರಗಸ ಅವನ ತಲೆಯ ಮೇಲಿರಿಸಿ ಅವನನ್ನು ಎರಡು ಹೋಳುಗಳನ್ನಾಗಿ ಮಾಡಲಾಗುತ್ತಿತ್ತು. ಆದರೆ ಇಂತಹ ಹಿಂಸಾಚಾರ ಅವನು ಧರ್ಮ ತ್ಯಾಗ ಮಾಡುವಂತೆ ಮಾಡುತ್ತಿರಲಿಲ್ಲ.**

---

**ಅಲ್ಲಾಹನು ಖಬಾಬರ ಮೇಲೆ ಕಾರುಣ್ಯ ದೋರುವವನಾಗಲಿ. ಅವರು ತಮ್ಮ ಸ್ವಂತ ಇಷ್ಟ ಪ್ರಕಾರ ಮುಸ್ಲಿಮರಾದರು. ಅವರು ಅನಂತರ ಹಿಜ್‌ರತ್ ಮಾಡಿದರು. ಅವರು ಒಬ್ಬ ಮುಜಾಹಿದ್ ಆಗಿ ಜೀವಿಸಿದರು. ಅವರು ಶಾರೀರಿಕವಾಗಿ ಪರೀಕ್ಷೆಗಳಿಗೆ ಗುರಿಯಾದರು. ಯಾರು ಸತ್ಕರ್ಮ ಮಾಡುತ್ತಾನೋ ಅಲ್ಲಾಹನು ಅವನ ಪ್ರತಿಫಲವನ್ನು ನಾಶ ಮಾಡುವುದಿಲ್ಲ.**

---

**ಪ್ರವಾದಿ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮರ ನಿಷ್ಠಾವಂತ ಸಹಾಬಿಯಾದ ಹಝ್ರತ್ ಖಬ್ಬಾಬ್ ಬಿನ್ ಅರತ್(ರ)ರವರ ಜೀವನ ಚರಿತ್ರೆಯ ಪ್ರಸ್ತಾವನೆ**

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **08-05-2020** ರಂದು ನೀಡಿದ **ಜುಮುಅ ಖುತ್‌ಬ**

أَشْهَدُ أَنْ لَّا إِلٰهَ إِلَّا اللّٰهُ وَحْدَهٗ لَا شَرِيكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُولُهٗ

أَمَّا بَعْدُ فَأَعُوذُ بِاللّٰهِ مِنَ الشَّيْطٰنِ الرَّجِيْمِ - بِسْمِ اللّٰهِ الرَّحْمٰنِ الرَّحِيْمِ

اَلْحَمْدُ لِلّٰهِ رَبِّ الْعَالَمِيْنَ ـ اَلرَّحْمٰنِ الرَّحِيْمِ ـ مٰلِكِ يَوْمِ الدِّيْنِ ـ

اِيَّاكَ نَعْبُدُ وَاِيَّاكَ نَسْتَعِيْنُ ـ اِهْدِنَا الصِّرَاطَ الْمُسْتَقِيْمَ ـ

صِرَاطَ الَّذِيْنَ اَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ ـ

ಈ ದಿನ ನಾನು ಪ್ರಸ್ತಾಪಿಸುವ ಬದರಿ ಸಹಾಬಿಯ ಹೆಸರು ಹಝ್ರತ್ ಖಬಾಬ್ ಬಿನ್ ಅರತ್(ರ). ಅವರು ಬನೂ ಸಅದ್ ಬಿನ್ ಝೈದ್ ಗೋತ್ರದವರಾಗಿದ್ದರು. ಅವರ ಪಿತನ ತಂದೆಯ ಹೆಸರು ಅರತ್ ಬಿನ್ ಜಂದಲ ಎಂದಾಗಿತ್ತು. ಅವರ ಉಪನಾಮ ಅಬೂ ಅಬ್ದುಲ್ಲಾ ಮತ್ತೆ ಕೆಲವರ ಪ್ರಕಾರ ಅಬೂ ಮುಹಮ್ಮದ್ ಮತ್ತು ಅಬೂಯಹ್ಯಾ ಎಂದಾಗಿತ್ತು. ಅಜ್ಞಾನ ಕಾಲದಲ್ಲಿ ಅವರನ್ನು ಗುಲಾಮರನ್ನಾಗಿ ಮಾಡಿ ಮಕ್ಕದಲ್ಲಿ ಮಾರಾಟ ಮಾಡಲಾಗಿತ್ತು. ಅವರು ಬನೂ ಝೊಹ್ರರಿಗೆ ಪ್ರತಿಜ್ಞಾ ಬದ್ಧರಾದರು. ಪ್ರಾರಂಭದಲ್ಲಿ ಮುಸ್ಲಿಮರಾದವರಲ್ಲಿ ಅವರು ಆರನೆಯವರಾಗಿದ್ದರು. ಮುಸ್ಲಿಮರೆಂದು ಬಹಿರಂಗವಾಗಿ ಹೇಳಿದ ಕಾರಣ ಕಠಿಣವಾದ ಕಷ್ಟಗಳಿಗೆ ಪಾತ್ರರಾದವರಲ್ಲಿ ಅವರು ಮೊದಲಿಗರಾಗಿದ್ದರು. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ದಾರ್ ಅರ್‌ಖಮ್‌ಗೆ ಹೋಗುವ ಮೊದಲೇ ಹಝ್ರತ್ ಖಬಾಬ್ ಮುಸ್ಲಿಮರಾಗಿದ್ದರು. (ಅತ್ತಬಖಾತುಲ್ ಕುಬ್ರ ಲಿಇಬ್ನೆ ಸಅದ್, ಸಂಪುಟ-3, ಪುಟ-121-122, ಖಬ್ಬಾಬ್ ಬಿನುಲ್ ಅರತ್, ದಾರುಲ್ ಕುತುಬ್ ಇಲ್‌ಮೀಯ ಬೈರೂತ್ 1990, ಅಲ್‌ಅಸಾಬ ಫೀ ತಮೀಝಿಸ್ಸಹಾಬ, ಸಂಪುಟ-2, ಪುಟ-221, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 1995, ಉಸದುಲ್‌ಗಾಬ ಫೀ ಮಾರಿಫತಿಸ್ಸಹಾಬ, ಸಂಪುಟ-2, ಪುಟ-147, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2003)

ಮುಜಾಹಿದ್ ಹೇಳುತ್ತಾರೆ: ಪ್ರಾರಂಭದಲ್ಲಿ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವಸಲ್ಲಮರನ್ನು ಸ್ವೀಕರಿಸುವರಲ್ಲಿ: ಹಝ್ರತ್ ಅಬೂಬಕ್ಕರ್(ರ), ಹಝ್ರತ್ ಖಬ್ಬಾಬ್(ರ), ಹಝ್ರತ್ ಸುಹೈಬ್(ರ), ಹಝ್ರತ್ ಬಿಲಾಲ್(ರ), ಹಝ್ರತ್ ಅಮ್ಮಾರ್(ರ) ಮತ್ತು ಹಝ್ರತ್ ಸುಮಯ್ಯಾ(ರ) ಅವರಾಗಿದ್ದರು. ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವಸಲ್ಲಮರಿಗೆ ಅಲ್ಲಾಹನು ಅವರ ಚಿಕ್ಕಪ್ಪ ಅಬೂ ತಾಲಿಬ್‌ರವರ ಮುಖಾಂತರ ರಕ್ಷಣೆ ನೀಡಿದನು. ಮತ್ತು ಹಝ್ರತ್ ಅಬೂಬಕ್ಕರ್(ರ) ರವರಿಗೆ ಅವರ ಖೌಮಿನವರು ಸಂರಕ್ಷಣೆ ನೀಡಿದರು. ಏನೇ ಇರಲಿ ಹೀಗೆ ಬರೆಯುವವನು ಒಂದು ವಿಶೇಷ ಸನ್ನಿವೇಶದಡಿ ಬರೆಯುತ್ತಿದ್ದಾನೆ ಆದರೆ ನಿಜವಾದ ವಿಷಯವೇನೆಂದರೆ ಪ್ರವಾದಿ ಮುಹಮ್ಮದ್(ಸ) ಹಾಗೂ ಹಝ್ರತ್ ಅಬೂಬಕ್ಕರ್(ರ) ಅವರೂ ಸಹ ಮಕ್ಕದ ಮುಶ್ರಿಕೀನರ ಹಿಂಸೆಯಿಂದ ಉಳಿದಿರಲಿಲ್ಲ. ಇತಿಹಾಸವೇ ಇದಕ್ಕೆ ಸಾಕ್ಷಿ ಆಗಿದೆ. ಮುಂದೆ ಆತನು ತನ್ನ ಆಲೋಚನೆಯನ್ನು ಪ್ರಸ್ತಾಪಿಸುತ್ತಾ ಬರೆಯುತ್ತಾನೆ ಇವರಿಬ್ಬರು ಉಳಿದುಕೊಂಡರು ಆದರೆ ಇನ್ನುಳಿದವರಿಗೆ ಕಬ್ಬಿಣದ ಕವಚಗಳನ್ನು ಹಾಕಲಾಗಿತ್ತು ಮತ್ತು ಅವರನ್ನು ಸೂರ್ಯನ ತಾಪದಲ್ಲಿ ಸುಡಿಸಲಾಗುತ್ತಿತ್ತು. ಅವರೆಲ್ಲರು ಈ ಕಬ್ಬಿಣ ಹಾಗೂ ಸೂರ್ಯನ ತಾಪವನ್ನು ಸಹಿಸಿಕೊಂಡರು. ಸಅಬಿ ಹೇಳುತ್ತಾರೆ: ಹಝ್ರತ್ ಖಬ್ಬಾಬ್(ರ) ಬಹಳ ಸಹಿಸಿಕೊಂಡಿದ್ದರು ಮತ್ತು ಕುಫ್ಫಾರರ ಬೇಡಿಕೆ ಅಂದರೆ ಇಸ್ಲಾಮ್ ಧರ್ಮವನ್ನು ತ್ಯಜಿಸುವುದನ್ನು ಒಪ್ಪಲಿಲ್ಲ. ಆದ್ದರಿಂದ ಅವರ ಬೆನ್ನಿನ ಮೇಲೆ ಬಿಸಿ ಬಿಸಿ ಬಂಡೆಗಲ್ಲನ್ನು ಅವರ ಬೆನ್ನಿನ ಮಾಂಸ ತ್ಯಜಿಸಿ ಹೋಗುವ ತನಕ ಇರಿಸಿದರು. ಇದು ಉಸದುಲ್ ಗಾಬದ ವರದಿ ಆಗಿದೆ.
(ಉಸದುಲ್‌ಗಾಬ ಫೀ ಮಾರಿ ಫತಿಸ್ಸಹಾಬ ಸಂಪುಟ-2, ಪುಟ-147, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2003)

ಹಝ್ರತ್ ಖಬ್ಬಾಬ್(ರ) ಅವರ ಒಂದು ಘಟನೆ ಹಝ್ರತ್ ಉಮರ್(ರ) ರವರು ಇಸ್ಲಾಮ್ ಸ್ವೀಕರಿಸಿದ ಸಂದರ್ಭದಲ್ಲಿ ಸಂಭವಿಸಿತು. ಅದನ್ನು ವಿವರಿಸುತ್ತಾ ಹಝ್ರತ್ ಬಶೀರ್ ಅಹ್ಮದ್ ಸಾಹೆಬ್(ರ) ಸೀರತ್ ಖಾತಮುನ್ನಬೀಯೀನ‌ನಲ್ಲಿ ಹೀಗೆ ಪ್ರಸ್ತಾಪಿಸಿದ್ದಾರೆ: ಇನ್ನೂ ಹಝ್ರತ್ ಹಮ್‌ಝಾ(ರ) ಅವರು ಇಸ್ಲಾಮ್ ಸ್ವೀಕರಿಸಿ ಕೆಲವೇ ದಿನಗಳಾಗಿತ್ತು ಆಗ ಅಲ್ಲಾಹನು ಮುಸ್ಲಿಮರಿಗೆ ಇನ್ನೊಂದು ಸಂತೋಷದ ಸೌಭಾಗ್ಯ ತೋರಿಸಿದನು ಅಂದರೆ ಇಸ್ಲಾಮಿನ ಕಡು ವಿರೋಧಿಯಾದ ಹಝ್ರತ್ ಉಮರ್(ರ) ಮುಸ್ಲಿಮರಾದರು. ಅವರು ಇಸ್ಲಾಮ್ ಸ್ವೀಕರಿಸಿದ ಘಟನೆಯು ಬಹಳ ಮನೋಹರವಾಗಿದೆ. ಅನೇಕ ಜನರು ಇದನ್ನು ಕೇಳಿದ್ದಿರಿ ಮತ್ತು ಓದಿರುವಿರಿ ಆದರೆ ಈ ಸಂದರ್ಭದಲ್ಲಿ ನಾನು ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹೆಬ್ ನೀಡಿರುವ ವಿವರವನ್ನು ಸಹ ಪ್ರಸ್ತಾಪಿಸುವೆನು ಇದನ್ನು ವಿವರಿಸುವುದು ಇವರ ಇತಿಹಾಸಕ್ಕೆ ಬಹಳ ಅವಶ್ಯಕವಾಗಿದೆ. ಹಝ್ರತ್ ಉಮರ್(ರ) ರವರ ಸ್ವಭಾವವೂ ಬಹಳ ಕಠೋರ ಸ್ವಭಾವವಾಗಿತ್ತು ಮತ್ತು ಇಸ್ಲಾಮ್ ಧರ್ಮದ ವಿರೋಧದಲ್ಲಿ ಅವರು ಇನ್ನಷ್ಟು ಕಠೋರಾಗಿದ್ದರು. ಹೀಗಾಗಿ ಹಝ್ರತ್ ಉಮರ್(ರ) ಇಸ್ಲಾಮ್ ಸ್ವೀಕರಿಸುವ ಮೊದಲು ಬಡ ಮುಸ್ಲಿಮರಿಗೆ ಬಹಳ ಹಿಂಸೆ ನೀಡುತ್ತಿದ್ದರು. ಹಿಂಸೆ ನೀಡುತ್ತಾ ಅವರು ಆಯಾಸಗೊಂಡರು. ಇವರೆಲ್ಲರು ಹಿಂದಿರುಗಲು ಸಾಧ್ಯವಿಲ್ಲ ಎಂದು ಭಾವಿಸಿ ಇಸ್ಲಾಮ್ ಧರ್ಮದ ಸಂಸ್ಥಾಪಕರನ್ನೆ

ಕೊಂದು ಹಾಕಬೇಕೆಂದು ಯೋಚಿಸಿದರು. ಈ ಯೋಚನೆ ಬಂದ ತಕ್ಷಣವೇ ಅವರು ತಮ್ಮ ಖಡ್ಗವನ್ನು ತೆಗೆದುಕೊಂಡು ಮನೆಯಿಂದ ಪ್ರವಾದಿ ಸಲ್ಲಲ್ಲಾಹು ಅಲೈಹಿವಸಲ್ಲಮರನ್ನು ಹುಡುಕಾಡುತ್ತಾ ಹೊರಟರು. ದಾರಿಯಲ್ಲಿ ಓರ್ವ ವ್ಯಕ್ತಿ ಹಝ್ರತ್ ಉಮರ್(ರ) ರವರು ಖಡ್ಗವನ್ನು ತೆಗೆದುಕೊಂಡು ಹೋಗುತಿದ್ದದ್ದನ್ನು ಕಂಡು ಕೇಳಿದನು. ಉಮರ್! ಎಲ್ಲಿಗೆ ಹೋಗುತ್ತಿದ್ದೀರಿ? ಎಂದು ಅದಕ್ಕೆ ಉಮರ್(ರ) ಉತ್ತರಿಸಿದರು. ಮುಹಮ್ಮದ್(ಸ) ಅವರನ್ನು ಮುಗಿಸಲು ಹೋಗುತ್ತಿದ್ದೇನೆ. ಅದಕ್ಕೆ ಆತನು ಹೇಳಿದನು ಏನು ನೀನು ಅವರನ್ನು ಕೊಂದು ಬನೂ ಅಬ್ದ್ ಮನಾಫ ಅವರಿಂದ ಉಳಿಯಲು ಸಾಧ್ಯವೇ? ಮೊದಲು ನೀವು ನಿಮ್ಮ ಮನೆಯ ಕಡೆ ಗಮನ ನೀಡಿರೀ. ನಿಮ್ಮ ಸಹೋದರಿ ಹಾಗೂ ನಿಮ್ಮ ಭಾವ ಮುಸ್ಲಿಮರಾಗಿದ್ದಾರೆ. ಇದಕ್ಕೆ ಹಝ್ರತ್ ಉಮರ್(ರ) ತಕ್ಷಣ ತಿರುಗಿ ನೋಡಿ, ತನ್ನ ಸಹೋದರಿಯಾದ ಫಾತಿಮರವರ ಮನೆಗೆ ತೆರಳಿದರು. ಮನೆಯ ಹತ್ತಿರ ತಲುಪಿದಾಗ ಮನೆಯ ಒಳಗಿನಿಂದ ಪವಿತ್ರ ಖುರ್‌ಆನಿನ ಫಠಣೆಯ ಧ್ವನಿ ಕೇಳಿಸಿತು. ಅದನ್ನು ಖಬ್ಬಾಬ್ ಬಿನ್ ಅಲ್‌ಅರತ್(ರ) ಸ್ವಗಸಾಗಿ ಪಠಿಸುತ್ತಿದ್ದರು. ಈ ಧ್ವನಿಯನ್ನು ಉಮರ್ ಆಲಿಸಿದಾಗ ಅವರ ಸಿಟ್ಟು ಇನ್ನಷ್ಟು ಜಾಸ್ತಿ ಆಯಿತು. ಅವರು ಬೇಗನೆ ಮನೆ ಒಳಗೆ ಪ್ರವೇಶಿಸಿದರು ಆದರೆ ಅವರು ಮನೆಯೊಳಗೆ ಪ್ರವೇಶಿಸುತ್ತಿರುವ ಶಬ್ದವನ್ನು ಕೇಳಿ ಹಝ್ರತ್ ಖಬ್ಬಾಬ್ ಬಚ್ಚಿಟ್ಟುಕೊಂಡರು. ಫಾತಿಮಾರವರು ಪವಿತ್ರ ಖುರ್‌ಆನಿನ ಆ ಪತ್ರಗಳನ್ನು ಬಚ್ಚಿಟ್ಟರು. ಹಝ್ರತ್ ಉಮರ್(ರ) ರವರ ಸಹೋದರಿಯ ಹೆಸರು ಫಾತಿಮಾ ಆಗಿತ್ತು. ಹಝ್ರತ್ ಉಮರ್(ರ) ಮನೆಯೊಳಗೆ ಬಂದ ತಕ್ಷಣ ತಮ್ಮ ಸಹೋದರಿಯನ್ನು ಪ್ರಶ್ನಿಸಿದರು ನೀವು ನಿಮ್ಮ ಧರ್ಮ ಪರಿವರ್ತನೆ ಮಾಡಿಕೊಂಡಿದ್ದೀರಿ ಎಂದು ಆಲಿಸಿದ್ದೇನೆ. ಇದನ್ನು ಹೇಳಿ ಅವರು ತಮ್ಮ ಭಾವ ಹಝ್ರತ್ ಸಯೀದ್ ಬಿನ್ ಝ್ಯೈದ್(ರ) ಅವರ ಕಡೆ ಧಾವಿಸಿದರು ಇದನ್ನು ನೋಡಿ ಫಾತಿಮ ತಮ್ಮ ಪತಿಯನ್ನು ರಕ್ಷಿಸಲು ಮುಂದಾದಾಗ ಅವರು ಗಾಯಗೊಂಡರು ಆದರೂ ಸಹ ಅವರು ಬಹಳ ಧೈರ್ಯದಿಂದ ಹೇಳಿದರು. ಹೌದು ಉಮರ್! ನಾನು ಮುಸ್ಲಿಮರಾಗಿದ್ದೇವೆ ನಿಮ್ಮ ಕೈಯಲ್ಲಿ ಏನು ಮಾಡಲು ಸಾಧ್ಯವೋ ಅದನ್ನು ಮಾಡಿರಿ. ನಾವು ಈಗ ಇಸ್ಲಾಮ್ ತ್ಯಜಿಸುವುದಿಲ್ಲ. ಹಝ್ರತ್ ಉಮರ್(ರ) ಬಹಳ ಕಠು ಸ್ವಭಾವದವರಾಗಿದ್ದರೂ ಮನಸ್ಸಿನಲ್ಲಿ ಬಹಳ ಮೃಧು ಸ್ವಭಾವದವರೂ ಆಗಿದ್ದರು ಈ ಸ್ವಭಾವವು ಕೆಲವೊಮ್ಮೆ ಕಾಣಿಸುತ್ತಿತ್ತು. ತಮ್ಮ ಸಹೋದರಿಯ ಈ ಧೈರ್ಯದ ಮಾತುಗಳನ್ನು ಆಲಿಸಿ ಅವರ ಕಡೆ ನೋಡಿದಾಗ ಅವರ ಸಹೋದರಿ ರಕ್ತದಲ್ಲಿ ಮುಳುಗಿದ್ದರು. ಈ ದೃಶ್ಯ ಹಝ್ರತ್ ಉಮರ್(ರ) ರವರ ಮೇಲೆ ಒಂದು ವಿಶೇಷ ಪ್ರಭಾವವನ್ನು ಬೀರಿತು. ಸ್ವಲ್ಪ ಹೊತ್ತು ನಿಶಬ್ಧರಾಗಿ ಸಹೋದರಿಯನ್ನು ಕೇಳಿದರು: ನನಗೆ ನೀವು ಪಠಿಸುತ್ತಿದ್ದುದ್ದನ್ನು ತೋರಿಸಿರಿ ಎಂದು. ಅದಕ್ಕೆ ಫಾತಿಮ ಹೇಳಿದರು: ನಾನು ಅದನ್ನು ತೋರಿಸುವುದಿಲ್ಲ ಏಕೆಂದರೆ ನೀವು ಆ ಪತ್ರಗಳನ್ನು ಭಸ್ಮಗೊಳಿಸುತ್ತೀಯ. ಅದಕ್ಕೆ ಉಮರ್ ಹೇಳಿದರು ಇಲ್ಲಾ ನನಗೆ ಅದನ್ನು ತೋರಿಸಿರಿ ನಾನು ಅದನ್ನು ನಿಮಗೆ ಹಿಂದಿರುಗಿಸುವೆನು. ಫಾತಿಮ ಹೇಳಿದರು: ನೀವು ಅಶುದ್ಧರಾಗಿದ್ದೀರ ಪವಿತ್ರ ಖುರ್‌ಆನ್ ಶುದ್ಧ ಸ್ಥಿತಿಯಲ್ಲಿ ಮುಟ್ಟಬೇಕು. ನೀವು ಮೊದಲು ಸ್ನಾನ ಮಾಡಿ ಶುದ್ಧರಾಗಿರಿ ಅನಂತರ ನಾನು ಅದನ್ನು ತೋರಿಸುವೆನು. ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹೆಬ್ ಬರೆಯುತ್ತಾರೆ: ಹೀಗೆ ಸ್ನಾನ ಮಾಡಲು ಹೇಳುವುದಕ್ಕೆ ಕಾರಣ ಉಮರ್(ರ) ರವರ ಕೋಪ ತಣ್ಣಗಾಗಲಿ ಎಂದು ಹೇಳಿರಬಹುದು. ಉಮರ್(ರ) ಸ್ನಾನ ಮಾಡಿ ಬಂದಾಗ ಫಾತಿಮಾ ಅವರಿಗೆ ಪವಿತ್ರ ಖುರ್‌ಆನಿನ ಆ ಕಾಗದಗಳನ್ನು ನೀಡಿದರು. ಅವರು ಅದನ್ನು ಆಲಿಸಿದಾಗ ಸೂರ ತಾಹದ ಪ್ರಾರಂಭದ ವಚನಗಳಿದ್ದವು. ಹಝ್ರತ್ ಉಮರ್(ರ) ಅವರು ಅದನ್ನು ಬಹಳ ಗಾಂಭೀರ್ಯದಿಂದ ಆಲಿಸಿದಾಗ ಅದರ ಒಂದೊಂದು ಅಕ್ಷರಗಳು ಅವರ ಮನಸ್ಸಿನಲ್ಲಿ ಪ್ರಭಾವ ಬೀರುತ್ತಿತ್ತು. ಅದನ್ನು ಆಲಿಸುತ್ತಾ ಹಝ್ರತ್ ಉಮರ್(ರ) ಈ ವಚನಕ್ಕೆ ತಲುಪಿದರು:

**ಇನ್ನನಿ ಅನಲ್ಲಾಹು ಲಾ ಇಲಾಹ ಇಲ್ಲಾ ಅನಾ ಫಾಬುದೂನ. ವಅಖಿಮಿಸ್ಸಲಾತ ಲಿಝಿಕ್ರಿ. ಇನ್ನ ಸಾಅತ ಆತಿಯರುನ್ ಅಕಾದು ಉಖ್‌ಫೀಹಾ ಲಿತುಜ್‌ಝಾ ಕುಲ್ಲು ನಫ್‌ಸಿನ್ ಬಿಮಾ ತಸ್‌ಆ. (ತಾಹಾ:15–16)**

ಅಂದರೆ: 'ದಿಟವಾಗಿಯೂ ನಾನೇ ಅಲ್ಲಾಹ್. ನನ್ನ ಹೊರತು ಬೇರೆ ದೇವನಿಲ್ಲ. ಆದ್ದರಿಂದ ನನ್ನನ್ನು ಆರಾಧಿಸು; ನನ್ನ ಸ್ಮರಣೆಗೋಸ್ಕರ ಪ್ರಾರ್ಥನೆಯನ್ನು ನಿಷ್ಠೆಯಿಂದ ಸಲ್ಲಿಸು. 'ಖಂಡಿತವಾಗಿಯೂ ಅಂತ್ಯದಿನ ಬರಲಿದೆ. ಪ್ರತಿಯೊಂದು ಆತ್ಮ ಅದರ ಕರ್ಮಕ್ಕೆ ತನ್ನ ಪ್ರತಿಫಲವನ್ನು ಪಡೆಯುವಂತಾಗಲು ನಾನು ಅದನ್ನು ಪ್ರಕಟಪಡಿಸುವೆನು.

ಹಝ್ರತ್ ಉಮರ್(ರ) ಈ ವಚನವನ್ನು ಆಲಿಸಿದಾಗ ಅವರ ಕಣ್ಣು ತೆರೆದಂತಾಯಿತು. ಅವರು ಹೇಳಿದರು ಇದು ಎಂತಹ ವಿಸ್ಮಯವಾದ ಮತ್ತು ಶುಕ್ತ ವಾಕ್ಯಗಳಾಗಿವೆ. ಖಬ್ಬಾಬ್(ರ) ಈ ಪದಗಳನ್ನು ಆಲಿದಾಗ ಅವರು ಹೊರಬಂದು ಅಲ್ಲಾಹನಲ್ಲಿ ಕೃತಜ್ಞತೆ ಹೇಳಿದರು. ಇದು ಪ್ರವಾದಿ(ಸ) ರವರ ದುಆವಿನ ಪ್ರತಿಫಲವಾಗಿದೆ ಏಕೆಂದರೆ ಅಲ್ಲಾಹನಾಣೆ! ಕಳೆದ ದಿವಸ ನಾನು ಪ್ರವಾದಿ ಸಲ್ಲಲ್ಲಾಹು ಅಲೈಹಿವಸಲ್ಲಮರು ಹೀಗೆ ದುಆ ಮಾಡುತ್ತಿರುವುದನ್ನು ಆಲಿಸಿದ್ದೇನೆ ಓ ಅಲ್ಲಾಹನೇ!! ನೀನು ಉಮರ್ ಬಿನ್ ಖತ್ತಾಬ್ ಅಥವಾ ಉಮರ್ ಬಿನ್ ಹಿಶ್ಶಾಮ್ ಅಂದರೆ ಅಬೂಜಹಲ್ ಇವರಿಬ್ಬರಲ್ಲಿ ಯಾರಿಗಾದರು ಇಸ್ಲಾಮ್ ನೀಡು. ಹಝ್ರತ್ ಉಮರ್(ರ) ರವರಿಗೆ ಪ್ರವಾದಿ(ಸ) ಅವರ ಸತ್ಯತೆಯು ಸ್ಪಷ್ಟವಾದಾಗ ಅಲ್ಲಿ ನಿಲ್ಲಲು ಕಷ್ಟವಾಗುತ್ತಿತ್ತು. ಅವರು ಖಬ್ಬಾಬ್(ರ) ರವರಿಗೆ ಹೇಳಿದರು ನನಗೆ ತಕ್ಷಣ ಪ್ರವಾದಿ(ಸ) ಎಲ್ಲಿದ್ದಾರೆ ಎಂದು ತಿಳಿಸಿರಿ ಎಂದು ಹೇಳಿದರು. ಅವರು ಎಷ್ಟರ ಮಟ್ಟಿಗೆ ಪ್ರಭಾವಿತರಾಗಿದ್ದರು ಎಂದರೆ ಅವರ ಕೈಯಲ್ಲಿದ್ದ ಖಡ್ಗವನ್ನು ಸಹ ಒಳಗಿರಿಸಲಿಲ್ಲ ಹಾಗೆಯೇ ತೆಗೆದುಕೊಂಡು ಹೋದರು. ಏನೇ ಇರಲಿ ಆ ಕಾಲದಲ್ಲಿ ಪ್ರವಾದಿ ಸಲ್ಲಲ್ಲಾಹು ಅಲೈಹಿವಸಲ್ಲಮರು ದಾರೆ ಅರ್‌ಖಮ್‌ನಲ್ಲಿ ವಾಸಿಸುತ್ತಿದ್ದರು. ಹೀಗಾಗಿ ಹಝ್ರತ್ ಖಬ್ಬಾಬ್(ರ) ಅವರಿಗೆ ಅಲ್ಲಿನ ವಿಳಾಸವನ್ನೀಡಿದರು. ಉಮರ್(ರ) ಅಲ್ಲಿ ಹೋಗಿ ಬಾಗಿಲನ್ನು ಜೋರಾಗಿ ಬಡಿದರು. ಸಹಾಬರವರು ಬಾಗಿಲಿನಿಂದ ನೋಡಿದಾಗ ಅದು ಉಮರ್(ರ) ತಮ್ಮ ಖಡ್ಗವನ್ನು ಕೈಯಲ್ಲಿರಿಸಿ ನಿಂತಿದ್ದರು. ಹೀಗಾಗಿ ಅವರು ಬಾಗಿಲನ್ನು ತೆರೆಯಲು ಹಿಂಜರಗಿದರು ಆದರೆ ಪ್ರವಾದಿ(ಸ) ಹೇಳಿದರು: ಬಾಗಿಲು ತೆಗೆಯಿರಿ ಎಂದರು ಹಝ್ರತ್ ಹಮ್‌ಝ(ರ) ಸಹ ಹೇಳಿದರು ಬಾಗಿಲು ತೆರೆಯಿರಿ ಆತನು ಒಳ್ಳೆಯ ನಿಯ್ಯತ್ತಿನಿಂದ ಬಂದಿದ್ದರೆ ಒಳ್ಳೆಯದು ಇಲ್ಲವಾದರೆ ಅಲ್ಲಾಹನ ಆಣೆ ಆತನ ಶಿರವನ್ನು ಕತ್ತರಿಸಿ ಹಾಕುವೆನು. ಬಾಗಿಲು ತೆರೆಯಲಾಯಿತು. ಉಮರ್ ತಮ್ಮ ಖಡ್ಗದೊಂದಿಗೆ ಒಳಗೆ ಪ್ರವೇಶಿಸಿದರು. ಅವರನ್ನು ಕಂಡು ಪ್ರವಾದಿ ಸಲ್ಲಲ್ಲಾಹು ಅಲೈಹಿವಸಲ್ಲಮರು ಹೇಳಿದರು ನೀವು ಇಲ್ಲಿ ಬಂದಿರುವ ಉದ್ದೇಶ ಏನಾಗಿದೆ? ಅಲ್ಲಾಹನ ಆಣೆ ನಾನು ನೋಡುವುದೇನಂದರೆ ನಿಮಗೆ ಅಲ್ಲಾಹನ ನರಕಾಗ್ನಿಗಾಗಿ ಸೃಷ್ಠಿಸಲಿಲ್ಲ. ಉಮರ್(ರ) ಹೇಳಿದರು: ಯಾ ರಸೂಲಲ್ಲಾಹ್!! ನಾನು ಮುಸ್ಲಿಮನಾಗಲು ಬಂದಿರುವೆನು. ಪ್ರವಾದಿ(ಸ) ಅವರು ಈ ಶಬ್ಧಗಳನ್ನು ಕೇಳಿದ ತಕ್ಷಣ ಸಂತೋಷದಿಂದ ಅಲ್ಲಾಹು ಅಕ್‌ಬರ್, ಅಲ್ಲಾಹು ಅಕ್‌ಬರ್ ಎಂದು ಕೂಗಿದರು ಅದೇ ರೀತಿ ಸಹಾಬರವರು ಸಹ ಎಷ್ಟು ಜೋರಾಗಿ ಅಲ್ಲಾಹು ಅಕ್‌ಬರ್ ಎಂದು ಕೂಗಿದರು ಎಂದರೆ ಅಲ್ಲಿನ ಬೆಟ್ಟಗಳಲ್ಲಿ ಅವರ ಧ್ವನಿ ವಿಜ್ರಂಭಿಸುತ್ತಿತ್ತು. (ಸೀರತ್ ಖಾತುಮುನ್ನಬೀಯೀನ್, ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹೆಬ್ ಎಂ.ಎ, ಪುಟ–157–159)

ಹಝ್ರತ್ ಖಬಾಬ್ ಹೇಳುತ್ತಾರೆ: ಒಮ್ಮೆ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವಸಲ್ಲಮರ ಬಳಿ ನಮ್ಮ ತೊಂದರೆಯನ್ನು ಪ್ರಸ್ತಾಪಿಸಿದೆವು. ಆ ಸಂದರ್ಭದಲ್ಲಿ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವಸಲ್ಲಮರು ಕಅಬದ ನೆರಳಲ್ಲಿ ಕುಳಿತುಕೊಂಡಿದ್ದರು. ಆಗ ನಾವು ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರೊಂದಿಗೆ ನಿವೇದಿಸಿದೆವು. ತಾವು ನಮಗೋಸ್ಕರ ಅಲ್ಲಾಹನ ನೆರವನ್ನು ಬೇಡಿಕೊಳ್ಳುವುದಿಲ್ಲವೇ? ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹೇಳಿದರು: ನಿಮಗಿಂತ ಮುಂಚೆ ಎಂತಹ ಜನರು ಗತಿಸಿ ಹೋಗಿರುವರೆಂದರೆ, ಮನುಷ್ಯನನ್ನು ಹೊಂಡದಲ್ಲಿ ಹೂತು ಹಾಕಲಾಗುತ್ತಿತ್ತು. ಅನಂತರ ಗರಗಸ ಅವನ ತಲೆಯ ಮೇಲಿರಿಸಿ ಅವನನ್ನು ಎರಡು ಹೋಳುಗಳನ್ನಾಗಿ ಮಾಡಲಾಗುತ್ತಿತ್ತು. ಆದರೆ ಇಂತಹ ಹಿಂಸಾಚಾರ ಅವನು ಧರ್ಮ ತ್ಯಾಗ ಮಾಡುವಂತೆ ಮಾಡುತ್ತಿರಲಿಲ್ಲ. ಕಬ್ಬಿಣದ ಬಾಚಣಿಗೆಗಳಿಂದ ಮನುಷ್ಯನ ಮಾಂಸವನ್ನು ಎಲುಬುಗಳಿಂದ ಅಥವಾ ಮಾಂಸ ಖಂಡಗಳಿಂದ ಕಿತ್ತು ಹಾಕಲಾಗುತ್ತಿತ್ತು. ಆದರೆ ಈ ಹಿಂಸಾಚಾರ ಆ ಮನುಷ್ಯನನ್ನು ತನ್ನ ಧರ್ಮದಿಂದ ತಡೆಗಟ್ಟುತ್ತಿರಲಿಲ್ಲ. ಅನಂತರ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹೇಳಿದರು: ಅಲ್ಲಾಹನಾಣೆ ಅಲ್ಲಾಹನು ತನ್ನ ಈ ಕೆಲಸವನ್ನು ನಿಶ್ಚಯವಾಗಿಯೂ ಈಡೇರಿಸುವನು. ನಾನು ಆಗಮಿಸಿರುವ ಉದ್ದೇಶವನ್ನು ಈಡೇರಿಸುವನು. ಆಗ ಎಂತಹ ಸ್ಥಿತಿ ಉಂಟಾಗುವುದೆಂದರೆ ಒಬ್ಬನು ಸನಾದಿಂದ ಹಝ್ರತ್ ತನಕ ಸವಾರಿ ಮೃಗದಲ್ಲಿ ಸಂಚರಿಸುವಾಗ ಅವನಿಗೆ ಅಲ್ಲಾಹನ ಹೊರತು ಬೇರೆ ಯಾರ ಬಗ್ಗೆಯೂ ಭಯವಿರಲಾರದು. ಆದರೆ ನೀವು ಆತುರ ಪಡುತ್ತಿದ್ದೀರಿ. ತಾಳ್ಮೆಯಿಂದ ಈ ಕಾರ್ಯ ಈಡೇರುವುದು. ಇದು ಬುಖಾರಿಯ ವರದಿ ಆಗಿದೆ. (ಸಹೀಹ್ ಬುಖಾರಿ ಕಿತಾಬುಲ್ ಮುನಾಖಿಬ್ ಹದೀಸ್–3612, ಮುಜಮುಲ್ ಬಲದಾನ್ ಸಂಪುಟ–2, ಪುಟ–311, ದಾರುಲ್ ಕುತುಬ್ ಇಲ್‌ಮಿಯಾ ಬೈರೂತ್)

ಇನ್ನೊಂದೆಡೆ ಈ ಘಟನೆಯು ಹೀಗೆ ವರದಿ ಆಗಿದೆ: ಹಝ್ರತ್ ಖಬ್ಬಾಬ್(ರ) ವರದಿ ಮಾಡುತ್ತಾರೆ: ನಾನು ಪ್ರವಾದಿ ಸಲ್ಲಲ್ಲಾಹು ಅಲೈಹಿವಸಲ್ಲಮರ ಮುಂದೆ ಹಾಜರಾದೆನು. ಆಗ ರಸೂಲುಲ್ಲಾಹ್(ಸ) ಅವರು ಒಂದು ಮರದ ನೆರಳಿನಲ್ಲಿ ವಿಶ್ರಾಂತಿ ಮಾಡುತ್ತಿದ್ದರು ಆ ಸಂದರ್ಭದಲ್ಲಿ ರಸೂಲುಲ್ಲಾಹ್(ಸ) ಅವರು ತಮ್ಮ ಕೈ ತಲೆ ಕೆಳಗೆ ಇಟ್ಟಿದ್ದರು. ಆಗ ನಾನು ರಸೂಲುಲ್ಲಾಹ್(ಸ)

ಅವರೊಂದಿಗೆ ಹೇಳಿದೆ ಯಾ ರಸೂಲಲ್ಲಾ! ನೀವು ನಮಗೋಸ್ಕರ ನಮ್ಮ ವಿರೋಧಿಗಳ ವಿರುದ್ಧ ಅಲ್ಲಾಹನ ನೆರವನ್ನು ಬೇಡಿಕೊಳ್ಳುವುದಿಲ್ಲವೇ? ಆಗ ರಸೂಲುಲ್ಲಾಹ್(ಸ) ನನ್ನಿಂದ ತಮ್ಮ ಚಹರೆಯನ್ನು ಮೂರು ಬಾರಿ ತಿರುಗಿಸಿಕೊಂಡರು. ನಾನು ಹೇಳಿದಾಗಲೆಲ್ಲ ರಸೂಲುಲ್ಲಾಹ್(ಸ) ತಮ್ಮ ಚಹರೆಯನ್ನು ತಿರುಗಿಸಿಕೊಳ್ಳುತ್ತಿದ್ದರು. ಮೂರನೇಯ ಬಾರಿ ನಾನು ಹೇಳಿದಾಗ ಅವರು ಎದ್ದು ಕುಳಿತುಕೊಂಡು ಹೇಳಿದರು: ಎಲೈ ಜನರೇ!! ಅಲ್ಲಾಹನ ತಖ್ವ ಗಳಿಸಿರಿ ಮತ್ತು ತಾಳ್ಮೆ ವಹಿಸಿರಿ. ಅಲ್ಲಾಹನ ಆಣೆ! ನಿಮಗಿಂತ ಮುಂಚೆ ಎಂತಹ ಜನರು ಗತಿಸಿದ್ದಾರೆ ಎಂದರೆ ಅವರ ತಲೆಯ ಮೇಲೆ ಗರಗಸ ಎರಿಸಲಾಗುತ್ತಿತ್ತು ಆದರೆ ಅವರು ತಮ್ಮ ಧರ್ಮದಿಂದ ಹಿಂಜರಿಯಲಿಲ್ಲ. ಅಲ್ಲಾಹ ತಖ್ವಗಳಿಸಿರಿ. ಅಲ್ಲಾಹನು ನಿಮ್ಮ ಮಾರ್ಗಗಳನ್ನು ತೆರೆಯುವವನಾಗಿದ್ದಾನೆ ಮತ್ತು ನಿಮ್ಮ ಕಾರ್ಯಗಳಲ್ಲಿ ಸಫಲತೆ ನೀಡುವವನಾಗಿದ್ದಾನೆ.

(ಅಲ್‌ಮುಸ್ತದ್‌ರಕ್ ಅಲಸ್ಸಹೀಹೈನ್ ಸಂಪುಟ–3, ಪುಟ–431–432, ಕಿತಾಬ್ ಮಾರಿಫತಿಸ್ಸಹಾಬ ಹದೀಸ್–5643)

ಹಝ್ರತ್ ಖಬ್ಬಾಬ್ ವರದಿ ಮಾಡುತ್ತಾರೆ: ನಾನು ಕಮ್ಮಾರನಾಗಿದ್ದೆ ಮತ್ತು ಆಸ್ ಬಿನ್ ವಾಎಲ್ ನನಗೆ ಸಾಲ ಹಿಂದಿರುಗಿಸಬೇಕಾಗಿತ್ತು. ನಾನು ಆತನ ಬಳಿ ನನ್ನ ಸಾಲದ ಹಣವನ್ನು ಪಡೆಯಲು ಬಂದೆ ಆಗ ಆತನು ಹೇಳಿದನು ನೀನು ಮುಹಮ್ಮದ್(ಸ) ರನ್ನು ತ್ಯಜಿಸುವ ತನಕ ನಾನು ನಿನ್ನ ಸಾಲ ಮರುಪಾವತಿಸುವುದಿಲ್ಲ ಎಂದನು. ನೀನು ಹೀಗೆ ಘೋಷಿಸಬೇಕು ನಾನು ಪ್ರವಾದಿ(ಸ) ಅವರ ಬೈಅತ್ತಿನಡಿ ಇಲ್ಲ ಎಂದು. ಹಝ್ರತ್ ಖಬ್ಬಾಬ್ ಹೇಳುತ್ತಾರೆ ನೀನು ಮರಣ ಹೊಂದಿ ಮತ್ತೆ ಜೀವಂತವಾಗಿ ಮತ್ತೆ ಮರಣ ಹೊಂದಿದರು ಸಹ ನಾನು ಪ್ರವಾದಿ(ಸ) ಅವರನ್ನು ತ್ಯಜಿಸುವುದಿಲ್ಲ. ಆಗ ಆತನು ಹೀಗೆ ಉತ್ತರಿಸಿದನು ನಾನು ಸಹ ಅದೇ ರೀತಿ ಮರಣ ಹೊಂದಿ ಮತ್ತೆ ತನ್ನ ಮಕ್ಕಳ ಬಳಿ ಜೀವಂತವಾಗಿ ಬಂದರೆ ನಾನು ನಿನ್ನ ಸಾಲ ಪಾವತಿಸುವೆನು. ಹಝ್ರತ್ ಖಬ್ಬಾಬ್ ಹೇಳುತ್ತಾರೆ ಅದರ ಬಗ್ಗೆ ಪವಿತ್ರ ಖುರ್‌ಆನಿನಲ್ಲಿ ಒಂದು ವಚನ ಹೀಗೆ ಅವತರಿಸಿತು:

**ಅಫರೈತಲ್ಲಝೀ ಕಫರ ಬಿಆಯಾತಿನಾ ವ ಖಾಲ ಲೂತಯನ್ನ ಮಾಲವ್ವವಲದ. ಅತ್ತಲಅಲ್ ಗೈಬ ಅಮಿತ್ತಖಝ ಇಂದರ್ರಹ್ಮಾನೆ ಅಹ್ದಾ. ಕಲ್ಲಾ ಸನಕ್‌ತುಬು ಮಾ ಯಖೂಲು ವನಮುದ್ದು ಲಹೂ ಮಿನಲ್ ಅಝಾಬಿ ಮದ್ದಾವ್ವ ನರಿಸುಹು ಮಾ ಯಖೂಲು ವ ಯಾತೀನಾ ಫರ್‌ದ.** (ಮರಿಯಮ್:78–81)

ಖಂಡಿತವಾಗಿಯೂ ನನಗೆ ಸಂಪತ್ತು ಮತ್ತು ಸಂತಾನಗಳನ್ನು ನೀಡಲಾಗುವುದು' ಎಂದು ಹೇಳುವವನನ್ನು ನೀನು ಕಂಡಿದ್ದೀಯಾ? ಅವನು ಅಗೋಚರ ಸಂಗತಿಯನ್ನು ಬಲ್ಲನೇ? ಅಥವಾ ಅವನು ದಯಾವಂತನಾದ ಅಲ್ಲಾಹನಿಂದ ಯಾವುದಾದರೂ ವಾಗ್ದಾನವನ್ನು ಪಡೆದಿರುವನೇ? ಎಂದಿಗೂ ಇಲ್ಲ. ಅವನು ಹೇಳುವುದನ್ನು ನಾವು ಬರೆದಿಡುವೆವು ಮತ್ತು ಅವನ ಶಿಕ್ಷೆಯನ್ನು ದೀರ್ಘಗೊಳಿಸುವೆವು. ಯಾವುದರ ಬಗ್ಗೆ ಅವನು ಹೆಮ್ಮೆಯಿಂದ ಹೇಳುತ್ತಾನೋ ಅದಕ್ಕೆ ನಾವು ವಾರಸುದಾರರಾಗುವೆವು. ಅವನು ಒಬ್ಬಂಟಿಗನಾಗಿ ನಮ್ಮ ಬಳಿಗೆ ಬರುವನು. (ಅತ್ತಬಖಾತುಲ್ ಕುಬ್ರ ಲಿಇಬ್ನೆ ಸಅದ್, ಸಂಪುಟ–3, ಪುಟ–122, ದಾರುಲ್ ಕುತುಬ್ ಇಲ್‌ಮಿಯಾ ಬೈರೂತ್ 1990)

ಹಝ್ರತ್ ಖಬಾಬ್ ಕಮ್ಮಾರರಾಗಿದ್ದರು. ಖಡ್ಗಗಳನ್ನು ತಯಾರು ಮಾಡುತ್ತಿದ್ದರು. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಅವರೊಂದಿಗೆ ಬಹಳ ಪ್ರೀತಿಯ ಸಂಬಂಧ ಹೊಂದಿದ್ದರು ಮತ್ತು ಅವರ ಬಳಿಗೆ ಹೋಗುತ್ತಾ ಇದ್ದರು. ಹಝ್ರತ್ ಖಬಾಬರ ಮಾಲಕಿಗೆ ಅದರ ಬಗ್ಗೆ ತಿಳಿದಾಗ ಆಕೆ ಬಿಸಿಯಾದ ಕಬ್ಬಿಣದ ತುಂಡುಗಳನ್ನು ಹಝ್ರತ್ ಖಬಾಬರ ತಲೆಯ ಮೇಲೆ ಇರಿಸುತ್ತಿದ್ದಳು. ಹಝ್ರತ್ ಖಬಾಬ್ ಅದರ ಬಗ್ಗೆ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ತಿಳಿಸಿದಾಗ ಅವರು ಪ್ರಾರ್ಥಿಸಿದರು: ಓ ಅಲ್ಲಾಹ್ ಖಬಾಬನಗೆ ನೆರವು ನೀಡು. ಅನಂತರ ಏನು ಸಂಭವಿಸಿತೆಂದರೆ ಹಝ್ರತ್ ಖಬಾಬರ ಮಾಲಿಕಳಾದ ಸ್ತ್ರೀಯ ತಲೆಯಲ್ಲಿ ಯಾವುದೋ ರೋಗ ಕಾಣಿಸಿತು ಮತ್ತು ಆಕೆ ನಾಯಿಯ ಹಾಗೆ ಬೊಗಳಲು ತೊಡಗಿದಳು. ಆಗ ಅವಳ ತಲೆಯ ಮೇಲೆ ಕಬ್ಬಿಣದಿಂದ ಬರೆಹಾಕಲು ಉಪದೇಶಿಸಲಾಯಿತು. ಆಗ ಹಝ್ರತ್ ಖಬಾಬ್ ಬಿಸಿ ಮಾಡಿದ ಕಬ್ಬಿಣದಿಂದ ಆಕೆಯ ತಲೆಯ ಮೇಲೆ ಬರೆ ಹಾಕುತ್ತಿದ್ದರು. ಆಕೆ ತನ್ನ ತಲೆಯ ಮೇಲೆ ಹಝ್ರತ್ ಖಬಾಬ್ ಮೂಲಕ ಬರೆ ಹಾಕಿಸಿಕೊಳ್ಳಲು ನಿರ್ಬಂಧಿತಳಾದಳು. (ಉಸದುಲ್ ಗಾಬ ಫೀ ಮಾರಿಫತಿಸ್ಸಹಾಬ ಸಂಪುಟ–2, ಪುಟ–148, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2003)

ಅಬೂ ಲೈಲಾ ಕಿಂದಿರವರ ಒಂದು ವರದಿ ಹೀಗಿದೆ ಅವರು ಹೇಳುತ್ತಾರೆ: ಹಝ್ರತ್ ಖಬ್ಬಾಬ್ ಹಝ್ರತ್ ಉಮರ್(ರ) ಅವರ ಬಳಿ ಬಂದಾಗ ಹಝ್ರತ್ ಉಮರ್(ರ) ಅವರಿಗೆ ಸಮೀಪ ಬರಲು ಉಪದೇಶಿಸಿದರು ಏಕೆಂದರೆ ಅಮ್ಮಾರ್ ಬಿನ್ ಯಾಸಿರ್ ಅವರ ಹೊರತು ಈ ಸಭೆಯಲ್ಲಿ ಅವರಿಗಿಂತ ಹೆಚ್ಚು ಅರ್ಹರು ಯಾರೂ ಇರಲಿಲ್ಲ. ಹಝ್ರತ್ ಖಬ್ಬಾಬ್(ರ) ತಮ್ಮ ಬೆನ್ನಿನ ಮೇಲೆ ಮುಶ್ರಿಕೀನರು ನೀಡಿದ ಹಿಂಸೆಯ ಗಾಯಗಳನ್ನು ತೋರಿಸುತ್ತಿದ್ದರು. ಅತ್ತಬಖಾತುಲ್ ಕುಬ್ರಾದ ವರದಿ ಆಗಿದೆ. (ಅತ್ತಬಖಾತುಲ್ ಕುಬ್ರ ಲಿಇಬ್ನೆ ಸಅದ್ ಸಂಪುಟ–3, ಪುಟ–122, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 1990)

ಇನ್ನೊಂದು ಕಡೆ ಸೊಂಟದ ಗಾಯಗಳನ್ನು ತೋರಿಸುವ ಬಗ್ಗೆ ಇನ್ನಷ್ಟು ವಿವರದೊಂದಿಗೆ ಹೀಗೆ ವರದಿ ಆಗಿದೆ. ಶಅಬಿ ಅವರಿಂದ ವರದಿ ಆಗಿದೆ ಒಮ್ಮೆ ಹಝ್ರತ್ ಖಬಾಬ್ ಹಝ್ರತ್ ಉಮರ್‌ರ ಸಮೀಪಕ್ಕೆ ಹೋದಾಗ ಅವರು ಹಝ್ರತ್ ಖಬಾಬರನ್ನು ತಾನು ಕುಳಿತಿದ್ದ ಸ್ಥಳದಲ್ಲಿ ಕುಳ್ಳಿರಿಸಿದರು. ಮತ್ತು ಹೇಳಿದರು: ಭೂಮಿಯ ಮೇಲಿರುವವರಲ್ಲಿ ಖಬಾಬರಿಗಿಂತ ಈ ಸಭೆಗೆ ಅರ್ಹರಾದವರು ಒಬ್ಬನ ಹೊರತು ಬೇರೆ ಯಾರೂ ಇಲ್ಲ. ಹಝ್ರತ್ ಖಬಾಬ್ ಕೇಳಿದರು: ಆ ವ್ಯಕ್ತಿ ಯಾರು? ಹಝ್ರತ್ ಉಮರ್(ರ) ಹೇಳಿದರು: ಆ ವ್ಯಕ್ತಿ ಬಿಲಾಲ್ ಆಗಿದ್ದಾರೆ. ಆಗ ಹಝ್ರತ್ ಖಬಾಬ್ ಹೇಳಿದರು: ಓ ಅಮೀರುಲ್ ಮೂಮಿನೀನ್ ಅವರು ನನಗಿಂತ ಹೆಚ್ಚು ಅರ್ಹರೇನೂ ಅಲ್ಲ. ಏಕೆಂದರೆ ಬಿಲಾಲ್ ಬಹುದೇವಾರಾಧಕರ ವಶದಲ್ಲಿದ್ದಾಗ ಅವರನ್ನು ಯಾರಾದರೊಬ್ಬರ ಸಹಾಯದ ಮೂಲಕ ಅಲ್ಲಾಹನು ರಕ್ಷಿಸುತ್ತಿದ್ದನು. ಆದರೆ ನನ್ನನ್ನು ಸಂರಕ್ಷಿಸುವವರು ಯಾರೂ ಇರಲಿಲ್ಲ. ಒಮ್ಮೆ ನನ್ನ ಸ್ಥಿತಿ ಈ ರೀತಿ ಇತ್ತು. ಜನರು ನನ್ನನ್ನು ಹಿಡಿದರು. ಬೆಂಕಿ ಹೊತ್ತಿಸಿದರು. ಅವರು ನನ್ನನ್ನು ಅದರ ಮೇಲೆ ಮಲಗಿಸಿದರು. ಒಬ್ಬನು ತನ್ನ ಪಾದವನ್ನು ನನ್ನ ಎದೆಯ ಮೇಲೆ ಇರಿಸಿದನು. ಆಗ ನನ್ನ ಸೋಂಟವೇ ನನಗೆ ಬಿಸಿ ಭೂಮಿ ಇಂದ ರಕ್ಷಿಸಿತು. ಅನಂತರ ಅವರು ತಮ್ಮ ಸೊಂಟದಿಂದ ಬಟ್ಟೆ ಎತ್ತಿ ತೋರಿಸಿದರು. (ಅತ್ತಬಖಾತುಲ್ ಕುಬ್ರ ಸಂಪುಟ–3, ಪುಟ–123, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 1990)

ಅಂದರೆ ಬಿಸಿ ಕೆಂಡದ ಮೇಲೆ ಅವರನ್ನು ಮಲಗಿಸಿದಾಗ ಆ ಕೆಂಡವನ್ನು ನಂದಿಸಲು ಯಾವುದೇ ಬೇರೆ ವಸ್ತು ಇರಲಿಲ್ಲ. ನನ್ನ ದೇಹದ ಚರ್ಮ ಮತ್ತು ಚರ್ಬಿಯ ಹೊರತು ಬೇರೆ ಏನೂ ಇರಲಿಲ್ಲ. ಅವು ಕರಗಿ ಬೆಂಕಿಯನ್ನು ನಂದಿಸುತ್ತಿದ್ದುವು.

ಇನ್ನೊಂದು ವರದಿ ಹೀಗೂ ಇದೆ. ಶಅಬಿ ಹೇಳುತ್ತಾರೆ ಹಝ್ರತ್ ಉಮರ್ ಬಿನ್ ಖತ್ತಾಬ್(ರ) ಹಝ್ರತ್ ಖಬ್ಬಾ(ರ) ಅವರೊಂದಿಗೆ ಅವರು ಅನುಭವಿಸಿರುವ ದೌರ್ಜನ್ಯಗಳ ಬಗ್ಗೆ ವಿಚಾರಿಸಿದಾಗ ಹೇಳಿದರು ಯಾ ಅಮೀರುಲ್ ಮುಮಿನೀನ್!! ನನ್ನ ಬೆನ್ನು ನೋಡಿರೀ. ಹಝ್ರತ್ ಉಮರ್(ರ) ಅವರ ಬೆನ್ನನ್ನು ನೋಡಿದಾಗ ಹೇಳಿದರು ನಾನು ಇಂತಹ ಬೆನ್ನು ಯಾರದ್ದು ನೋಡಲಿಲ್ಲ. ಹಝ್ರತ್ ಖಬ್ಬಾಬ್(ರ) ತಿಳಿಸಿದರು ಅಗ್ನಿಯನ್ನು ಹತ್ತಿಸಿ ನನ್ನನ್ನು ಅದರ ಮೇಲಿಂದ ಎಳೆಯುತ್ತಿದ್ದರು ಆ ಅಗ್ನಿಯನ್ನು ನನ್ನ ಸೊಂಟದ ಚರ್ಬಿ ನಂದಿಸುತ್ತಿತ್ತು. (ಉಸದುಲ್ ಗಾಬ ಫೀ ಮಾರಿಫತಿಸ್ಸಹಾಬ ಸಂಪುಟ–2, ಪುಟ–148, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2003)

ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹಝ್ರತ್ ಖಬಾಬ್ ಬಗ್ಗೆ ಹೇಳುತ್ತಾರೆ: "ನೆನಪಿಡ ಬೇಕಾದುದೇನೆಂದರೆ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ನಂಬಿದ ಕಾರಣದಿಂದ ಎಲ್ಲರಿಗಿಂತ ಹೆಚ್ಚಾಗಿ ಕಷ್ಟಗಳನ್ನು ಅನುಭವಿಸಿದವರು ಗುಲಾಮರಾಗಿದ್ದ ಜನರಾಗಿದ್ದರು. ಖಬಾಬ್ ಬಿನ್ ಅರತ್ ಕಮ್ಮಾರರಾಗಿದ್ದರು. ಅವರು ಪ್ರಾರಂಭದ ಕಾಲದಲ್ಲಿಯೇ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ನಂಬಿದ್ದರು. ಅವರಿಗೆ ಜನರು ಬಹಳ ಕಷ್ಟಕೊಡುತ್ತಿದ್ದರು. ಅವರದೇ ಕರ್ಮಶಾಲೆಯ ಬೆಂಕಿ ಕೆಂಡಗಳನ್ನು ತೆಗೆದು ಹರಡಿ ಅವುಗಳ ಮೇಲೆ ಅವರನ್ನು ಮಲಗಿಸುತ್ತಿದ್ದರು. ಎದೆಯ ಮೇಲೆ ಕಲ್ಲುಗಳನ್ನು ಇರಿಸುತ್ತಿದ್ದರು. ಅವರ ಸೊಂಟ ಅಲುಗಾಡದಂತೆ ನೋಡಿಕೊಳ್ಳುತ್ತಿದ್ದರು. ಅವರು ಮಾಡಿದ ಕೆಲಸದ ಮಜೂರಿಯ ಹಣವನ್ನು ಕೊಡಲು ಜನರು ನಿರಾಕರಿಸುತ್ತಿದ್ದರು. ಅವರು ಶಾರೀರಿಕವಾಗಿಯೂ ಸಾಂಪತ್ತಿಕವಾಗಿಯೂ ಹಾನಿಯನ್ನು ಅನುಭವಿಸಿದರು. ಆದರೆ ಅವರ ವಿಶ್ವಾಸ ಒಂದು ಕ್ಷಣಕಾಲ ಸಹ ಚಂಚಲವಾಗಲಿಲ್ಲ. ಅವರು ಸತ್ಯವಿಶ್ವಾಸದಲ್ಲಿ ಸ್ಥಿರತೆಯನ್ನು ಸಾಬೀತುಗೊಳಿಸಿದರು. ಅವರ ಬೆನ್ನಿನ ಮೇಲಿದ್ದ ಕುರುಹುಗಳು ಕೊನೆಯವರೆಗೂ ಇದ್ದವು. ಹೀಗೆ ಹಝ್ರತ್ ಉಮರ್(ರ) ರವರ ಕಾಲಘಟ್ಟದಲ್ಲಿ ಅವರು ಅನುಭವಿಸಿದ ಹಿಂಸೆಗಳ ಬಗ್ಗೆ ಪ್ರಸ್ತಾವನೆ ಆದಾಗ ಅವರಿಗೆ ತಮ್ಮ ಬೆನ್ನು ತೋರಿಸಲು ಹೇಳಿದಾಗ ಅವರು ತಮ್ಮ ಬೆನ್ನನ್ನು ತೋರಿಸಿದರು ಅದು ಸಂಪೂರ್ಣ ಬೆಳ್ಳಗಾಗಿತ್ತು ಕುಷ್ಠರೋಗದ ಕಲೆಯ ರೀತಿ ಆಗಿತ್ತು." (ದುನಿಯಾಂ ಕಾ ಮುಹ್‌ಸಿನ್, ಅನ್ವಾರುಲ್ ಉಲೂಮ್ ಸಂಪುಟ–10, ಪುಟ–273)

ಮತ್ತೆ ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೇಳುತ್ತಾರೆ: "ಆದ್ಯ ಕಾಲದಲ್ಲಿಯೇ ಇಸ್ಲಾಮಿಗೆ ಸೇರಿದ ನವ ಮುಸ್ಲಿಮ್

ಗುಲಾಮರಾಗಿದ್ದ ಖಬಾಬರ ಬೆನ್ನು ಒಮ್ಮೆ ನಗ್ನವಾದಾಗ ಅವರ ಸಂಗಡಿಗರು ಅದನ್ನು ನೋಡಿದರು. ಅವರ ಬೆನ್ನಿನ ಚರ್ಮ ಮನುಷ್ಯನ ಚರ್ಮದಂತಿರದೆ ಮೃಗಗಳ ಚರ್ಮದ ಹಾಗೆ ಇರುವುದನ್ನು ಕಂಡು ಗಾಬರಿಗೊಂಡು 'ನಿಮಗೆ ಯಾವ ರೋಗ ತಗಲಿದೆ?' ಎಂದು ಪ್ರಶ್ನಿಸಿದರು. ಆಗ ಖಬಾಬ್ ನಕ್ಕು ಹೇಳಿದರು: ಅದು ರೋಗವಲ್ಲ, ಅದು ಸ್ಮಾರಕವಾಗಿದೆ. ನವ ಮುಸ್ಲಿಮರಾದ ಗುಲಾಮರನ್ನು ಮಕ್ಕದ ಜನರು ನಗರದ ಮಾರ್ಗಗಳಲ್ಲಿ ಕಠಿಣ ಮತ್ತು ಒರಟು ಕಲ್ಲುಗಳ ಮೇಲೆ ಎಳೆದುಕೊಂಡು ಹೋಗುತ್ತಿದ್ದರು. ಅವರು ದೌರ್ಜನ್ಯವನ್ನು ಪುನರಾವರ್ತಿಸುತ್ತಿದ್ದರು. ಅದರ ಫಲಸ್ವರೂಪವಾಗಿ ನನ್ನ ಬೆನ್ನಿನ ಚರ್ಮ ಈ ರೂಪವನ್ನು ಹೊಂದಿದೆ ಎಂದು ಹೇಳಿದರು." (ದೀಬಾಚ ತಫ್‌ಸೀರುಲ್ ಖುರ್‌ಆನ್, ಅನ್ವಾರುಲ್ ಉಲೂಮ್ ಸಂಪುಟ–20, ಪುಟ–193)

ಆರಂಭದ ಕಾಲದಲ್ಲಿ ಮುಸ್ಲಿಮರು ಬಡವರಾಗಿದ್ದರು ಮತ್ತು ಸಾಮಾನ್ಯವಾಗಿ ಅವರು ಗುಲಾಮರಾಗಿದ್ದರು ಮತ್ತು ಇಸ್ಲಾಮ್ ಸ್ವೀಕರಿಸಿದ ನಂತರ ಅವರು ಅನುಭವಿಸಿದ ಹಿಂಸೆಗಳ ಬಗ್ಗೆ ಹಝ್ರತ್ ಖಬ್ಬಾಬ್‌ರವರ ಬಗ್ಗೆ ಆಲಿಸಿದ್ದೇವೆ ಅವರನ್ನು ಬೆಂಕಿಯ ಮೇಲೆ ಮಲಗಿಸಲಾಗುತ್ತಿತ್ತು ಅಥವಾ ಬಂಡೆಗಲ್ಲುಗಳ ಮೇಲೆ ಎಳೆಯುತ್ತಿದ್ದರು. ಈ ಹಿಂಸೆಗಳನ್ನು ಅವರೆಲ್ಲರು ಸಹಿಸಿಕೊಂಡರು ಇಸ್ಲಾಮ್ ಪ್ರಗತಿ ಹೊಂದಿದ ನಂತರ ಅಲ್ಲಾಹನು ಅವರಿಗೆ ಎಂತಹ ಗೌರವ ನೀಡಿದನು ಮತ್ತು ಅವರಿಗೆ ಲೌಕಿಕವಾಗಿ ಎಂತಹ ಸ್ಥಾನ ನೀಡಿದನು ಎಂಬುದರ ಬಗ್ಗೆ ಒಂದು ಸ್ಥಳದಲ್ಲಿ ಹಝ್ರತ್ ಮುಸ್ಲಿಹ್ ಮೌಊದ್(ರ) ಹೀಗೆ ಹೇಳುತ್ತಾರೆ:

"ಹಝ್ರತ್ ಉಮರ್(ರ) ತಮ್ಮ ಖಿಲಾಫತ್ ಕಾಲಘಟ್ಟದಲ್ಲಿ ಮಕ್ಕಕ್ಕೆ ಆಗಮಿಸಿದಾಗ ಪಟ್ಟಣದ ಪ್ರಖ್ಯಾತ ಕುಟುಂಬಗಳ ಅನೇಕ ಶ್ರೀಮಂತರು ಅವರನ್ನು ಭೇಟಿ ಆಗಲು ಆಗಮಿಸಿದರು. ಅವರು ಯೋಚಿಸಿದರು ಹಝ್ರತ್ ಉಮರ್(ರ) ರವರಿಗೆ ನಮ್ಮ ಕುಟುಂಬಗಳ ಶ್ರೇಷ್ಠತೆ ಬಗ್ಗೆ ಅರಿವಿದೆ ಆದ್ದರಿಂದ ಈಗ ಅವರು ಮಹರಾಜರಾಗಿದ್ದಾರೆ. ಆದ್ದರಿಂದ ನಮ್ಮ ಈ ಕುಟುಂಬಗಳಿಗೆ ಗೌರವ ನೀಡುವರು. ಹೀಗೆ ನಾವು ನಮ್ಮ ಕಳೆದುಹೋಗಿರುವ ಗೌರವವನ್ನು ಪಡೆಯಬಹುದು ಎಂದು ಯೋಚಿಸುತ್ತಿದ್ದರು. ಹಝ್ರತ್ ಉಮರ್(ರ) ಆಗಮಿಸಿ ಸಂಭಾಷಿಸುತ್ತಿದ್ದರು ಅಷ್ಟರಲ್ಲಿ ಹಝ್ರತ್ ಬಿಲಾಲ್(ರ) ಆ ಸಭೆಗೆ ಆಗಮಿಸಿದರು. ಅನಂತರ ಹಝ್ರತ್ ಖಬ್ಬಾಬ್(ರ) ಸಹ ಆಗಮಿಸಿದರು ತದನಂತರ ಒಬ್ಬರಾದ ಮೇಲೆ ಇನ್ನೊಬ್ಬರು ಪ್ರಾರಂಭದ ಕಾಲದಲ್ಲಿ ಮುಸ್ಲಿಮರಾದ ಗುಲಾಮರು ಆಗಮಿಸಿದರು. ಇವರೆಲ್ಲರು ಆ ಶ್ರೇಷ್ಠ ಕುಟುಂಬದವರ ಗುಲಾಮರಾಗಿದ್ದು. ಆ ಸಭೆಯಲ್ಲಿ ಆಸೀನರಾದ ಯುವ ಶ್ರೀಮಂತರು ಅಥವಾ ಶ್ರೀಮಂತರ ಪೂರ್ವಜರ ಗುಲಾಮರಾಗಿದ್ದರು. ಅವರು ಗುಲಾಮರಾಗಿದ್ದ ಕಾಲದಲ್ಲಿ ಆ ಶ್ರೀಮಂತರು ಅವರಿಗೆ ಬಹಳ ಹಿಂಸೆ ನೀಡುತ್ತಿದ್ದರು. ಹಝ್ರತ್ ಉಮರ್(ರ) ಪ್ರತಿಯೊಬ್ಬ ಗುಲಾಮರ ಆಗಮನದಲ್ಲಿ ಅವರನ್ನು ಸ್ವಾಗತಿಸಿ ಅಲ್ಲಿದ್ದ ಶ್ರೀಮಂತರಿಗೆ ಹೇಳುತ್ತಿದ್ದರು ನೀವು ಸ್ವಲ್ಪ ಹಿಂದಕ್ಕೆ ಜರುಗಿರಿ ಎಂದು. ಶ್ರೀಮಂತರೆಲ್ಲರು ಸಭೆಯಲ್ಲಿ ಮೊದಲನೆಯ ಪಂಕ್ತಿಯಲ್ಲಿ ಕುಳಿತಿದ್ದರು. ಆ ಗುಲಾಮರು ಆಗಮಿಸಿದಾಗ ಹಝ್ರತ್ ಉಮರ್(ರ) ಆ ಎಲ್ಲಾ ಯುವ ಶ್ರೀಮಂತರನ್ನು ಹಿಂದೆ ಸರಿಸಿ ಆ ಗುಲಾಮರನ್ನು ಮುಂದೆ ಬರಲು ಉಪದೇಶಿಸಿದರು. ಹೀಗೆ ಆ ಎಲ್ಲಾ ಶ್ರೀಮಂತರು ಹಿಂದಕ್ಕೆ ಸರಿಯುತ್ತಾ ಸರಿಯುತ್ತಾ ಬಾಗಿಲ ಹತ್ತಿರ ತಲುಪಿದರು. ಆ ಕಾಲದಲ್ಲಿ ಬಹಳ ವಿಶಾಲವಾದ ಸಭಾಂಗಣ ಇರುತ್ತಿರಲಿಲ್ಲ ಒಂದು ಚಿಕ್ಕದಾದ ಕೊಠಡಿ ಇರುತ್ತಿತ್ತು ಹೀಗಾಗಿ ಅದರಲ್ಲಿ ಎಲ್ಲರೂ ಸೇರಲು ಸಾಧ್ಯವಾಗುತ್ತಿರಲಿಲ್ಲ ಆದ್ದರಿಂದ ಅಲ್ಲಿದ್ದವರು ಹಿಂದಕ್ಕೆ ಸರಿಯುತ್ತಾ ಸರಿಯುತ್ತಾ ಆ ಶ್ರೀಮಂತರು ಪಾದರಕ್ಷೆಗಳ ಮೇಲೆ ಕೂರ ಬೇಕಾಯಿತು. ಮಕ್ಕದ ಶ್ರೀಮಂತರು ಪಾದರಕ್ಷೆಗಳ ಸ್ಥಳಕ್ಕೆ ತಲುಪಿದಾಗ ಮತ್ತು ಹೇಗೆ ಗುಲಾಮರನ್ನು ಆಸೀನರಾಗಲು ಮೊದಲ ಪಂಕ್ತಿಯಲ್ಲಿ ಅನುಮತಿ ನೀಡಲಾಯಿತು ಎಂದು ತಿಳಿದಾಗ ಅವರ ಮನಸ್ಸಿನಲ್ಲಿ ಬಹಳ ನೋವು ಉಂಟಾಯಿತು.

ಹಝ್ರತ್ ಮುಸ್ಲಿಹ್ ಮೌಊದ್(ರ) ಬರೆಯುತ್ತಾರೆ: ಆ ಸಂದರ್ಭದಲ್ಲಿ ಅಲ್ಲಾಹನು ಎಂತಹ ಸನ್ನಿವೇಶ ಸೃಷ್ಟಿಸಿದನು ಎಂದರೆ ಒಂದು ಕಾಲದಲ್ಲಿ ಕುಫ್ಫಾರರ ಗುಲಾಮರಾಗಿದ್ದ ಒಬ್ಬರಾದ ಮೇಲೆ ಇನ್ನೊಬ್ಬರು ಮುಸ್ಲಿಮರನ್ನು ಕಳುಹಿಸಿದನು. ಒಂದೇ ಸಮನೆ ಆ ಶ್ರೀಮಂತರು ಹಿಂದಕ್ಕೆ ಜರುಗುತ್ತಿದ್ದರು ಅವರಿಗೆ ಅಷ್ಟು ನೋವಾಗುತ್ತಿರಲಿಲ್ಲ. ಆದರೆ ಪದೇ ಪದೇ ಅವರು ಹಿಂಜರಿಯ ಬೇಕಾಯಿತು ಆದ್ದರಿಂದ ಅವರು ಇದನ್ನು ಸಹಿಸದೆ ಎದ್ದು ಆ ಸಭೆಯಿಂದ ಹೊರ ಹೋದರು. ಹೊರಗಡೆ ಬಂದು ಅವರೆಲ್ಲರು ಒಬ್ಬರನ್ನೊಬ್ಬರು ದೂರುತ್ತಿದ್ದರು ನೋಡಿರಿ! ಇಂದು ಹೇಗೆ ನಮಗೆ ಅಗೌರವಿಸಲಾಯಿತು ಎಂದು. ಒಬ್ಬೊಬ್ಬ ಗುಲಾಮರು ಆಗಮಿಸಿದಾಗ ನಮ್ಮನ್ನು ಹಿಂದಕ್ಕೆ ಜರುಗಿಸಲಾಯಿತು. ಕೊನೇಗೆ ನಾವು ಪಾದರಕ್ಷೆಯ ಜಾಗದವರೆಗೆ ತಲುಪಿದೆವು.

ಇದಕ್ಕೆ ಅವರ ಒಬ್ಬ ಯುವಕ ಹೇಳಿದನು ಇದಕ್ಕೆ ಯಾರು ಹೊಣೆ? ಉಮರ್(ರ) ಅಥವಾ ನಮ್ಮ ಪೂರ್ವಜರು? ಈ ವಿಷಯದ ಬಗ್ಗೆ ನೀವು ಗಮನಿಸಿದರೆ ತಿಳಿದು ಬರುವುದೇನೆಂದರೆ ಇದರಲ್ಲಿ ಉಮರ್(ರ) ರವರ ಯಾವ ತಪ್ಪು ಇಲ್ಲ. ನಮ್ಮ ಪೂರ್ವಜರ ತಪ್ಪಾಗಿದೆ ಆದ ಕಾರಣ ಇಂದು ನಮಗೆ ಈ ಶಿಕ್ಷೆ ಸಿಕ್ಕಿದೆ. ಏಕೆಂದರೆ ಅಲ್ಲಾಹನು ತನ್ನ ಕಡೆಯಿಂದ ಪ್ರವಾದಿಯನ್ನು ಅವತರಿಸಿದಾಗ ನಮ್ಮ ಪೂರ್ವಜರು ಆತನನ್ನು ವಿರೋಧಿಸಿದರು. ಆದರೆ ಈ ಗುಲಾಮರು ಆತನನ್ನು ಸ್ವೀಕರಿಸಿ ಎಲ್ಲಾ ರೀತಿಯ ಹಿಂಸೆಯನ್ನು ಸಹಿಸಿಕೊಂಡರು. ಆದ್ದರಿಂದ ಇಂದು ಸಭೆಯಲ್ಲಿ ನಮಗೆ ಅವಮಾನ ಎದುರಿಸಬೇಕಾಗಿದ್ದಕ್ಕೆ ಉಮರ್(ರ) ಕಾರಣರಲ್ಲ ನಮ್ಮ ಪೂರ್ವಜರು ಕಾರಣರಾಗಿದ್ದಾರೆ. ಈತನ ಈ ಮಾತುಗಳನ್ನು ಆಲಿಸಿದ ನಂತರ ಎಲ್ಲರೂ ಹೇಳಿದರು: ಸರಿ ನಾವು ಇದಕ್ಕೆ ಒಪ್ಪುತ್ತೇವೆ ಇದರಲ್ಲಿ ನಮ್ಮ ಪೂರ್ವಜರ ತಪ್ಪಾಗಿದೆ ಎಂದು. ಆದರೆ ಈ ಅವಮಾನವನ್ನು ಹೋಗಲಾಡಿಸುವುದು ಹೇಗೆ ಸಾಧ್ಯ? ಇದಕ್ಕೆ ಎಲ್ಲರೂ ಸಮಾಲೋಚನೆ ನಡೆಸಿದರು ನಮಗೆ ಇದರ ಬಗ್ಗೆ ಏನೂ ಅರ್ಥವಾಗುತ್ತಿಲ್ಲ ಉಮರ್(ರ) ಅವರೊಂದಿಗೆ ಇದರ ಪರಿಹಾರದ ಬಗ್ಗೆ ಪ್ರಶ್ನಿಸೋಣ ಎಂದು ಹೇಳಿದರು. ತದನಂತರ ಅವರೆಲ್ಲರು ಹಝ್ರತ್ ಉಮರ್(ರ) ರವರ ಬಳಿ ಆಗಮಿಸಿ ಹೇಳಿದರು; ಇಂದು ನಮ್ಮೊಂದಿಗೆ ನಡೆದ ಘಟನೆಯ ಬಗ್ಗೆ ನಿಮಗೂ ಅರಿವಿದೆ ಮತ್ತು ನಮಗೂ ಅರಿವಿದೆ. ಇದಕ್ಕೆ ಹಝ್ರತ್ ಉಮರ್(ರ) ಹೇಳಿದರು ಇದಕ್ಕೆ ನಾನು ಕ್ಷಮೆ ಯಾಚಿಸುತ್ತೇನೆ. ಇವರೆಲ್ಲರೂ ಪ್ರವಾದಿ(ಸ) ಅವರ ಸಭೆಗಳಲ್ಲಿ ಗೌರವಾನ್ವಿತರಾಗಿದ್ದರು. ಆದ್ದರಿಂದ ನಾನು ಅವರನ್ನು ಗೌರವಿಸುವುದು ಫರ್ಝ್ ಆಗಿತ್ತು. ಮತ್ತೆ ಅವರೆಲ್ಲರು ಹೇಳಿದರು ನಮಗೆ ಇದರ ಬಗ್ಗೆ ಅರಿವಿದೆ ಇದರಲ್ಲಿ ನಮ್ಮ ತಪ್ಪಾಗಿದೆ ಎಂದು. ಆದರೆ ಈ ತಪ್ಪನ್ನು ತಿದ್ದುಕೊಳ್ಳುವ ಮಾರ್ಗ ಏನಾಗಿದೆ. ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ನಮಗೆ ಅದನ್ನು ಊಹಿಸಲು ಸಾಧ್ಯವೆ ಇಲ್ಲ. ಮಕ್ಕದ ಶ್ರೀಮಂತರಿಗೆ ಇದ್ದ ಗೌರವವನ್ನು ನಮಗೆ ಇಂದಿನ ಪರಿಸ್ಥಿತಿಯಲ್ಲಿ ಊಹಿಸಲು ಸಾಧ್ಯವಿಲ್ಲ. ಆದರೆ ಹಝ್ರತ್ ಉಮರ್(ರ) ಅವರ ಕೌಟುಂಬಿಕ ಪರಿಸ್ಥಿತಿಗಳ ಬಗ್ಗೆ ಅರಿವಿತ್ತು. ಹಝ್ರತ್ ಉಮರ್(ರ) ಮಕ್ಕದಲ್ಲಿಯೇ ಜನಿಸಿದರು. ಮತ್ತು ಮಕ್ಕದಲ್ಲಿಯೇ ತಮ್ಮ ಜೀವನ ಕಳೆದಿದ್ದರು. ಆದ್ದರಿಂದ ಹಝ್ರತ್ ಉಮರ್(ರ) ಅವರಿಗೆ ಅವರ ಅಂದರೆ ಆ ಶ್ರೀಮಂತ ಯುವಕರ ಪೂರ್ವಜರ ಗೌರವದ ಬಗ್ಗೆ ಅರಿವಿತ್ತು. ಅವರ ಮುಂದೆ ಯಾರು ಕಣ್ಣು ಎತ್ತಿ ಸಹ ನೋಡಲು ಧೈರ್ಯ ಮಾಡುತ್ತಿರಲಿಲ್ಲ. ಅಂತಹ ಜನರು ಬಂದು ಹಝ್ರತ್ ಉಮರ್(ರ) ಅವರಲ್ಲಿ ಹೀಗೆ ಹೇಳಿದಾಗ ಅವರ ಕಣ್ಣೆದುರು ಅವರ ಪೂರ್ವಜರ ಸ್ಥಿತಿ ವ್ಯಕ್ತವಾಯಿತು ಉಮರ್(ರ) ರವರ ಮೇಲೆ ಅನುಕಂಪ ಆವರಿಸಿತು. ಆದ್ದರಿಂದ ಅವರಿಗೆ ಏನೂ ಹೇಳಲು ಸಾಧ್ಯವಾಗುತ್ತಿರಲಿಲ್ಲ ಅವರು ಕೇವಲ ತಮ್ಮ ಕೈ ಸಂಜ್ಞೆಯಿಂದ ಹೇಳಿದರು ಅಂದರೆ ಸೀರಿಯಾದ ಕಡೆ ಕೆಲವು ಇಸ್ಲಾಮಿ ಯುದ್ಧಗಳು ನಡೆಯುತ್ತಿದೆ. ನೀವೆಲ್ಲರು ಆ ಯುದ್ಧಗಳಲ್ಲಿ ಭಾಗವಹಿಸುವುದೇ ಇದಕ್ಕೆ ಪರಿಹಾರವಾಗಬಹುದು. ತದನಂತರ ಅವರೆಲ್ಲರು ಅಲ್ಲಿಂದ ಎದ್ದು ತಕ್ಷಣವೇ ಆ ಯುದ್ಧಗಳಲ್ಲಿ ಭಾಗವಹಿಸಲು ಹೊರಟರು. ಹಝ್ರತ್ ಮುಸ್ಲಿಹ್ ಮೌಊದ್(ರ) ಬರೆಯುತ್ತಾರೆ: ಇತಿಹಾಸ ಇದಕ್ಕೆ ಸಾಕ್ಷಿ ಆಗಿದೆ. ಅಲ್ಲಿಂದ ಹೊರಟ ಶ್ರೀಮಂತ ಯುವಕರಲ್ಲಿ ಯಾರೋಬ್ಬರು ಸಹ ಮರಳಿ ಬರಲಿಲ್ಲ. ಎಲ್ಲರೂ ಅಲ್ಲಿಯೇ ಶಹೀದರಾದರು. ಹೀಗೆ ಅವರೆಲ್ಲರು ತಮ್ಮ ಕುಟುಂಬದ ಮೇಲಿದ್ದ ಕಳಂಕವನ್ನು ಅಳಿಸಿದರು.

(ತಫ್‌ಸೀರೆ ಕಬೀರ್, ಸಂಪುಟ–8, ಪುಟ–65–67)

ಈ ಘಟನೆಯಿಂದ ತಿಳಿದು ಬರುವುದೇನೆಂದರೆ ಬಲಿದಾನಗಳನ್ನು ನೀಡಬೇಕಾಗುತ್ತದೆ. ಪ್ರಾರಂಭದಲ್ಲಿ ಬಲಿದಾನಗಳನ್ನು ನೀಡುವವರಿಗೆ ಗೌರವ ಲಭಿಸಿತು ಅನಂತರ ಬಂದವರಿಗೆ ಅವಮಾನದ ಕಳೆಯನ್ನು ಹೋಗಲಾಡಿಸಬೇಕಾಗುತ್ತದೆ. ಅದು ಬಲಿದಾನಗಳಿಂದಲೇ ಸಾಧ್ಯ.

ಹಝ್ರತ್ ಖಬ್ಬಾಬ್(ರ) ಮತ್ತು ಹಝ್ರತ್ ಮಿಖ್ದಾದ್ ಬಿನ್ ಉಮರ್(ರ) ಮದೀನಕ್ಕೆ ಹಿಜ್ರತ್ ಮಾಡಿ ಬಂದಾಗ ಇವರಿಬ್ಬರೂ ಹಝ್ರತ್ ಕುಲ್‌ಸೂಮ್ ಬಿನ್ ಇಲ್‌ಹದಮ್(ರ) ರವರ ಮನೆಯಲ್ಲಿ ಹಝ್ರತ್ ಕುಲ್‌ಸೂಮ್(ರ) ರವರ ಮರಣದ ತನಕ ತಂಗಿದ್ದರು. ಹಝ್ರತ್ ಕುಲ್‌ಸೂಮ್(ರ) ರವರ ನಿಧನ ಪ್ರವಾದಿ ಸಲ್ಲಲ್ಲಾಹು ಅಲೈಹಿವಸಲ್ಲಮರು ಬದರ್‌ಗೆ ಹೊರಡುವ ಕೆಲ ದಿನಗಳ ಮುಂಚೆ ಆಯಿತು. ಅನಂತರ ಅವರು ಸಅದ್ ಬಿನ್ ಉಬಾದ(ರ) ರವರ ಬಳಿ 5 ಹಿಜರಿಯಲ್ಲಿ ಬನೂ ಖರೀಝುವನ್ನು ವಿಜಯಶಾಲಿಯಾಗಿಸಿ ಹೊರಟರು. (ಅತ್ತಬಖಾತುಲ್ ಕುಬ್ರ ಲಿಇಬ್ನೆ ಸಅದ್ ಸಂಪುಟ–3, ಪುಟ–123, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 1990) (ಅತ್ತಬಖಾತುಲ್ ಕುಬ್ರ ಲಿಇಬ್ನೆ ಸದ್, ಸಂಪುಟ–2, ಪುಟ–57, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 1990)

ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವಸಲ್ಲಮರು ಹಝ್ರತ್ ಖಬ್ಬಾಬ್(ರ) ಮತ್ತು ಹಝ್ರತ್ ಕರಾಶ್ ಬಿನ್ ಸಿಮ್ಮಾ(ರ) ರವರ ಸ್ವತಂತ್ರಗೊಳಿಸಿದ ಗುಲಾಮ ಹಝ್ರತ್ ತಮೀಮ್(ರ) ರವರ ಮದ್ಯೆ ಸಹೋದರ ಸಂಬಂಧವನ್ನು ಸ್ಥಾಪಿಸಿದರು. ಇನ್ನೊಂದು ವರದಿಯ ಪ್ರಕಾರ ರಸೂಲುಲ್ಲಾಹ್(ಸ) ರವರು ಹಝ್ರತ್ ಖಬ್ಬಾಬ್(ರ) ಮತ್ತು ಹಝ್ರತ್ ಜಬಿರ್ ಬಿನ್ ಅತೀಖ್ ರವರ

ನಡುವೆ ಸಹೋದರ ಸಂಬಂಧವನ್ನು ಸ್ಥಾಪಿಸಿದರು. ಅಲ್ಲಾಮ ಇಬ್ನೆ ಅಬ್ದುಲ್‌ಬರ್‌ರವರ ಪ್ರಕಾರ ಮೊದಲನೇಯ ವರದಿ ಸರಿಯಾಗಿದೆ.
(ಅಲ್‌ಇಸ್ತಿಯಾಬ್ ಫೀ ಮಾರಿಫತಿಲ್ ಅಸ್ಹಾಬ್ ಸಂಪುಟ–2, ಪುಟ–21, ದಾರುಲ್ ಜೈಲ್ ಬೈರೂತ್)

ಹಝ್ರತ್ ಖಬ್ಬಾಬ್[ರ] ಬದರ್, ಉಹದ್, ಹಾಗೂ ಕಂದಖ್ ಯುದ್ಧಗಳ ಸಮೇತ ಉಳಿದ ಎಲ್ಲಾ ಯುದ್ಧಗಳಲ್ಲಿ ಪ್ರವಾದಿ[ಸ] ಅವರೊಂದಿಗೆ ಭಾಗವಹಿಸಿದರು. (ಅತ್ತಬಖಾತುಲ್ ಕುಬ್ರ ಲಿಇಬ್ನೆ ಸಅದ್ ಸಂಪುಟ–3, ಪುಟ–123, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 1990)

ಅಬೂ ಖಾಲಿದ್ ವರದಿ ಮಾಡುತ್ತಾರೆ: ಒಂದು ದಿನ ನಾವು ಮಸ್‌ಜಿದ್‌ನಲ್ಲಿ ಕುಳಿತಿದ್ದಾಗ ಹಝ್ರತ್ ಖಬಾಬ್ ಆಗಮಿಸಿ ಮೌನವಾಗಿ ಕುಳಿತರು. ಜನರು ಹೇಳಿದರು: ನೀವು ಏನಾದರೂ ಉಪದೇಶಿಸಿರಿ ಅಥವಾ ಯಾವುದಾದರೂ ಆಜ್ಞೆ ನೀಡಿರಿ. ಹಝ್ರತ್ ಖಬಾಬ್ ಹೇಳಿದರು: ನಾನು ಯಾವ ಆಜ್ಞೆ ನೀಡಲಿ. ನಾನು ಸ್ವತಃ ಕಾರ್ಯರೂಪಕ್ಕೆ ತರದಂತಹ ಆಜ್ಞೆ ನಾನು ನೀಡುವವನಾಗದಿರಲಿ. (ಉಸದುಲ್‌ಗಾಬ ಫೀ ಮಾರಿಫತಿಸ್ಸಹಾಬ, ಸಂಪುಟ–2, ಪುಟ–149, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2003)

ಆ ಜನರಲ್ಲಿ ಅಲ್ಲಾಹನ ಬಗ್ಗೆ ಇದ್ದ ಭಯ ಮತ್ತು ಅವರ ತಖ್ವ ಆ ಮಟ್ಟದಲ್ಲಿತ್ತು. ಅಬ್ದುಲ್ಲಾ ಬಿನ್ ಖಬ್ಬಾಬ್ ತಮ್ಮ ತಂದೆಯವರಿಂದ ವರದಿ ಮಾಡುತ್ತಾರೆ. ಪ್ರವಾದಿ ಸಲ್ಲಲ್ಲಾಹು ಅಲೈಹಿವಸಲ್ಲಮರು ಒಮ್ಮೆ ನಮಾಝನ್ನು ಸುದೀರ್ಘವಾಗಿ ನಿರ್ವಹಿಸಿದರು. ಜನರು ಹೇಳಿದರು ಯಾ ರಸೂಲುಲ್ಲಾಹ್! ತಾವು ಮುಂಚೆ ಯಾವಾಗಲೂ ಈ ರೀತಿ ನಮಾಝ್ ನಿರ್ವಹಿಸಲಿಲ್ಲ. ಇದಕ್ಕೆ ರಸೂಲುಲ್ಲಾಹ್[ಸ] ಹೇಳಿದರು ಹೌದು ಇದು ಆಸಕ್ತಿ ಹಾಗೂ ಭಯದ ನಮಾಝ್ ಆಗಿತ್ತು. ನಾನು ಇದರಲ್ಲಿ ಅಲ್ಲಾಹನಿಂದ ಮೂರು ವಸ್ತುಗಳನ್ನು ಯಾಚಿಸಿದೆ. ಅಲ್ಲಾಹನು ನನಗೆ ಅದರಿಂದ ಎರಡನ್ನು ನೀಡಿದನು ಒಂದನ್ನು ತಡೆದನು. ನಾನು ಅಲ್ಲಾಹನಿಂದ ನನ್ನ ಉಮ್ಮತ್ ಎಂದೂ ಬರಗಾಲದಿಂದ ನರಳಬಾರದು ಎಂದು ಕೇಳಿಕೊಂಡು ಅಲ್ಲಾಹನು ಅದು ನೀಡಿದನು. ಅನಂತರ ನಾನು ಅಲ್ಲಾಹನಿಂದ ನನ್ನ ಉಮ್ಮತ್ತಿನ ಮೇಲೆ ಯಾವ ಶತ್ರುಗಳು ಅವರ ಅಪರಿಚಿತರಿಂದ ಪ್ರಾಬಲ್ಯ ಹೊಂದದಿರಲಿ ಎಂದು ಕೇಳಿಕೊಂಡೆ ಅದನ್ನು ಅಲ್ಲಾಹನು ಸ್ವೀಕರಿಸಿದನು. ಇಂದು ಸಹ ಉಮ್ಮತ್ ಆಗಿಯೇ ಉಳಿದಿದೆ ಮತ್ತು ಯಾರಾದರು ಪ್ರಾಬಲ್ಯತೆ ಪಡೆದರು ಇದು ಸ್ವತಃ ಸಕರಾರವೇ ತಮ್ಮ ಮೇಲೆ ಪ್ರಾಬಲ್ಯತೆ ಹೇರುತ್ತದೆ. ಅಲ್ಲಾಹನ ಅನುಗ್ರಹದಿಂದ ಪ್ರವಾದಿ[ಸ] ರವರ ಉಮ್ಮತ್ ಸ್ಥಿರವಾಗಿದೆ. ಮತ್ತೆ ಅವರು ಹೇಳಿದರು: ನಾನು ಮತ್ತೆ ಅಲ್ಲಾಹನಲ್ಲಿ ನನ್ನ ಉಮ್ಮತ್ತಿನವರು ಪರಸ್ಪರ ಜಗಳವಾಡಬಾರದು ಎಂದು ಕೇಳಿಕೊಂಡೆ. ಆದರೆ ಅಲ್ಲಾಹನು ಇದನ್ನು ನನಗೆ ನೀಡಲಿಲ್ಲ. (ಸನನ್ನುತ್ತಿರ್‌ಮಿಝೀ ಅಬ್ವಾಬುಲ್ ಫಿತನ್ ಹದೀಸ್–2175)

ಇದರ ಪ್ರತಿಫಲವಾಗಿ ಇಂದು ಕೋಮುಗಳಾಗಿ ವಿಂಗಡವಾಗಿದೆ ಮತ್ತು ಒಬ್ಬರಿನ್ನೊಬ್ಬರು ಕಾಫಿರ್ ಎಂಬ ಫತ್ವಗಳನ್ನು ಸಹ ನೀಡಲಾಗುತ್ತಿದೆ.

ತಾರಿಖ್ ವರದಿ ಮಾಡುತ್ತಾರೆ: ಹಝ್ರತ್ ಖಬಾಬ್ ರೋಗಿಯಾಗಿದ್ದಾಗ ಅವರನ್ನು ಸಂದರ್ಶಿಸಲು ಕೆಲವು ಸಹಾಬರು ಹೋದರು. ಸಹಾಬರು ಹೇಳಿದರು: ಓ ಅಬೂ ಅಬ್ದುಲ್ಲಾ ನೀವು ಸಂತೋಷಪಡಿರಿ. ನೀವು ನಿಮ್ಮ ಸಹೋದರರ ಸಮೀಪಕ್ಕೆ ಹೌಝುಲ್ ಕೌಸರ್‌ಗೆ ಹೋಗುತ್ತಿದ್ದೀರಿ. ಹಝ್ರತ್ ಖಬಾಬ್ ಹೇಳಿದರು: ನೀವು ಗತಿಸಿ ಹೋದ ನಮ್ಮ ಸಹೋದರರ ಬಗ್ಗೆ ಪ್ರಸ್ತಾಪಿಸುತ್ತಿರುವಿರಿ. ಅವರು ಇಹಲೋಕದಲ್ಲಿ ಯಾವ ಪ್ರತಿಫಲವನ್ನೂ ಗಳಿಸಲಿಲ್ಲ. ಅವರ ನಂತರ ಇಲ್ಲಿ ಉಳಿದ ನಾವು ಇಹಲೋಕದಲ್ಲಿ ಏನೆಲ್ಲಾ ಗಳಿಸಿದೆವೆಂದರೆ ನಾವು ಗಳಿಸಿದುದು ನಾವು ಹಿಂದೆ ಮಾಡಿದ ಕೃತ್ಯಗಳ ಪ್ರತಿಫಲವಾಗಿರಬಹುದೇ ಎಂಬ ಬಗ್ಗೆ ನಾವು ಭಯಪಡುತ್ತೇವೆ. ಹಝ್ರತ್ ಖಬಾಬ್ ಕಠಿಣ ರೋಗಬಾಧಿತರಾಗಿದ್ದರು. (ಉಸದುಲ್‌ಗಾಬ ಫೀ ಮಾರಿಫತಿಸ್ಸಹಾಬ ಸಂಪುಟ–2, ಪುಟ–149, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2003)

ಹಾರಿಸಾ ಬಿನ್ ಮುಝರ್ರಿಬ್ ಹೇಳುತ್ತಾರೆ: ನಾನು ಹಜ್‌ರತ್ ಖಬ್ಬಾಬ್[ರ] ಅವರನ್ನು ಸಂದರ್ಶಿಸಲು ಅವರ ಬಳಿ ಹೋದೆವು. ಅವರಿಗೆ 7 ಕಡೆಯಿಂದ ಚಿಕಿತ್ಸೆಗಾಗಿ ಬರೆ ನೀಡಲಾಗಿತ್ತು. ನಾನು ಅವರು ಹೀಗೆ ಹೇಳುತ್ತಿದ್ದನ್ನು ಕೇಳಿಸಿಕೊಂಡಿದ್ದೇನೆ: ನಾನು ರಸೂಲುಲ್ಲಾಹ್[ಸ] ರವರನ್ನು ಹೀಗೆ ಹೇಳುತ್ತಿದ್ದನ್ನು ಕೇಳಿಸಿಕೊಂಡಿದ್ದೇನೆ ಅಂದರೆ ನಿಮ್ಮ ಪೈಕಿ ಯಾರೂ ಮರಣವನ್ನು ಯಾಚಿಸದಿರಿ ಇದು ಧರ್ಮಬದ್ಧವಲ್ಲ. ಆದ್ದರಿಂದ ನಾನು ಎಂದೂ ಮರಣವನ್ನು ಯಾಚಿಸಲಿಲ್ಲ ಅಂದರೆ ಅವರು ಇಷ್ಟು ಕಷ್ಟ ಅನುಭವಿಸಿದರು. ಅವರ ಕಫನ್ ತರಲಾಯಿತು ಅದು ಕಬಾತಿ ಬಟ್ಟೆಯದ್ದಾಗಿತ್ತು. ಅದು ಮಿಸರ್‌ನಲ್ಲಿ ತಯಾರಿಸಲಾದ ತಿಳಿಯಾದ ಬಟ್ಟೆಯಾಗಿತ್ತು ಆಗ ಅವರು ಅಳುತ್ತಿದ್ದರು. ಅನಂತರ ಅವರು ಹೇಳಿದರು ರಸೂಲುಲ್ಲಾಹ್[ಸ] ರವರ ಚಿಕ್ಕಪ್ಪ ಹಝ್ರತ್ ಹಮ್‌ಝಾ[ರ] ರವರನ್ನು ಒಂದು ಚಾದರದಲ್ಲಿ ಕಫನ್ ಮಾಡಲಾಯಿತು. ಅದರಿಂದ ಅವರ ತಲೆಯನ್ನು ಮರೆಮಾಡಿದಾಗ ಕಾಲು ಆ ಚಾದರದಿಂದ ಹೊರಬರುತ್ತಿತ್ತು ಕಾಲುಗಳನ್ನು ಮರೆಮಾಡಿದಾಗ ಅವರ ತಲೆ ಅದರಿಂದ ಹೊರಗಾಗುತ್ತಿತ್ತು ಆದ್ದರಿಂದ ನಾನು ಅವರ ಕಾಲಿನ ಮೇಲೆ ಅಝ್‌ಖರ್ ಹುಲ್ಲನ್ನು ಹಾಕಿ ಮರೆಮಾಡಿದೆವು. ನಾನು ಪ್ರವಾದಿ ಸಲ್ಲಲ್ಲಾಹು ಅಲೈಹಿವಸಲ್ಲಮರೊಂದಿಗೆ ಎಂತಹ ಪರಿಸ್ಥಿಯನ್ನು ಕಂಡಿದ್ದೇನೆ ಎಂದರೆ ನನ್ನ ಬಳಿ ಒಂದು ದೀನಾರು ಇರುತ್ತಿರಲಿಲ್ಲ. ಅಂದರೆ ಅಷ್ಟು ಬಡತನ ವಿತ್ತು ಆದರೆ ಈಗ ಪರಿಸ್ಥಿತಿ ಬಹಳ ಉತ್ತಮವಾಗಿದೆ. ಅಂದರೆ ಈಗ ನನ್ನ ಮನೆಯ ಒಂದು ಬದಿಯ ಸಂದೂಖಿನಲ್ಲಿ ನಲವತ್ತು ಸಾವಿರ ದಿರ್‌ಹಮ್‌ಗಳಿವೆ. ನಾನಗೆ ಭಯವಾಗುವುದೇನೆಂದರೆ ನಮಗೆ ಉತ್ತಮ ವಸ್ತುಗಳನ್ನು ಈ ಜೀವನದಲ್ಲಿಯೇ ನೀಡಲಾಗಿದೇಯೋ ಎಂದು.
(ಅತ್ತಬಖಾತುಲ್ ಕುಬ್ರ ಲಿಇಬ್ನೆ ಸಅದ್ ಸಂಪುಟ–3, ಪುಟ–123, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 1990) (ಲುಗಾತುಲ್ ಹದೀಸ್ ಸಂಪುಟ–3, ಪುಟ–484, ಅಲಿ ಆಸಿಫ್ ಪ್ರಿಂಟರ್ಸ್ ಲಾಹೋರ್ 2005)

ಹಝ್ರತ್ ಖಬಾಬ್ ಹೇಳುತ್ತಾರೆ: ನಾವು ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರೊಂದಿಗೆ ಹಿಜ್‌ರತ್ ಮಾಡಿದೆವು. ನಾವು ಅಲ್ಲಾಹನ ಸಂಪ್ರೀತಿಯನ್ನು ಆಶಿಸುತ್ತಿದ್ದೆವು. ನಮಗೆ ಪ್ರತಿಫಲ ನೀಡುವುದು ಅಲ್ಲಾಹನ ಹೊಣೆಗಾರಿಕೆಯಾಗಿತ್ತು. ನಮ್ಮವರಲ್ಲಿ ಕೆಲವರು ನಿಧನ ಹೊಂದಿದರು. ಅವರು ಇಹಲೋಕದಲ್ಲಿ ಯಾವುದೇ ಪ್ರತಿಫಲ ಗಳಿಸಲಿಲ್ಲ. ಅಂತಹ ಜನರಲ್ಲಿ ಹಝ್ರತ್ ಮುಸ್‌ಇಬ್ ಬಿನ್ ಉಮೈರ್ ಒಬ್ಬರಾಗಿದ್ದಾರೆ. ನಮ್ಮವರಲ್ಲಿ ಇಂತಹ ಜನರು ಸಹ ಇದ್ದಾರೆ. ಅವರ ಫಲಗಳು ಪಕ್ವವಾದುವು ಹಾಗೂ ಅವರು ಅವುಗಳಿಂದ ಆಯ್ಕೆ ಮಾಡುತ್ತಿದ್ದಾರೆ. ಹಝ್ರತ್ ಮುಸ್‌ಇಬ್, ಉಹುದ್ ಯುದ್ಧದಲ್ಲಿ ಶಹೀದರಾದರು. ನಮಗೆ ಒಂದು ಚಾದರ ದೊರಕಿತು. ಅದನ್ನು ಅವರಿಗೆ ಕಫನ್ ಮಾಡಿದೆವು. ಅವರ ತಲೆಯನ್ನು ಆ ಚಾದರದಿಂದ ಮರೆ ಮಾಡಿದಾಗ ಕಾಲು ಚಾದರದಿಂದ ಹೊರಗೆ ಇರುತ್ತಿತ್ತು. ಕಾಲುಗಳನ್ನು ಮರೆ ಮಾಡಿದಾಗ ತಲೆ ಚಾದರದಿಂದ ಹೊರಗಾಗುತ್ತಿತ್ತು. ಆಗ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹೇಳಿದರು: ತಲೆಯನ್ನು ಚಾದರದಿಂದ ಮಾರೆಮಾಡಿರಿ ಮತ್ತು ಕಾಲುಗಳ ಮೇಲೆ ಹುಲ್ಲು ಹಾಕಿ ಮರೆಮಾಡಿರಿ.
(ಸಹೀಹ್ ಬುಖಾರಿ ಕಿತಾಬುಲ್ ಜನಾಎಝ್, ಹದೀಸ್–1276)

ಝೈದ್ ಬಿನ್ ವಹಬ್ ಹೇಳುತ್ತಾರೆ: ನಾವು ಹಝ್ರತ್ ಅಲಿ[ರ] ಅವರ ಜೊತೆಗೆ ಸಿಫ್ಫೀನ್ ಯುದ್ಧದಿಂದ ಮರಳಿ ಬರುತ್ತಿದ್ದಾಗ ಕೂಫ ನಗರದ ಹೆಬ್ಬಾಗಿಲಿನ ಸಮೀಪ ತಲಪಿದಾಗ ನಮ್ಮ ಬಲ ಭಾಗದಲ್ಲಿ ಏಳು ಗೋರಿಗಳನ್ನು ಕಂಡೆವು. ಹಝ್ರತ್ ಅಲಿ ಕೇಳಿದರು, ಈ ಗೋರಿಗಳು ಯಾರವು ಎಂದು. ಆಗ ಜನರು ಹೇಳಿದರು: ಓ ಅಮೀರುಲ್ ಮೂಮಿನೀನ್, ನೀವು ಯುದ್ಧಕ್ಕೆ ಹೊರಟುಹೋದ ನಂತರ ಖಬಾಬ್ ನಿಧನ ಹೊಂದಿದರು. ಅವರು ವಸಿಯ್ಯತ್ ಮಾಡಿದ್ದರು. ತನ್ನನ್ನು ಕೂಫ ಪಟ್ಟಣದ ಹೊರಭಾಗದಲ್ಲಿ ದಫನ್ ಮಾಡಬೇಕೆಂದು. ಅಲ್ಲಿನ ಜನರ ಆಚಾರ ಹೇಗಿತ್ತೆಂದರೆ ಮೃತರನ್ನು ಮನೆಯಂಗಳದಲ್ಲಿ ಅಥವಾ ಮನೆಯ ಬಾಗಿಲುಗಳ ಸಮೀಪ ದಫನ್ ಮಾಡುತ್ತಿದ್ದರು. ಆದರೆ ಹಝ್ರತ್ ಖಬಾಬ್ ಪಟ್ಟಣದ ಹೊರಗೆ ದಫನು ಮಾಡಲು ವಸಿಯ್ಯತ್ ಮಾಡಿದ್ದರೆಂದು ಜನರು ತಿಳಿದಾಗ ಅವರು ಸಹ ತಮ್ಮ ಮೃತರನ್ನು ಪಟ್ಟಣದ ಹೊರಗೆ ದಫನು ಮಾಡಲು ತೊಡಗಿದರು. ಹಝ್ರತ್ ಅಲಿ ಹೇಳಿದರು: ಅಲ್ಲಾಹನು ಖಬಾಬರ ಮೇಲೆ ಕಾರುಣ್ಯ ದೋರುವವನಾಗಲಿ. ಅವರು ತಮ್ಮ ಸ್ವಂತ ಇಷ್ಟ ಪ್ರಕಾರ ಮುಸ್ಲಿಮರಾದರು. ಅವರು ಅನಂತರ ಹಿಜ್‌ರತ್ ಮಾಡಿದರು. ಅವರು ಒಬ್ಬ ಮುಜಾಹಿದ್ ಆಗಿ ಜೀವಿಸಿದರು. ಅವರು ಶಾರೀರಿಕವಾಗಿ ಪರೀಕ್ಷೆಗಳಿಗೆ ಗುರಿಯಾದರು. ಯಾರು ಸತ್ಕರ್ಮ ಮಾಡುತ್ತಾನೋ ಅಲ್ಲಾಹನು ಅವನ ಪ್ರತಿಫಲವನ್ನು ನಾಶ ಮಾಡುವುದಿಲ್ಲ. ಅಂದರೆ ಅವರ ಶಾರೀರಿಕ ಸಂಕಷ್ಟಗಳು ಮತ್ತು ರೋಗಾವಸ್ಥೆ ತುಂಬಾ ದೀರ್ಘವಾಗಿರುವುದಿಲ್ಲ. ಅನಂತರ ಹಝ್ರತ್ ಅಲಿ ಆ ಗೋರಿಗಳ ಸಮೀಪಕ್ಕೆ ಹೋಗಿ ಪ್ರಾರ್ಥಿಸಿದರು. ಗೋರಿಗಳ ನಿವಾಸಿಗಳಾದ ಸತ್ಯವಿಶ್ವಾಸಿಗಳಾದ ಮುಸ್ಲಿಮರೇ ನಿಮ್ಮ ಮೇಲೆ ಶಾಂತಿ ಇರಲಿ. ನೀವು ನಮಗಿಂತ ಮುಂದಾಗಿ ಹೋಗಿ ನಿಮ್ಮ ಹಿಂದೆ ಬೇಗನೆ ಬಂದು ನಿಮ್ಮನ್ನು ಸೇರಲಿರುವ ನಮಗೋಸ್ಕರ ವ್ಯವಸ್ಥೆ ಮಾಡುವವರಾಗಿರುವಿರಿ. ಓ ಅಲ್ಲಾಹ್, ನೀನು ನಮ್ಮನ್ನೂ ಅವರನ್ನೂ ಕ್ಷಮಿಸು. ನೀನು ನಿನ್ನ ಕ್ಷಮೆ ಮೂಲಕ ನಮ್ಮ ಮತ್ತು ಅವರ ತಪ್ಪುಗಳನ್ನು ಕಡೆಗಣಿಸು. ಪರಲೋಕದ ಬಗ್ಗೆ ನೆನಪು ಹೊಂದಿರುವವನಾಗಿ ಅಲ್ಲಿ ನಡೆಯುವ ಲೆಕ್ಕಾಚಾರವನ್ನು ಪರಿಗಣಿಸಿ ಕೃತ್ಯಗಳನ್ನು ಮಾಡುವವನಿಗೆ ಶುಭವಾರ್ತೆ ಇದೆ. ಪ್ರತಿಯೊಬ್ಬನು ತನ್ನ ಆವಶ್ಯಕತೆಗಳನ್ನು ಈಡೇರಿಸುವ ವಸ್ತುಗಳಿಗೆ ಸಂಬಂಧಿಸಿ ಆತ್ಮ ಸಂತೃಪ್ತಿ ಹೊಂದಬೇಕು ಮತ್ತು ಸರ್ವಶಕ್ತನಾದ ಅಲ್ಲಾಹನ ಸಂಪ್ರೀತಿ ಹೊಂದಿದವನಾಗುವಂತೆ ಆಗಬೇಕು. (ಉಸದುಲ್‌ಗಾಬ ಫೀ ಮಾರಿಫತಿಸ್ಸಹಾಬ ಸಂಪುಟ–2, ಪುಟ–149, ದಾರುಲ್ ಕುತುಬ್ ಇಲ್‌ಮಿಯಾ ಬೈರೂತ್ 2003) ಹಝ್ರತ್ ಅಲಿ[ರ] ರವರು ಅಲ್ಲಿ ಹೀಗೆ ದುಆ ಮಾಡಿದರು.

ಹಝ್ರತ್ ಖಬಾಬ್ ಹಿಜರಿ ವರ್ಷ 37ರಲ್ಲಿ ತನ್ನ 73ನೇ ವಯಸ್ಸಿನಲ್ಲಿ ನಿಧನ ಹೊಂದಿದರು. (ಅತ್ತಬಖಾತುಲ್ ಕುಬ್ರ ಲಿಇಬ್ನೆ ಸಅದ್ ಸಂಪುಟ-3, ಪುಟ-124, ದಾರುಲ್ ಕುತುಬ್ ಇಲ್ಮಿಯಾ ಬೈರೂತ್ 1990)

****************

*(ಪುಟ ಸಂಖ್ಯೆ 01ರ ಉಳಿದ ಭಾಗ)*

ಮತ್ತು ಇತ್ತ ಕಡೆಯೂ ವಾಲುವನೋ ಅವನು ನೆನಪಿಡಲಿ ತುಂಬ ದೌರ್ಭಾಗ್ಯವಂತನು ಮತ್ತು ವಂಚಿತನು. ಅವನಿಗೆ ಮೌಖಿಕವಾಗಿ ಹಾಗೂ ಆಡಂಬರವಾಗಿ ಆರಾಧಿಸಲು ಆಗದಂತಹ ಸಮಯ ಬರಬಹುದಾಗಿದೆ.

ನಮಾಝ್ ತ್ಯಜಿಸುವ ಅಭ್ಯಾಸ ಮತ್ತು ಅನಾಸಕ್ತಿ ಬರಲು ಕಾರಣ ಅವನು ಅಲ್ಲಾಹನ ಹೊರತು ಇತರರೆಡೆ ಬಾಗುವುದಾಗಿದೆ. ಅವನ ಆತ್ಮ ಮತ್ತು ಹೃದಯಗಳ ಶಕ್ತಿಗಳು ಆ ವೃಕ್ಷದ ರೀತಿ (ಅದರ ಶಾಖೆಗಳು ಪ್ರಾರಂಭದಲ್ಲಿ ಒಂದೇ ಕಡೆ ವಾಲಿಕೊಂಡು ಇದ್ದರೆ) ಆ ಕಡೆಯೇ ವಾಲಿಕೊಂಡಿರುತ್ತದೆ. ಅಲ್ಲಾಹನ ಕಡೆಯಿಂದ ಒಂದು ಕಠಿಣತೆ ಮತ್ತು ನಿರ್ಧಯತೆ ಹೃದಯದಲ್ಲಿ ಉಂಟಾಗಿ ಅವನನ್ನು ಕಲ್ಲಿನಂತೆ ಮಾಡಿಬಿಡುತ್ತದೆ. ಆ ಶಾಖೆಯ ತರಹ ಮತ್ತೆ ಇನ್ನೊಂದೆಡೆ ವಾಲಲು ಸಾಧ್ಯವಾಗುವುದಿಲ್ಲ. ಅದೇ ರೀತಿ ಆ ಹೃದಯ ಮತ್ತು ಆತ್ಮ ದಿನೇ ದಿನೇ ಅಲ್ಲಾಹನಿಂದ ದೂರವಾಗತೊಡಗುತ್ತದೆ. ಆದುದರಿಂದ ಇದು ಅತ್ಯಂತ ಭಯಾನಕವು ಮತ್ತು ಹೃದಯವನ್ನು ಕಂಪಿಸುವ ವಿಷಯವಾಗಿದೆ. ಮನುಷ್ಯನು ಅಲ್ಲಾಹನ

ಹೊರತು ಇತರರಿಂದ ಬೇಡುವುದು. ಆ ಕಾರಣದಿಂದಲೇ ನಮಾಝಿನ ವ್ಯವಸ್ಥೆ ಮತ್ತು ಪಾಲನೆ ಬಹು ಅವಶ್ಯವಾಗಿದೆ. ಏಕೆಂದರೆ ಮೊದಲು ಒಂದು ನಿಯಮಿತ ಅಭ್ಯಾಸದಂತಾಗಬೇಕು ಮತ್ತು ನಿಧಾನವಾಗಿ ಅಲ್ಲಾಹನೊಡನೆ ಸಂಪರ್ಕ ಬೆಳೆಸಬೇಕು. ಆಗ ಒಂದು ಸಮಯ ಬರುತ್ತದೆ. ಅವನು ಎಲ್ಲ ಭೌತಿಕ ಮೋಹ ತ್ಯಜಿಸಿ ಅಲ್ಲಾಹನ ಒಂದು ಪ್ರಕಾಶ ಮತ್ತು ಸಂತೋಷ ಪಡೆಯಲು ಅರ್ಹನಾಗುತ್ತಾನೆ. ನಾನು ಈ ಮಾತನ್ನು ಮತ್ತೆ ಒತ್ತಿ ಹೇಳುವೆನು. ಅಲ್ಲಾಹನ ಹೊರತಾಗಿ ಬಾಳುವವನ ನ್ಯೂನತೆಗಳನ್ನು ಹೇಳಲು ಸಾಧ್ಯವಿಲ್ಲ. ತುಂಬ ವಿಷಾದ ಅನಿಸುತ್ತದೆ. ಜನರ ಮುಂದೆ ಹೋಗಿ ದಮ್ಮಯ್ಯ ಹಾಕುತ್ತಾರೆ. ಈ ಮಾತು ಅಲ್ಲಾಹನಿಗೆ ಕೆರಳಿಸಿದಂತಾಗುತ್ತದೆ. ಏಕೆಂದರೆ ಇದು ಜನರ ಉಪಾಸನೆಯಾಗಿದೆ. ಅದರಿಂದ ಅಲ್ಲಾಹನು ದೂರ ಸರಿಯುತ್ತಾನೆ ಮತ್ತು ಅವನನ್ನು ದೂರ ಎಸೆಯುತ್ತಾನೆ. ನಾನು ಸರಳ ರೀತಿಯಲ್ಲಿ ಹೇಳಬಯಸುತ್ತೇನೆ. ಅದಾಗ್ಯೂ ಅದು ಆ ರೀತಿ ಅಲ್ಲ. ಆದರೆ ಅರಿಯಲು ಸುಲಭವಾಗುತ್ತದೆ. ಯಾವ ರೀತಿ ಒಬ್ಬ ಪುರುಷನಿಗೆ ತನ್ನ ಪತ್ನಿಯರ ಅನ್ಯ ಸಂಬಂಧ ಸಹಿಸಲಾಗುವುದಿಲ್ಲವೋ, ಆಗ ಅವನು ಅವಳನ್ನು ಹತ್ಯೆ ಮಾಡಲು ಸಹ ಹೇಸುವುದಿಲ್ಲವೋ. ಕೆಲವೊಮ್ಮೆ ಇಂತಹ ಘಟನೆಗಳು ಆಗಿಯೇ ತೀರುತ್ತದೆ. ಇಂತಹುದೆ ಆಕ್ರೋಶ ದೇವತ್ವದಲ್ಲೂ ಕಾಣಬಹುದಾಗಿದೆ. ಆರಾಧನೆ ಮತ್ತು ಪ್ರಾರ್ಥನೆಗೆ ಅವನು ಮಾತ್ರ ಅರ್ಹನಾಗಿದ್ದಾನೆ. **(ಮಲ್‌ಫೂಝಾತ್ ಸಂಪುಟ-01, ಪುಟ-143-146, ಖಾದಿಯಾನ್ 2018)**

*(ಪುಟ ಸಂಖ್ಯೆ 12ರ ವರದಿಯ ಉಳಿದ ಭಾಗ)*

ಇಂದಿನ ಸಂಜೆಯು ನನಗೆ ಒಂದು ಫಲಪ್ರದವಾದ ಶಾಂತಿಯ ಸಂದೇಶವನ್ನು ನೀಡಿದೆ.

* ಇನ್ನೋರ್ವ ಅತಿಥಿ Helmot Kirah ಅವರು ಒಂದು ಸ್ಥಳೀಯ ಶಾಲೆಯ ವತಿಯಿಂದ ಸಮಾರಂಭಕ್ಕೆ ಆಗಮಿಸಿದ್ದರು. ಅವರು ಹೀಗೆ ಹೇಳಿದರು. ಇಮಾಮ್ ಜಮಾಅತ್ ಅಹ್ಮದಿಯಾ ಅವರ ಇಂದಿನ ಭಾಷಣ ಎಲ್ಲ ಶಾಲೆಗಳಲ್ಲಿ ವಿದ್ಯಾರ್ಥಿಗಳು ಆಲಿಸುವಂತೆ ಮಾಡಬೇಕು. ನೀವು ಏನು ತಿಳಿದುಕೊಂಡಿದ್ದೀರಿ? ನಿಮ್ಮ ದೃಷ್ಟಿಯಲ್ಲಿ ಈ ಸುಂದರವಾದ ಶಿಕ್ಷಣ ಯಾವ ಧರ್ಮದ್ದಿರಬಹುದು? ಕನಿಷ್ಠ ಮಟ್ಟ ನನಗಾದರೂ ಇದರ Audio vedio Recording ಒದಗಿಸಿರಿ. ನಾನು ನನ್ನ ಶಾಲೆಯ ವಿದ್ಯಾರ್ಥಿಗಳಿಗೆ ಇದನ್ನು ತೋರಿಸಬಯಸುತ್ತೇನೆ.

* ಇನ್ನೋರ್ವ ಅತಿಥಿ Miss Ihrig ಸಾಹಿಬಾ ತಮ್ಮ ಭಾವನೆಗಳನ್ನು ಹೀಗೆ ವ್ಯಕ್ತಪಡಿಸಿದರು. ಇಮಾಮ್ ಜಮಾಅತ್ ಅಹ್ಮದಿಯಾ ಅವರ ಪಾವಿತ್ರ್ಯತೆ ಘನತೆ, ಗೌರವ ನನ್ನ ಮನಸ್ಸಿನಲ್ಲಿದ್ದರೂ ನನಗೆ ಅವರ ಭಾಷಣದ ಈ ವಾಕ್ಯ ತುಂಬಾ ಪ್ರಭಾವ ಬೀರಿತು. ಅವರು ಹೇಳಿದರು. ಈ ಕಾಲದಲ್ಲಿ ಅಂತರಾಷ್ಟ್ರೀಯ ಮಟ್ಟದಲ್ಲಿ ಶಾಂತಿ ಸ್ಥಾಪನೆಗೆ ಮೊದಲ ಹೆಜ್ಜೆ ಎಂದರೆ ನಾವು ನಮ್ಮ ಮನಸ್ಸುಗಳನ್ನು ಉದಾರಗೊಳಿಸಬೇಕಾಗಿರುವುದು ಮತ್ತು ಇತರರ ಭಾವನೆಗಳನ್ನು ಮತ್ತು ವಿಶ್ವಾಸಗಳನ್ನು ಗೌರವಿಸಬೇಕಾಗಿರುವುದು.

* ಒಬ್ಬ ವಿದ್ಯಾರ್ಥಿ Lueas Goerke ಹೇಳುತ್ತಾರೆ. ಧರ್ಮ ಧರ್ಮಗಳ ಮಧ್ಯೆ ಏಕತೆ ಮತ್ತು ಲೌಕಿಕ ಶಾಂತಿ ಕುರಿತು ನಿಮ್ಮ ಖಲೀಫರು ಹೇಳಿದ ಎಲ್ಲ ಮಾತುಗಳೊಂದಿಗೆ ನಾನು ಸಹಮತ ಹೊಂದಿದ್ದೇನೆ. ಅದರ ಫಲವಾಗಿ ಸಮಾಜದಲ್ಲಿ ಶಾಂತಿ ನೆಲೆನಿಲ್ಲಬಹುದು. ನನಗೆ ಇಮಾಮ್ ಜಮಾಅತ್ ಅಹ್ಮದಿಯಾ ಅವರ ಸರಳ ಮತ್ತು ವಿನಮ್ರ ಸ್ವಭಾವ ತುಂಬ ಮೆಚ್ಚುಗೆಯಾಯಿತು.

* ಮನ್‌ಪ್ರೀತ್‌ಸಿಂಗ್ ಸಹಿಬಾ ತಮ್ಮ ಅನಿಸಿಕೆಗಳನ್ನು ತಿಳಿಸುತ್ತಾ ಹೀಗೆ ಹೇಳಿದರು. ಅವರ ಭಾಷಣದ ಪದಗಳು ತುಂಬಾ ಪ್ರಭಾವಪೂರ್ಣವಾಗಿದ್ದವು ಮತ್ತು ಅವರ ಮಾತುಗಳು ನೇರವಾಗಿ ಮನಮುಟ್ಟುವಂತಿದ್ದವು. ಆ ಶ್ರೇಯ ಮಹೋನ್ನತ ಲೌಕಿಕ ವ್ಯಕ್ತಿಗಳಿಗೂ ದೊರಕಲಿಕ್ಕಿಲ್ಲ. ಅವರ ವ್ಯಕ್ತಿತ್ವ ತುಂಬ ಪ್ರಭಾವಪೂರ್ಣವಾಗಿದೆ. ಅವರು ಶಾಂತಿಯ ಮಾತನಷ್ಟೇ ಆಡುತ್ತಿರಲಿಲ್ಲ. ಅವರಲ್ಲಿರುವ ಶಾಂತಚಿತ್ತತೆಯು ಅದಕ್ಕೆ ಸಾಕ್ಷಿಯಾಗಿತ್ತು. ವಿಶೇಷವಾಗಿ ಗೊಂದಲದ ವಾತಾವರಣವನ್ನು ದನಗಳಿಗೆ ಹೋಲಿಸಿ ಮಾತನಾಡಿದ್ದು ಮನಕುಲಕುವಂತಿತ್ತು. ಈ ಉದಾಹರಣೆಯು ಪ್ರಗತಿಶೀಲ ಸಮಾಜವನ್ನು ಪ್ರತಿಪಾದಿಸುವವರಿಗೆ ಒಳ್ಳೆಯ ಸಂಕೇತವಾಗಿತ್ತು. ನನಗೆ ಇಮಾಮ್ ಜಮಾಅತ್ ಅವರ ಪ್ರೌಢ ಭಾಷಣ ತುಂಬ ಹಿಡಿಸಿತು.

* ಪಕ್ಕದ ನಗರದ ಮೇಯರ್ Werner Dietrich ಸಾಹಿಬ್ ತಮ್ಮ ಭಾವನೆಗಳನ್ನು ಹೀಗೆ ವ್ಯಕ್ತಪಡಿಸಿದರು. ಇಮಾಮ್ ಜಮಾಅತ್ ಅಹ್ಮದಿಯಾ ಅವರು ತಮ್ಮ ಭಾಷಣದಲ್ಲಿ ಆಯ್ದುಕೊಂಡ ಪದಗಳನ್ನು ನೋಡಿ ಆಶ್ಚರ್ಯವಾಯಿತು. ಅವರು ಸಮಾಧಾನಚಿತ್ತದಿಂದ ವಿನಮ್ರ ಶೈಲಿಯಲ್ಲಿ ಸಂದೇಶ ನೀಡಿದರು. ಇತ್ತಂಡಗಳ ಆತಂಕಗಳನ್ನು ಮತ್ತು ವರ್ತನೆಗಳನ್ನು ತುಲನಾತ್ಮಕವಾಗಿ ಪ್ರಸ್ತುತಪಡಿಸಿದರು. ಮತ್ತು ಸಮಾಜದಲ್ಲಿರುವ ವರ್ಗಗಳ ಭೇಧಭಾವ ಬಿಚ್ಚಿ ತೋರಿಸಿದರು ಹಾಗೂ ನೇರ ಮಾತುಗಳಲ್ಲಿ ಅದನ್ನು ಸ್ಪಷ್ಟಪಡಿಸಿದರು. ಶಾಂತಿ ಭಂಗಕ್ಕೆ ಕಾರಣವಾಗುವಂತಹ ಸನ್ನಿವೇಶಗಳನ್ನು ವಿವರಿಸಿದರು. ಅದರೂ ಯಾವುದೇ ಒಂದು ವರ್ಗ, ಪಂಥ ಅಥವಾ ಗುಂಪಿನ ಗೌರವಕ್ಕೆ ಚ್ಯುತಿ ತರಲಿಲ್ಲ. ಯಾರದೇ ಮನ ನೋಯಿಸುವಂತಹ ಮಾತುಗಳನ್ನಾಡಲಿಲ್ಲ. ಬದಲಾಗಿ ಸಾಮೂಹಿಕ ಮತ್ತು ಮಾನಸಿಕ ಜಾಗೃತಿ ಹಾಗೂ ಅಂತರಾಷ್ಟ್ರೀಯ ಮಾನವ ಮೌಲ್ಯಗಳ ಕುರಿತು Food for thought ಎಂಬ ನೆಲೆಯಲ್ಲಿ ಮಾತನಾಡುತ್ತಾ ಹೋದರು. ತಮ್ಮವರ ಮತ್ತು ಇತರರ ಕ್ಷೇಮ ಕಲ್ಯಾಣವನ್ನು ಬಯಸುತ್ತ ತಮ್ಮ ಮಾತುಗಳನ್ನು ಮುಗಿಸಿದರು.

* Miss Sybille ಸಾಹಿಬ ಹೇಳುತ್ತಾರೆ. ಇಮಾಮ್ ಜಮಾಅತ್ ಅಹ್ಮದಿಯಾ ಮಾನವ ಕುಲವನ್ನು ಉಪದೇಶಿಸುವಾಗಲೂ ಹಾಗೂ ಎಚ್ಚರಿಸುವಾಗಲೂ ಬಹಳ ವಿವೇಕತೆಯಿಂದ ಶಬ್ದಗಳನ್ನು ಬಳಸಿಕೊಂಡರು. ಮೃದುತನವನ್ನು ತೋರಿದರು. ಅವರ ಸಮಾದಾನಚಿತ್ತತೆ, ವಿನಮ್ರತೆ, ಅವರು ಮಾತನಾಡುವ ಶೈಲಿ ಅವರ ವ್ಯಕ್ತಿತ್ವಕ್ಕೆ ಹಿಡಿದ ಕನ್ನಡಿಯಾಗಿತ್ತು. ಅವರ ಭಾಷಣಕ್ಕಿಂತ ಮುಂಚೆ ಅವರ ಪರಿಶುದ್ಧ ವ್ಯಕ್ತಿತ್ವದಿಂದ ಪ್ರಭಾವಿತನಾಗಿದ್ದೆ. ಅವರ ಮಾತುಗಳ ಪ್ರಭಾವವು ಅದಕ್ಕೆ ಪುಷ್ಟಿ ನೀಡಿತು. ಮುಂದುವರೆದು ಹೇಳಿದರು. ನೀವು ತುಂಬ ಉನ್ನತ ಹಾಗೂ ಉತ್ತಮ ರೀತಿಯಲ್ಲಿ ಈ ಸಭೆಯನ್ನು ಆಯೋಜಿಸಿದ್ದೀರಿ. ಇಮಾಮ್ ಜಮಾಅತ್ ಅಹ್ಮದಿಯಾ ಅವರ ಆಗಮನ ಅವರೆಲ್ಲರ ಮೇಲೆ ಕಳಶವಿದ್ದಂತಾಯಿತು. ನಾನು ನಿರಂತರವಾಗಿ ಈ ಯೋಚನೆಗೆ ಒಳಗಾದೆ, "ಕೇವಲ 450 ಜನರನ್ನು ಭೇಟಿಯಾಗಲು ಮತ್ತು ಸಮಾಜದ ಎಲ್ಲ ವರ್ಗಗಳಿಗೆ ಸಂಬಂಧಿಸಿದ ಜನರನ್ನು ಭೇಟಿಯಾಗಲು, ಪೋಪರನ್ನು ಕರೆದಿದ್ದರೆ ಇಷ್ಟೊಂದು ದೀರ್ಘವಾದ ಪ್ರಯಾಣ ಮಾಡಿ ಅವರು ಬರುತ್ತಿದ್ದರೇ? ಈ ಭಾವನೆಯು ನನ್ನ ಮನಸ್ಸಿನ ಮೇಲೆ ಗಾಢವಾದ ಪರಿಣಾಮ ಬೀರಿತು. ಧಾರ್ಮಿಕ ನೇತಾರರಿದ್ದರೆ ಹೀಗಿರಬೇಕು. ಅವರು ಸಾಮಾನ್ಯ ಜನರ ಸಮಸ್ಯೆಗಳನ್ನು ತಮ್ಮ ಸ್ವಂತ ಸಮಸ್ಯೆಯಂತೆ ಭಾವಿಸಬೇಕು.

* Miss oschkimis ಸಾಹಿಬ ತಮ್ಮ ಭಾವನೆಗಳನ್ನು ಹೀಗೆ ಹೇಳಿದರು. ಇಮಾಮ್ ಜಮಾಅತ್ ಅಹ್ಮದಿಯಾ ಅವರು ಮಾತನಾಡಿದರೆ ಅಡ್ಡ ಗೋಡೆಯಲ್ಲಿ ದೀಪವಿಟ್ಟ ಹಾಗೆ ಮಾತನಾಡುವುದಿಲ್ಲ. ಬದಲು ನೇರವಾಗಿ, ಸತ್ಯವಾಗಿ ಮಾತನಾಡುತ್ತಾರೆ ಅವರ ಸಮಾಧಾನಭರಿತ ಮಾತುಗಳು ವಿಶ್ವಾಸ ತರುವಂತಿರುತ್ತವೆ. ಏಕೆಂದರೆ ಅದರಲ್ಲಿ ಮಾನವೀಯತೆಯ ನೈಜ ಕಳಕಳಿ ಅಡಗಿದೆ. ಅವರ ಕಾರ್ಯಕರ್ತರು ಸಹ ಫಲಾಪೇಕ್ಷೆಯಿಲ್ಲದೆ ಈ ದೊಡ್ಡ ಪ್ರಮಾಣದ ಸಮಾರಂಭವನ್ನು ಆಯೋಜಿಸಿದ್ದಾರೆ. ಸಮಾಜದಲ್ಲಿ ಶಾಂತಿ ಸ್ಥಾಪಿಸಲು ಮತ್ತು ಮಾನವ ಮೌಲ್ಯಗಳನ್ನು ಉದ್ದೀಪನಗೊಳಿಸಲು ಇಂತಹ ಸೇವಾ ಮನೋಬಾವದ ಜಮಾಅತ್ ಮತ್ತು ಇಂತಹ ವಿಶ್ವಾಸದಾಯಕ ನೇತಾರರ ಅವಶ್ಯಕತೆ ಇದೆ ಎಂದು ನಾನು ಭಾವಿಸುತ್ತೇನೆ.

* Dr. Koehler ಸಾಹಿಬ ತಮ್ಮ ಅನಿಸಿಕೆಗಳನ್ನು ಹೀಗೆ ಹಂಚಿಕೊಂಡರು. ನಿಮ್ಮ ಇಮಾಮರ ಹೃದಯವಂತಿಕೆಯು ನನ್ನ ಮೇಲೆ ತುಂಬ ಪ್ರಭಾವ ಬೀರಿದೆ. ಅವರು ಮಾನವ ಮೌಲ್ಯಗಳನ್ನು ನೆಲೆಗೊಳಿಸಲು ಕರೆ ನೀಡುತ್ತಿದ್ದರು. ತಮ್ಮ ಹೃದಯಗಳನ್ನು ತೆರೆಯಬೇಕಾಗುವುದು, ಆತಂಕಗಳನ್ನು ದೂರ ಮಾಡಬೇಕಾಗುವುದು. ನಿಮ್ಮ ಜಮಾಅತಿನ ಜನರು ಅತ್ಯಂತ ಸಜ್ಜನರು ಮತ್ತು ಉನ್ನತ ನಡವಳಿಕೆ ಹೊಂದಿದವರಾಗಿದ್ದಾರೆ. ನಾನು ಸಹ ನನ್ನ

ಆಸ್ಪತ್ರೆಯಲ್ಲಿ ಅಂತಹ ಧರ್ಮಿಯರಲ್ಲಿ ಸೌಹಾರ್ದತೆ ಬೆಳೆಸಲು ಪ್ರಯತ್ನಿಸುವೆನು. ಅದರಿಂದ ಆಧ್ಯಾತ್ಮಿಕ ಶಾಂತಿ ದೊರೆಯುವುದು. ಇಂದು ಆ ಶಾಂತಿ ನನಗೆ ಈ ಸಮಾರಂಭದಲ್ಲಿ ದೊರೆತಂತಾಗಿದೆ. ಇಲ್ಲಿಗೆ ಬರುವ ಸಂದರ್ಭ ಒದಗಿ ಬಂದದ್ದಕ್ಕೆ ನಾನು ತುಂಬ ಸಂತುಷ್ಠಳಾಗಿದ್ದೇನೆ.

* Harald Bonesal ಸಾಹಿಬ್ ಹೇಳುತ್ತಾರೆ. ಹುಝೂರ್ ತಮ್ಮ ಭಾಷಣ ಅತ್ಯಂತ ಸುಂದರ ರೀತಿಯಲ್ಲಿ ಪ್ರಸ್ತುತಪಡಿಸಿದ್ದಾರೆ. ಈ ಭಾಷಣದಿಂದ ನನಗೆ ಬಹಳಷ್ಟು ಕಲಿಯುವಂತಾಗಿದೆ. ನಮ್ಮ ನಡುವೆ ಏಕಮತ ಹೊಂದಿದ ವಿಷಯಗಳನ್ನು ಮುಂದಿರಿಸಿದ್ದಾರೆ. ಆ ಮೂಲಕ ಒಬ್ಬರು ಇನ್ನೊಬ್ಬರನ್ನು ಅರಿಯುವ ಮಾರ್ಗ ತೆರೆದಿದ್ದಾರೆ. ನಾವು ಇಸ್ಲಾಮಿನ ಬಗ್ಗೆ ಇಟ್ಟುಕೊಂಡಿರುವಂತಹ ಸಾಮಾನ್ಯ ಜ್ಞಾನ ಸರಿಯಾದುದಲ್ಲ. ನಮಗೆ ಇಮಾಮ್ ಜಮಾಅತ್ ಅಹ್ಮದಿಯಾ ಇಸ್ಲಾಮಿನ ಕುರಿತು ಹೇಳಿರುವ ಮಾತುಗಳ ಮೇಲೆ ಚಿಂತಿಸುವ ಅಗತ್ಯವಿದೆ.

* Sonja Schmitt ಸಾಹಿಬಾ ಹೇಳುತ್ತಾರೆ. ನಾನು ಹೃದಯಪೂರ್ವಕವಾಗಿ ಹುಝೂರರಿಗೆ ಕೃತಜ್ಞಳಾಗಿದ್ದೇನೆ. ನೀವು ನನ್ನ ಮನಸ್ಸಿನಲ್ಲಿ ಇದ್ದಂತಹ ಮಾತುಗಳನ್ನು ಹೇಳಿದ್ದೀರಿ. ಇಂದಿನ ಹೊಸ ಯುಗಕ್ಕೆ ನೀಡಬಹುದಾದ ಅತ್ಯುತ್ತಮ ಆಧ್ಯಾತ್ಮಿಕ ಸಾಕ್ಷ್ಯಗಳನ್ನು ಒದಗಿಸಿದ್ದೀರಿ. ನಾನು ಓರ್ವ ಕ್ರೈಸ್ತಳಾಗಿದ್ದರೂ ಸ್ವಯಂ ಮುಸ್ಲಿಂ ಎಂಬ ರೀತಿಯಲ್ಲಿ ನಿಮ್ಮ ಭಾಷಣವನ್ನು ಗಮನಿಸಿರುತ್ತೇನೆ.

* Miss Peiv ಎಂಬ ಮಹಿಳೆಯು ತನ್ನ ಅನಿಸಿಕೆಗಳನ್ನು ಹೀಗೆ ವ್ಯಕ್ತಪಡಿಸಿದರು. ನನಗೆ ನಿಮ್ಮ ಖಲೀಫರು ಆಶ್ಚರ್ಯಜನಕ ವ್ಯಕ್ತಿಗಳಾಗಿ ಕಾಣುವಂತಾಗಿದೆ. ನಾನು ಸ್ವಲ್ಪ ಸಮಯ ಇಲ್ಲಿ ಇದ್ದು ಮರಳಬೇಕು ಎಂಬ ಉದ್ದೇಶದಿಂದ ಬಂದಿದ್ದೆ. ಏಕೆಂದರೆ ನನಗೆ ನಾಲ್ಕು ಮಕ್ಕಳಿದ್ದಾರೆ. ಇಂದು ನನ್ನ ತಂಗಿ ಅವರನ್ನು ನೋಡಿಕೊಳ್ಳುತ್ತಿದ್ದಾಳೆ. ಆದರೆ ನಾನು ಈಗ ಅವಳಿಗೆ Message ಕಳುಹಿಸಿರುತ್ತೇನೆ. ನಾನು ಇನ್ನೂ ಹೆಚ್ಚು ಸಮಯ ಇಲ್ಲಿ ಇರುತ್ತೇನೆ. ಏಕೆಂದರೆ ನಾನು ಹುಝೂರ್(ಅಬಿಅ) ರವರ ಸಂಪೂರ್ಣ ಭಾಷಣ ಕೇಳಬಯಸುತ್ತೇನೆ. ಅವರ ಉಪಸ್ಥಿತಿಯಲ್ಲಿ ಎದ್ದು ಬರಲು ಸಾಧ್ಯವಿಲ್ಲ.

* ಅಧ್ಯಾಪಕರಾದ Ben Elm ಸಾಹಿಬ್ ಹೇಳುತ್ತಾರೆ. ನಾನು ಹುಝೂರ್(ಅಬಿಅ) ಭಾಷಣದಿಂದ ತುಂಬ ಪ್ರಭಾವಿತನಾಗಿದ್ದೇನೆ. ಅದಕ್ಕೆ ವಿಶೇಷ ಕಾರಣವೇನೆಂದರೆ ಅವರ ಪೂರ್ವಸಿದ್ಧತೆಯಲ್ಲಿ ಭಾಷಣ ಮಾಡಿದ್ದರೂ ಇತರ ಭಾಷಣಗಾರರ ಮಾತುಗಳನ್ನು ತನ್ನ ಭಾಷಣದಲ್ಲಿ ಉಲ್ಲೇಖಿಸಿದ್ದಾರೆ. ಅವರು ನೀಡಿದಂತಹ ಶಾಂತಿ ಸಂದೇಶವು ಮತ್ತು ಧರ್ಮಗಳ ಹೊಣೆಗಾರಿಕೆಗಳು ಸಮಾಜದಲ್ಲಿ ನಿಜವಾದ ಶಾಂತಿ ಸ್ಥಾಪನೆಗೆ ಅರ್ಹವಾಗಿವೆ.

* ಜರ್ಮನಿಯ ಸುಪ್ರಸಿದ್ಧ T.V. ಮತ್ತು Radio Station ಸಂಪಾದಕಿ Miss Klostermann ತಮ್ಮ ಅನಿಸಿಕೆಗಳನ್ನು ಹೀಗೆ ಹಂಚಿಕೊಂಡರು: ನಿಮ್ಮ ಖಲೀಫರ ಪದಗಳು ಜ್ಞಾನ ಹಾಗೂ ವಿವೇಕದಿಂದ ಕೂಡಿದ್ದಾಗಿದ್ದವು.

* ಓರ್ವ ರಾಜಕೀಯ ಪ್ರತಿನಿಧಿ Elvira Mihm ಸಾಹಿಬಾ ಹೇಳುತ್ತಾರೆ. ನನಗೆ ಈ ಸಮಾರಂಭದ ಎಲ್ಲ ಕಾರ್ಯಕ್ರಮಗಳೂ ಅತ್ಯಂತ ಮೆಚ್ಚುಗೆಯಾಗಿದೆ. ನಿಮ್ಮ ಖಲೀಫರು ಅದ್ಭುತ ವ್ಯಕ್ತಿತ್ವವುಳ್ಳವರಾಗಿದ್ದಾರೆ. ಅವರನ್ನು ಕಂಡು ಒಂದು ವಿಶೇಷ ಅದ್ವಿತೀಯ ಭಾವನೆ ಉಂಟಾಗುತ್ತದೆ. ಅವರ ಭಾಷಣವು ಅವರ ವ್ಯಕ್ತಿತ್ವಕ್ಕೆ ತಕ್ಕಂತಿತ್ತು.

* Themain ಸಾಹಿಬಾ ಹೇಳುತ್ತಾರೆ. ನಾನು ನಿಮ್ಮ ಖಲೀಫರನ್ನು ಓರ್ವ ಆಧ್ಯಾತ್ಮಿಕ ಪ್ರಭಾವ ಹೊಂದಿದ ವ್ಯಕ್ತಿಯನ್ನಾಗಿ ಪರಿಗಣಿಸಿದ್ದೇನೆ. ಕಾರ್ಯಕ್ರಮ ಮುಗಿಯುವವರೆಗೆ ನನ್ನಲ್ಲಿ ಇದೇ ಭಾವನೆ ಆವರಿಸಿತ್ತು. ನನಗೆ ಹುಝೂರ್(ಅಬಿಅ) ರವರ ವ್ಯಕ್ತಿತ್ವ ಅತ್ಯಂತ ಶಾಂತಿದಾಯಕವಾಗಿ ಕಂಡಿತು. ಅವರ ಭಾಷಣವು ಸಹ ನನಗೆ ಸಾಮಾಜಿಕ ವರಸೆ ಮತ್ತು ಆಧುನಿಕ ಯುಗದಲ್ಲಿ ಮಾನವ ಮೌಲ್ಯಗಳನ್ನು ಎತ್ತಿ ಹಿಡಿಯುವಂತೆ ತೋರಿತು. ವಿಶೇಷವಾಗಿ ಅವರು ಇತರರ ಭಾಷಣಗಳನ್ನು ತನ್ನ ಭಾಷಣದಲ್ಲಿ ಸಮ್ಮಿಳಿತಗೊಳಿಸಿದ್ದು ಮತ್ತು ಅವರು ವಿವರಿಸಿದ ಟಿಪ್ಪಣಿಗಳನ್ನು ತನ್ನ ಭಾಷಣದ ಭಾಗವನ್ನಾಗಿ ಮಾಡಿದ್ದು ಪ್ರಭಾವ ಬೀರಿದೆ.

* Damiela Oterwein ಸಾಹಿಬಾ ತಮ್ಮ ಭಾವನೆಗಳನ್ನು ಹೀಗೆ ಸ್ಪಷ್ಟಪಡಿಸಿದರು. ನನಗೆ ಹುಝೂರ್(ಅಬಿಅ) ತುಂಬ ಒಳ್ಳೆಯವರಾಗಿ ಕಂಡಿದ್ದಾರೆ. ಅವರು ಎಷ್ಟೊಂದು ಮಹೋನ್ನತರು ಎನ್ನುವುದು ನನಗೆ ಪದಗಳಲ್ಲಿ ವಿವರಿಸಲು ಸಾಧ್ಯವಿಲ್ಲ. ಅವರು ಪ್ರಕಾಶದಿಂದ ತುಂಬಿ ತುಳುಕುವ ವ್ಯಕ್ತಿಯಾಗಿದ್ದಾರೆ. ಇದಕ್ಕೆ ಮುಂಚೆ ಇಸಾಮಿನ ಬಗ್ಗೆ ನನಗೆ ಯಾವ ತಿಳುವಳಿಕೆಯೂ ಇರಲಿಲ್ಲ. ಅವರ ವ್ಯಕ್ತಿತ್ವ ನನಗೆ ಇಸ್ಲಾಮಿನ ಪ್ರಥಮ ಪರಿಚಯವಾಗಿದೆ ಮತ್ತು ಅದು ತುಂಬ ಆಕರ್ಷಣೀಯವಾಗಿದೆ.

* ವೃತ್ತಿಯಿಂದ ಅಧ್ಯಾಪಕರಾದ ಅತಿಥಿಯೋರ್ವರು ಈ ಸಮಾರಂಭದಲ್ಲಿ ಭಾಗವಹಿಸಿದ್ದರು. ಅವರು ಹೇಳುತ್ತಾರೆ. ಇಸ್ಲಾಮಿಗೋಸ್ಕರ ಇಂತಹ ಒಬ್ಬ ನೇತಾರರ ಅವಶ್ಯಕತೆಯಿದೆ. ಅವರಿಂದ ಎಲ್ಲ ಧರ್ಮಗಳ ಮಧ್ಯವಿರುವ ಗೊಂದಲಗಳು ದೂರವಾಗುವುವು. ನಿಮ್ಮ ಖಲೀಫರು ಕೇವಲ ನೇತಾರರಲ್ಲ. ಬದಲು ಒಬ್ಬ ಮುತ್ಸದ್ದಿ ವ್ಯಕ್ತಿಯಾಗಿದ್ದಾರೆ. ನಾನು ಜಾಲತಾಣಗಳ (internet) ಮೂಲಕ ಅವರ ಬಗ್ಗೆ ಮಾಹಿತಿ ಪಡೆದಿರುತ್ತೇನೆ. ಅವರು ತುಂಬ ಒಳ್ಳೆಯ ಭಾಷಣಗಾರರೂ ಆಗಿರುತ್ತಾರೆ.

* ಓರ್ವ ಅತಿಥಿ Oliver Weissan Barger ಸಾಹಿಬ್ ಹೇಳುತ್ತಾರೆ. ನಾನು ತುಂಬಾ ಪ್ರಭಾವಿತನಾಗಿದ್ದೇನೆ. ನಮ್ಮ ಆತಿಥ್ಯವನ್ನು ಒಳ್ಳೆಯ ರೀತಿಯಲ್ಲಿ ಮಾಡಿರುತ್ತಾರೆ. ಇಮಾಮ್ ಜಮಾಅತ್ ಅಹ್ಮದಿಯಾ ಅವರ ವ್ಯಕ್ತಿತ್ವ ತುಂಬ ಪ್ರಭಾವಪೂರ್ಣವಾಗಿದೆ. ನಾನು ಇಂದು ಇಲ್ಲಿ ಆಗಮಿಸಿದ್ದಕ್ಕೆ ತುಂಬ ಸಂತೋಷವಾಗಿರುತ್ತದೆ. ಇಮಾಮ್ ಜಮಾಅತ್ ಅಹ್ಮದಿಯಾ ಅವರು ಇಂದು ಕಾಲಕ್ಕೆ ಬೇಕಾಗಿರುವಂತಹ ಶಾಂತಿಯ ಸಂದೇಶವನ್ನು ನೀಡಿದ್ದು ತುಂಬ ಪ್ರಶಂಸನೀಯವಾಗಿದೆ. ಇದಕ್ಕಿಂತ ಮುಂಚೆ ಇಸ್ಲಾಮ್ ಧರ್ಮ ಇತರ ಧರ್ಮಗಳೊಂದಿಗೆ ಸಮಾನವಾಗಿ ವರ್ತಿಸುವುದಿಲ್ಲವೆಂಬ ಭಾವನೆ ನನ್ನಲ್ಲಿತ್ತು. ಆದರೆ ಖಲೀಫರು ಪುರಾವೆಗಳ ಸಹಿತ ಅದನ್ನು ಸಂಪೂರ್ಣವಾಗಿ ತಳ್ಳಿಹಾಕಿದರು.

**21 ಅಕ್ಟೋಬರ್ 2019 (ಸೋಮವಾರ)**

ಹುಝೂರ್(ಅಬಿಅ) ಮುಂಜಾನೆ 7 ಗಂಟೆಗೆ ಬೈತುಸ್ಸುಬೂಹ್‌ಗೆ ಆಗಮಿಸಿ ಫಜರ್ ನಮಾಝ್ ನಿರ್ವಹಿಸಿಕೊಟ್ಟರು. ನಮಾಝ್ ನಿರ್ವಹಣೆಯ ನಂತರ ತಮ್ಮ ವಸತಿ ನಿಲಯಕ್ಕೆ ತೆರಳಿದರು. ಮುಂಜಾನೆ ಕಚೇರಿ ಅಂಚೆಗಳನ್ನು, ಪತ್ರಗಳನ್ನು ಮತ್ತು ವರದಿಗಳನ್ನು ಪರಿಶೀಲಿಸಿದರು ಮತ್ತು ನಿರ್ದೇಶನಗಳನ್ನು ನೀಡಿದರು. ನಂತರ ಕಚೇರಿ ಕಾರ್ಯಗಳನ್ನು ನಿರ್ವಹಿಸುವಲ್ಲಿ ತೊಡಗಿಕೊಂಡಿದ್ದರು.

ಇಂದು ಕಾರ್ಯಕ್ರಮದನ್ವಯ ಬೈತುಸ್ಸುಬೂಹ್, ಫ್ರೆಂಕ್‌ಫರ್ಟ್‌ನಿಂದ ಬರ್ಲಿನ್‌ಗೆ ಪ್ರಯಾಣೀಸಬೇಕಾಗಿತ್ತು. ಹುಝೂರ್(ಅಬಿಅ) 11.30 ಗಂಟೆಗೆ ತಮ್ಮ ವಸತಿನಿಲಯದಿಂದ ಹೊರಗೆ ಬಂದು ಮಸೀದಿಯ ಸಭಾಂಗಣಕ್ಕೆ ತೆರಳಿದರು. ಅಲ್ಲಿ ತಾಲೀಮುಲ್ ಇಸ್ಲಾಮ್ ಕಾಲೇಜು ರಬ್ವಾ ಹಳೆಯ ವಿದ್ಯಾರ್ಥಿಗಳ ಸಂಘ ಮತ್ತು ಇತಿಹಾಸ ಸಮಿತಿ ಮತ್ತು ಆಯೋಜಕರು, ಖ್ವಾರ್ ಅಹ್ಮದಿಯಾ ಜರ್ಮನಿ, ಪ್ರತ್ಯೇಕ ಪ್ರತ್ಯೇಕ ಗುಂಪುಗಳಾಗಿ ಭಾವಚಿತ್ರ ತೆಗೆಯಿಸಿಕೊಳ್ಳುವ ಭಾಗ್ಯ ಪಡೆದರು.

ಹುಝೂರರನ್ನು ಬೀಳ್ಕೊಡಲು ಬೈತುಸ್ಸುಬೂಹ್ ಹೊರಾಂಗಣದಲ್ಲಿ ಸ್ತ್ರೀ ಪುರುಷರ ಒಂದು ಬಹು ದೊಡ್ಡ ಸಮೂಹ ನೆರೆದಿತ್ತು. ಹುಝೂರ್(ಅಬಿಅ) ಪ್ರೀತಿಯಿಂದ ಜಮಾಅತ್ ಬಾಂಧವರ ಮಧ್ಯ ಆಗಮಿಸಿದರು ಮತ್ತು ಸುಮಾರು 10 ನಿಮಿಷದವರೆಗೆ ಅವರೊಂದಿಗೆ ಉಪಸ್ಥಿತರಿದ್ದರು. ಆ ನಡುವೆ ಬಾಲಕಿಯರು ಗುಂಪಾಗಿ ವಿದಾಯ ಕೋರುವ ಪ್ರಾರ್ಥನಾ ಗೀತೆಗಳನ್ನು ಪ್ರಸ್ತುತಪಡಿಸಿದರು. ಹೀಗೆ ಮಹಿಳೆಯರೂ ದರ್ಶನ ಭಾಗ್ಯ ಪಡೆದರು.

ಬೈತುಸ್ಸುಬೂಹ್ ಅಡುಗೆ ಕೋಣೆಯಲ್ಲಿ ಕಾರ್ಯ ನಿರ್ವಹಿಸುವ ಯುವಕ ಖಾಲಿದ್ ಅವರ ಬೆರಳಿಗೆ ಬಟ್ಟೆ ಕಟ್ಟಲಾಗಿತ್ತು. ಅದರಿಂದ ಆ ಕೈಯಲ್ಲಿ ಬೇನೆಯಿತ್ತು. ಹುಝೂರ್(ಅಬಿಅ) ಪ್ರೀತಿಯಿಂದ ಅವನ ಕೈಯನ್ನು ಹಿಡಿದು ಕೈಯ ವಿವಿಧ ಭಾಗಗಳ ಮೇಲೆ ತನ್ನ ಬೆರಳಿಟ್ಟು ಅಲ್ಲಿ ಬೇನೆಯಿದೆಯೇ ಎಂದು ವಿಚಾರಿಸಿದರು ಹಾಗೂ ಅವರಿಗಾಗಿ ಹೋಮಿಯೋಪೆಥಿಕ್ ಚಿಕಿತ್ಸಾ ವಿಧಾನ ಹೇಳಿಕೊಟ್ಟರು.

ಅನಂತರ 11 ಗಂಟೆ 45 ನಿಮಿಷಕ್ಕೆ ಹುಝೂರ್(ಅಬಿಅ) ಸಾಮೂಹಿಕ ಪ್ರಾರ್ಥನೆ ನಡೆಸಿಕೊಟ್ಟರು ಮತ್ತು ತನ್ನ ಕೈಯನ್ನು ಮೇಲಕ್ಕೆತ್ತಿ ಎಲ್ಲರಿಗೂ ಅಸ್ಸಲಾಮ ಅಲೈಕುಮ್ ಹೇಳಿ ಬರ್ಲಿನ್‌ಗೆ ಪ್ರಯಾಣ ಬೆಳೆಸಿದರು.

ಬೈತುಸ್ಸುಬೂಸ್ (ಫ್ರಂಕ್‌ಫರ್ಟ್) ನಿಂದ ಬರ್ಲಿನ್ ಸುಮಾರು 550 ಕಿ.ಮೀ ದೂರದಲ್ಲಿದೆ. ಕಾರ್ಯಕ್ರಮದನ್ವಯ 325 ಕಿ.ಮೀ ದೂರ ಕ್ರಮಿಸಿದ ನಂತರ 2 ಗಂಟೆ 30 ನಿಮಿಷಕ್ಕೆ Osterfeld ಕ್ಷೇತ್ರದಲ್ಲಿರುವ Amadus ಹೋಟೆಲ್‌ಗೆ ಆಗಮಿಸಿದರು. ಅಲ್ಲಿ ಊಟದ ವ್ಯವಸ್ಥೆ ಮಾಡಲಾಗಿತ್ತು.

ಹುಝೂರ್(ಅಬಿಅ) 3 ಗಂಟೆಗೆ ಹೋಟೇಲಿನ ಸಭಾಂಗಣಕ್ಕೆ ಆಗಮಿಸಿ ಝುಹರ್, ಅಸರ್ ನಮಾಝುಗಳನ್ನು ಜಮಾ ಮಾಡಿ ನಿರ್ವಹಿಸಿಕೊಟ್ಟರು. ನಂತರ 4 ಗಂಟೆ 15 ನಿಮಿಷಕ್ಕೆ ಇಲ್ಲಿಂದ ಬರ್ಲಿನ್‌ಗೆ ಹೊರಟರು. ಇಲ್ಲಿಂದ ಬರ್ಲಿನ್ 205 ಕಿ.ಮೀ ದೂರದಲ್ಲಿದೆ. ಸುಮಾರು ಎರಡೂವರೆ ತಾಸಿನ ಪ್ರಯಾಣದ ನಂತರ 6 ಗಂಟೆ 45 ನಿಮಿಷಕ್ಕೆ ಬರ್ಲಿನ್‌ನ "ಮಸ್ಜಿದ್ ಖದೀಜ"ಕ್ಕೆ ಹುಝೂರರ ಆಗಮನವಾಯಿತು. ಅಲ್ಲಿ ದೊಡ್ಡ ಸಂಖ್ಯೆಯಲ್ಲಿ ಜಮಾಅತ್ ಬಾಂಧವರು ಸ್ವಾಗತ ಕೋರಿದರು. ಸ್ತ್ರೀ ಪುರುಷರೆಲ್ಲಾ ದೊಡ್ಡ ಸಂಖ್ಯೆಯಲ್ಲಿ ಮಧ್ಯಾಹ್ನದ ಮೊದಲೇ ಮಸೀದಿಗೆ ಬರಲಾರಂಭಿಸಿದ್ದರು. ಹುಝೂರ್(ಅಬಿಅ) ಆಗಮಿಸಿದ ಪ್ರಯುಕ್ತ ಮಸೀದಿ ಮತ್ತು ಮಿಷನ್ ಹೌಸಿನ ಹೊರಭಾಗ ಜಮಾತ್ ಬಾಂಧವರಿಂದ ತುಂಬಿ ಹೋಗಿತ್ತು. ಅಹಲನ್ ವ ಸಹಲನ್ ವ ಮರ್‌ಹಬನ್

ಎಂಬ ಧ್ವನಿಯು ಸರ್ವತ್ರವಾಗಿ ಮೂಡಿ ಬರುತ್ತಿತ್ತು. ಬಾಲಕಿಯರು ಗುಂಪುಕಟ್ಟಿ ಸ್ವಾಗತ ಗೀತೆಯನ್ನೂ ಪ್ರಾರ್ಥನಾ ಗೀತೆಯನ್ನೂ ಹಾಡುತ್ತಿದ್ದರು. ಹುಝೂರ್(ಅಬಿಅ) ವಾಹನದಿಂದ ಹೊರಬರುತ್ತಲೇ ಬರ್ಲಿನ್ ಜಮಾಅತ್ತಿನ ಅಧ್ಯಕ್ಷರಾದ ಉಸಾಮ ಅಹ್ಮದ್ ಸಾಹಿಬ್ ಮತ್ತು ಮಬ್ಬಲಿಗ್ ಸಮೀದ್ ಅಹ್ಮದ್ ಆರಿಫ್ ಸಾಹಿಬ್ ಹುಝೂರರಿಗೆ ಸ್ವಾಗತ ಕೋರಿದರು. ಹುಝೂರ್ ತನ್ನ ಕೈ ಮೇಲಕ್ಕೆತ್ತಿ ಎಲ್ಲರಿಗೂ ಅಸ್ಸಲಾಮು ಅಲೈಕುಮ್ ಹೇಳಿದರು ಮತ್ತು ತಮ್ಮ ವಸತಿನಿಲಯಕ್ಕೆ ನಿರ್ಗಮಿಸಿದರು.

ಮಸ್ಜಿದ್ ಖದೀಜ ಬರ್ಲಿನ್ ನಗರದ Pankow ಕ್ಷೇತ್ರದಲ್ಲಿದೆ. ಬರ್ಲಿನ್ ನಗರದ ಈ ಕ್ಷೇತ್ರವು ಹಿಂದಿನ ಪೂರ್ವ ಜರ್ಮನಿಯಲ್ಲಿತ್ತು. ಖದೀಜ ಮಸೀದಿಯ ಅಡಿಪಾಯವನ್ನು ಹುಝೂರ್(ಅಬಿಅ) ತಮ್ಮ ಹಿಂದಿನ ಜರ್ಮನಿ ಪ್ರವಾಸದ ಸಂದರ್ಭದಲ್ಲಿ (2 ಜನವರಿ 2007) ಹಾಕಿದ್ದರು. ಮಸೀದಿ ನಿರ್ಮಾಣ ಪೂರ್ಣವಾದ ನಂತರ 2008 ರ ಅಕ್ಟೋಬರ್ 17, ಶುಕ್ರವಾರದಂದು ಇದರ ಉದ್ಘಾಟನೆ ಮಾಡಿದ್ದರು.

ಈ ಮಸೀದಿಯಲ್ಲಿ ನಮಾಝ್ ಮಾಡಲು ಎರಡು ಸಭಾಂಗಣಗಳಿವೆ. ಪ್ರತಿ ಸಭಾಂಗಣದ ವಿಸ್ತೀರ್ಣವು 168 ಚ. ಮೀ ಇದೆ. ಮಸೀದಿಯ ಗೋಪುರದ (ಮೀನಾರ್) ಎತ್ತರ 13 ಮೀಟರ್ ಇದ್ದರೆ ಗುಂಬಜ್ 9 ಮೀಟರ್ ಆಳ ಹೊಂದಿದೆ.

ಮಸೀದಿ ನಿರ್ಮಾಣ ಜೊತೆಯಲ್ಲಿಯೇ ಅದೇ ಆವರಣದಲ್ಲಿ ಒಂದು ವಸತಿಗೃಹ ಮತ್ತು ಕಚೇರಿಗಳನ್ನು ನಿರ್ಮಿಸಲಾಯಿತು. ವಸತಿ ವಿಭಾಗದಲ್ಲಿ 4 ಕೋಣೆಗಳ ಒಂದು ವಸತಿಗೃಹವಿದೆ. ಅದಲ್ಲದೆ ಎರಡು ಕೋಣೆಗಳುಳ್ಳ ಒಂದು ವಸತಿನಿಲಯ ಮತ್ತು ಒಂದು ಕೋಣೆಯ ಅತಿಥಿಗೃಹವೂ ಇದೆ. ಅದಲ್ಲದೇ 4 ಕಚೇರಿಗಳು, ಒಂದು ಗ್ರಂಥಾಲಯ ಮತ್ತೊಂದು ಸಭಾಂಗಣವೂ ಸೇರಿದೆ. ಇಲ್ಲಿ ಜಮಾತಿನ ದೊಡ್ಡ ಅಡುಗೆಮನೆಯ ಸವಲತ್ತು ಕೂಡಾ ಇದೆ. ಜೊತೆಗೆ 22 ವಾಹನಗಳನ್ನು ನಿಲುಗಡೆ ಮಾಡುವ ವ್ಯವಸ್ಥೆಯೂ.

ಈ ಐತಿಹಾಸಿಕ ಮಸೀದಿಯು 1.7 ಮಿಲಿಯನ್ ಯೂರೋ ಖರ್ಚಿನಲ್ಲಿ ಪೂರ್ಣಗೊಂಡಿದೆ. ಅದರ ವೆಚ್ಚವೆಲ್ಲ ಲಜ್ನ ಇವಾಇಲ್ಲಾಹರವರು ವಹಿಸಿಕೊಂಡಿರುತ್ತಾರೆ. ಈ ಮಸೀದಿಯ ಡಿಝಾಯಿನ್ ಮುಕರ್ರಮ್ ಮುಬಶಿರಾ ಇಲ್ಯಾಸ್ ಸಾಹಿಬಾ ತಯಾರಿಸಿರುತ್ತಾರೆ. ಈ ಮಸೀದಿ ಕೇವಲ ಮಹಿಳೆಯರ ಸಾಂಪತ್ತಿಕ ತ್ಯಾಗಗಳಿಂದ ನಿರ್ಮಾಣಗೊಂಡಿದೆ. 1.3 ಮಿಲಿಯನ್ ಯೂರೋದ ಖರ್ಚು ಲಜ್ನ ಇಮಾಇಲ್ಲಾಹ್ ಜರ್ಮನಿ ಅವರು ನಿರ್ವಹಿಸುತ್ತಾರೆ. ಉಳಿದ ನಾಲ್ಕು ಲಕ್ಷ ಯೂರೋದಲ್ಲಿ ದೊಡ್ಡ ಭಾಗ ಲಜ್ನ ಇಮಾಇಲ್ಲಾಹ್ ಯು.ಕೆ. ನಿರ್ವಹಿಸಿದ್ದಾರೆ. ಈ ಎರಡು ಅಂತಸ್ತಿನ ಮಸೀದಿ ದೂರದಿಂದಲೇ ದೃಷ್ಟಿಗೆ ಬೀಳುತ್ತದೆ. ಅದರ ಎತ್ತರವಾದ ಗೋಪುರ ಮತ್ತು ಗುಂಬಜ್ ಜನರನ್ನು ತಮ್ಮೆಡೆಗೆ ಆಕರ್ಷಿಸುತ್ತದೆ.

ಹುಝೂರ್(ಅಬಿಅ) 8 ಗಂಟೆಗೆ ಖದೀಜ ಮಸೀದಿಗೆ ಆಗಮಿಸಿ ಮಗ್ರಿಬ್, ಇಶಾಅ ನಮಾಝುಗಳನ್ನು ಜಮಾ ಮಾಡಿ ನಿರ್ವಹಿಸಿಕೊಟ್ಟರು. ನಮಾಝುಗಳ ನಿರ್ವಹಣೆಯ ನಂತರ ತಮ್ಮ ವಸತಿನಿಲಯಕ್ಕೆ ತೆರಳಿದರು.

ಬರ್ಲಿನ್ ನಗರ 1183 ರಲ್ಲಿ ನಿರ್ಮಾಣಗೊಂಡಿತು. ಇದು Spreo ಎಂಬ ನದಿಯ ದಡದಲ್ಲಿದೆ. 892 ಚ.ಮೀ ವಿಸ್ತೀರ್ಣದ ಈ ನಗರದ ಜನಸಂಖ್ಯೆಯು 3.4 ಮಿಲಿಯನ್ ಆಗಿದೆ. 1871 ರಲ್ಲಿ ಈ ನಗರಕ್ಕೆ ಮೊದಲ ಬಾರಿ ಜರ್ಮನಿಯ ರಾಜಧಾನಿಯ ಸ್ಥಾನ ದೊರಕಿತು. ಎರಡನೆ ಮಹಾಯುದ್ಧದಲ್ಲಿ ಈ ನಗರದ ಜನಸಂಖ್ಯೆ 4.3 ಮಿಲಿಯನ್ ಆಗಿತ್ತು. ಅದರಲ್ಲಿ ಬರೇ 2.8 ಮಿಲಿಯನ್ ಜನರು ಜೀವಂತವಾಗಿ ಉಳಿದರು. 6 ಲಕ್ಷ ಮನೆಗಳು ನಾಶವಾದವು. ಬರ್ಲಿನ್ ಗೋಡೆ ನಿರ್ಮಾಣದಿಂದಾಗಿ ಈ ನಗರ ಎರಡು ಭಾಗಗಳಲ್ಲಿ ವಿಭಜಿಸಲ್ಪಟ್ಟಿತು. ಒಂದು ಭಾಗ ರಷ್ಯಾಕ್ಕೆ ಸೇರಿತು. ಅದು ಪೂರ್ವ ಜರ್ಮನಿ ಎಂದಾಯಿತು. 10 ನವೆಂಬರ್ 1989 ರಂದು ಬರ್ಲಿನ್ ಗೋಡೆಯನ್ನು ಬೀಳಿಸಲಾಯಿತು. ಆಗ ಬರ್ಲಿನಿನ ಎರಡೂ ಭಾಗಗಳು ಒಂದಾದವು.

ಇಲ್ಲಿ "ಮಸ್ಜಿದ್ ಖದೀಜ" ಐತಿಹಾಸಿಕ ಪ್ರಾಮುಖ್ಯತೆ ಪಡೆಯಲು ಕಾರಣವೇನೆಂದರೆ ಈ ಮಸೀದಿ ರಷ್ಯಾಕ್ಕೆ ಸೇರಿದ ಕ್ಷೇತ್ರದಲ್ಲಿ ನಿರ್ಮಾಣಗೊಂಡಿತು. ಈ ಐತಿಹಾಸಿಕ ಮಸೀದಿ ನಿರ್ಮಾಣದ ಸುದ್ದಿಯನ್ನು ಲೋಕದಲ್ಲೆಲ್ಲ ಪ್ರಿಂಟ್ ಮತ್ತು ಎಲೆಕ್ಟ್ರಾನಿಕ್ ಮಾಧ್ಯಮಗಳು ಬಿತ್ತರಿಸಿದ್ದವು.

**22 ಅಕ್ಟೋಬರ್ 2019 (ಮಂಗಳವಾರ)**

ಹುಝೂರ್ ಮುಂಜಾನೆ 6 ಗಂಟೆ 45 ನಿಮಿಷಕ್ಕೆ ಖದೀಜ ಮಸೀದಿ, ಬರ್ಲಿನ್‌ಗೆ ಆಗಮಿಸಿ ಫಜರ್ ನಮಾಝ್ ನಿರ್ವಹಿಸಿ. ನಂತರ ಅವರು ತಮ್ಮ ವಸತಿನಿಲಯಕ್ಕೆ ತೆರಳಿದರು.

ಹುಝೂರ್ ಮುಂಜಾನೆ ಕಚೇರಿ ಅಂಚೆಗಳನ್ನು ಪರಿಶೀಲಿಸಿದರು ಮತ್ತು ನಿರ್ದೇಶನಗಳನ್ನು ನೀಡಿದರು ಹಾಗೂ ವಿವಿಧ ರೀತಿಯ ಕಚೇರಿ ಕಾರ್ಯಗಳಲ್ಲಿ ತೊಡಗಿಸಿಕೊಂಡರು.

2 ಗಂಟೆಗೆ ಹುಝೂರ್(ಅಬಿಅ) ಆಗಮಿಸಿ ಝುಹರ್ ಅಸರ್ ನಮಾಝುಗಳನ್ನು ಜಮಾ ಮಾಡಿ ನಿರ್ವಹಿಸಿಕೊಟ್ಟು ತಮ್ಮ ವಸತಿನಿಲಯಕ್ಕೆ ತೆರಳಿದರು.

**ಹುಝೂರ್(ಅಬಿಅ) ರವರೊಡನೆ ಸಂಸದರು, ಧಾರ್ಮಿಕ ಹಾಗೂ ರಾಜಕೀಯ ಧುರೀಣರ ಭೇಟಿ**

ಜರ್ಮನ್ ನ್ಯಾಷನಲ್ ಪಾರ್ಲಿಮೆಂಟಿನ ಸಮೀಪ, ಅಮೇರಿಕಾ ಹಾಗೂ ಬ್ರಿಟನಿನ ರಾಯಭಾರಿ ಕಚೇರಿಗಳ ಮತ್ತು ಜರ್ಮನಿಯ ಹೆಸರಾಂತ Branburg Gate ನಿಂದ ಕೆಲವೇ ಹೆಜ್ಜೆಗಳ ದೂರದಲ್ಲಿರುವ Adlon Kempinsri ಹೋಟೆಲ್‌ನಲ್ಲಿ ಒಂದು ಪ್ರಮುಖ ಸಮಾರಂಭವನ್ನು ಹಮ್ಮಿಕೊಳ್ಳಲಾಗಿತ್ತು. ಅದರಲ್ಲಿ ದೊಡ್ಡ ಸಂಖ್ಯೆಯಲ್ಲಿ ಪಾರ್ಲಿಮೆಂಟ್ ಸದಸ್ಯರು ಮತ್ತು ಇತರ ಉನ್ನತ ಸರಕಾರಿ ಅಧಿಕಾರಿಗಳು ಹಾಗೂ ಹಲವು ರಾಜಕೀಯ ಮತ್ತು ಧಾರ್ಮಿಕ ವ್ಯಕ್ತಿಗಳು ಭಾಗವಹಿಸಿದರು.

ಕಾರ್ಯಕ್ರಮದನ್ವಯ ಐದೂವರೆ ಗಂಟೆಗೆ ಹುಝೂರ್(ಅಬಿಅ) ಖದೀಜ ಮಸೀದಿಯಿಂದ ಹೊರಟು 6 ಗಂಟೆಗೆ ಹೋಟೆಲ್ ತಲುಪಿದರು. ಹೋಟೆಲಿನ ಮೀಟಿಂಗ್ ರೂಮಿಗೆ ತೆರಳಿ ಅಲ್ಲಿ ಮೊದಲೇ ನಿಂಯೋಜಿಸಿದ ಕಾರ್ಯಕ್ರಮದನ್ವಯ Mr. Neels Ammen, Minister of State ಹುಝೂರ್‌ರವರನ್ನು ಭೇಟಿ ಮಾಡಿದರು.

ಅವರ ಜೊತೆಯಲ್ಲಿ ಇನ್ನಿಬ್ಬರು ಪಾರ್ಲಿಮೆಂಟಿನ ಸದಸ್ಯರು ಕೂಡಾ ಉಪಸ್ಥಿತರಿದ್ದರು. ಅವರಲ್ಲಿ ಒಬ್ಬರು Mr. Frank Hemrich ಅವರು Human Rights ನ Spokesman ಆಗಿದ್ದಾರೆ. ಇನ್ನೊಬ್ಬರು Mr. Omid Nourpour ಅವರು Foreign Affairs Spokesperson ಆಗಿದ್ದಾರೆ.

* Minister of State, Niels Ammen ಹುಝೂರ್‌ರ ಭೇಟಿ ತಮಗೆ ಗೌರವದ ವಿಷಯವಾಗಿದೆ ಎಂದರು. "ನಾನು ಹೊಂಬರ್ಗಿನಲ್ಲಿ ಒಂದು ಜಿಲ್ಲೆಯನ್ನು ಪ್ರತಿನಿಧಿಸುತ್ತಿದ್ದೇನೆ. ಅಲ್ಲಿ ಅಹ್ಮದಿಯಾ ಜಮಾಅತ್ ತುಂಬ ಸಕ್ರಿಯವಾಗಿದೆ. ಅಹ್ಮದಿಯರೊಂದಿಗೆ ನನಗೆ ಒಳ್ಳೆಯ ಸಂಬಂಧವಿದೆ ಮತ್ತು ನಾನು ಅಹ್ಮದಿಯರಿಂದ ತುಂಬ ಪ್ರಭಾವಿತನಾಗಿದ್ದೇನೆ. ಈಗ ಹುಝೂರ್‌ರವರ ಭೇಟಿಯಿಂದ ತುಂಬ ಸಂತೋಷವಾಗುತ್ತಿದೆ ಮತ್ತು ಅವರೊಂದಿಗೆ ತುಂಬಾ ಗೌರವ ಭಾವನೆಯನ್ನು ಹೊಂದಿದ್ದೇನೆ" ಎಂದರು.

ಹುಝೂರ್ ಕೇಳಿದರು. ನೀವು ಮೊದಲೇ ಅಹ್ಮದಿಯಾ ಸಂಪ್ರದಾಯವನ್ನು ಬಲ್ಲವರಾಗಿದ್ದೀರಿ? ಅದಕ್ಕೆ ಅವರು ತಾನು ಚೆನ್ನಾಗಿ ಬಲ್ಲವನಾಗಿದ್ದೇನೆ ಎಂದು ಹೇಳಿದರು. ಅವರು ಹುಝೂರರ ಪ್ರವಾಸದ ವಿವರಗಳನ್ನು ಕೇಳಿದರು. ಉತ್ತರಿಸುತ್ತಾ ತಾನು ಮೊದಲು ಜರ್ಮನಿಯ ಜಲ್ಸಾ ಸಾಲಾನ ಸಂದರ್ಭ ಬಂದಿದ್ದೆ. ಆದರೆ ಈಗ ಜರ್ಮನಿಯ ಪ್ರವಾಸದ ಉದ್ದೇಶ ಕೆಲವು ಮಸೀದಿಗಳ ಉದ್ಘಾಟನೆ ಮತ್ತು ಇಂದಿನ ಸಮಾರಂಭದಲ್ಲಿ ಭಾಗವಹಿಸುವುದು ಆಗಿದೆ ಎಂದರು.

ಬರ್ಲಿನ್ ಸಮಾವೇಶದ ಕುರಿತು ವಿಷಯ ಪ್ರಸ್ತಾಪವಾದಾಗ ಹುಝೂರ್(ಅಬಿಅ) ಹೇಳಿದರು. ಇತ್ತೀಚೆಗೆ ಜರ್ಮನಿಯಲ್ಲಿ Ismalic Civilization, Culture and its Integration ಎಂಬ ವಿಷಯ ತುಂಬ ಚರ್ಚೆಯಲ್ಲಿದೆ. ಜರ್ಮನಿ ಜಮಾಅತಿನವರು ನಾನು ಇಲ್ಲಿ ಆಗಮಿಸಿ ಈ ವಿಷಯವಾಗಿ ಮಾತನಾಡಬೇಕು ಎಂದು ಬಯಸುತ್ತಿದ್ದರು. ಆ ಕಾರಣದಿಂದಾಗಿ ನಾನು ಇಲ್ಲಿಗೆ ಬಂದಿರುತ್ತೇನೆ. ಇಸ್ಲಾಮ್ ಧರ್ಮದಿಂದ ಯಾರೂ ಭಯಪಡುವ ಅಗತ್ಯವಿಲ್ಲ. ಪಾಶ್ಚಿಮಾತ್ಯ ಸಂಸ್ಕೃತಿ ಅಷ್ಟೊಂದು ಬಲಾಢ್ಯವಾಗಿರುವಾಗ ಹೆದರುವ ಅಗತ್ಯವೇನದೆ? ಇಂತಹದೊಂದು ಸಂಸ್ಕೃತಿಯನ್ನು ಸುಲಭವಾಗಿ ಅಂತ್ಯಗೊಳಿಸಬಹುದೇ? ಇಂದು ಇದೇ ವಿಷಯವಾಗಿ ವಿವರಿಸಬಯಸುತ್ತೇನೆ ಎಂದರು.

ಮುಂದುವರಿಸುತ್ತ ಹುಝೂರ್(ಅಬಿಅ) ತಾನು ಜರ್ಮನಿಯಲ್ಲಿ ಇನ್ನು ಕೆಲವು ದಿನಗಳ ಕಾಲ ತಂಗಲಿದ್ದೇನೆ. ಬರ್ಲಿನ್‌ನಿಂದ ನಾಳೆ ಹೆಂಬರ್ಗ್‌ಗೆ ಹೋಗಲಿದ್ದೇನೆ. ನಿಮ್ಮ ಕ್ಷೇತ್ರಕ್ಕೂ ಹೋಗುತ್ತಿದ್ದೇನೆ ಎಂದರು.

* ಸಚಿವರು ತಮ್ಮ ಸಂಗಡಿಗ Omid Nouripoor ಅವರ ಪರಿಚಯ ನೀಡುತ್ತಾ, ಅವರು ಗ್ರೀನ್ ಪಾರ್ಟಿಗೆ ಸಂಬಂಧಿಸಿದವರಾಗಿದ್ದಾರೆ ಮತ್ತು ಸ್ವಯಂ ಮುಸ್ಲಿಮರಾಗಿದ್ದಾರೆ ಎಂದು ಹೇಳಿದರು. ಇಂದಿನ ಸಮಾವೇಶದ ನಂತರ ಮುಸ್ಲಿಂ ಪಾರ್ಲಿಮೆಂಟ್ ಸದಸ್ಯರಿಗೆ ಇಸ್ಲಾಮಿನ ರಕ್ಷಣೆಗೋಸ್ಕರ ಉತ್ತಮ ಸಾಕ್ಷ್ಯಗಳು ದೊರೆಯಬಹುದು ಎಂದು ಅಭಿಪ್ರಾಯಪಟ್ಟರು.

ಫ್ರೆಂಕ್‌ಫರ್ಟ್‌ನಲ್ಲಿ ಅಹ್ಮದಿಯಾ ಸಮುದಾಯದ ಸೇವಾಕಾರ್ಯಗಳು ಅಸಮಾನ್ಯವಾಗಿವೆ. ಅದು ಅಹ್ಮದಿಯಾ ಜಮಾಅತ್ ವತಿಯಿಂದ ಸೌಹಾರ್ಧತೆಯ ಉತ್ತಮ ಮಾದರಿಯಾಗಿದೆ. ಜಮಾಅತ್ ಉತ್ತಮ ರೀತಿಯಲ್ಲಿ ಸಹಕಾರ ನೀಡುತ್ತಿದೆ ಎಂದು Omid Nouripoor ಹೇಳಿದರು..

Brexit ಸಮಸ್ಯೆ ತುಂಬ ಗಂಭೀರ ಸ್ವರೂಪ ಪಡೆದಿದೆ. ವಿದೇಶಾಂಗ ಮಂತ್ರಿಯಾದ ನೆಲೆಯಲ್ಲಿ ತಮ್ಮ Challenges ಗಳೇನಿವೆ? ಸಮಸ್ಯೆಗಳ

ಪರಿಹಾರದಲ್ಲಿ ತಾವು ಭಾಗಿಯಾಗಿರುವಿರೆ ಎಂದು ಹುಝೂರ್ ಅನ್ವರ್ ಪ್ರಶ್ನಿಸಿದರು.

ಆಗ ಅವರು ಹೇಳಿದರು. ನಿಶ್ಚಯವಾಗಿಯೂ Brexit ತುಂಬ ಗಂಭೀರ ಸಮಸ್ಯೆಯಾಗಿದೆ. ಈ ವಿಷಯವಾಗಿ ಇಂದು ಸಹ ಚರ್ಚೆಯಾಗಿದೆ. ಅತಿ ಶೀಘ್ರದಲ್ಲಿ ಬ್ರಿಟನ್‌ನಲ್ಲಿ ಸಾಮಾನ್ಯ ಚುನಾವಣೆಯೂ ನಡೆಯುವ ಸಂಭವವಿದೆ. ನಾವಂತೂ ಯೂರೋಪಿಯನ್ Union ನಲ್ಲಿ ಸಮ್ಮಿಳಿತ ವಾಗಿರಬಯಸುತ್ತೇವೆ. ಆ ಕುರಿತು ಜರ್ಮನಿಗೆ ವಿಶೇಷ ಜವಾಬ್ದಾರಿಕೆ ಇದೆ ಎಂದರು.

* ಮೂರನೆಯ ಅತಿಥಿ CDU ಪಕ್ಷದ ಪಾರ್ಲಿಮೆಂಟ್ ಸದಸ್ಯರಾದ Frank Heinrich ಹೇಳಿದರು. ನಾನು ಅಹ್ಮದಿಯಾ ಜಮಾಅತಿಗೆ ಆಭಾರಿಯಾಗಿದ್ದೇನೆ. ನಿಮ್ಮ ಜಮಾಅತಿನ ಜನರು ಕೇವಲ ನಮ್ಮಲ್ಲಿ ಬೆರೆತಿಲ್ಲ. ಬದಲು ಸಮಾಜದ ಒಳಿತಿಗಾಗಿ ಬಹು ದೊಡ್ಡ ಪಾತ್ರ ವಹಿಸುತ್ತಿದ್ದಾರೆ ಎಂದರು.

ಅನಂತರ ಪಾಕಿಸ್ತಾನದಲ್ಲಿ ಅಹ್ಮದಿಯರ ಮೇಲೆ ಆಗುವ ದೌರ್ಜನ್ಯಗಳ ಬಗ್ಗೆ ಮಾತುಕತೆ ನಡೆಯಿತು. ಆಗ ಹುಝೂರ್ ಹೇಳಿದರು. ಪಾಕಿಸ್ತಾನದಲ್ಲಿ ದೀರ್ಘ ಸಮಯದಿಂದ ಅಹ್ಮದಿಯರ ಸ್ಥಿತಿಗತಿ ಸುಧಾರಿಸಿಲ್ಲ. ಇದ್ದ ಹಾಗೆಯೇ ಇದೆ. ಅಲ್ಲಿಯ ಕಾನೂನು ಅಹ್ಮದಿಯರಿಗೆ ಧಾರ್ಮಿಕ ಸ್ವಾತಂತ್ರ ನೀಡುವುದಿಲ್ಲ. ಅವರು ಅಸ್ಸಲಾಮು ಅಲೈಕುಮ್ ಎಂದು ಹೇಳಿದರೆ ಅಥವಾ ಮಕ್ಕಳಿಗೆ ಇಸ್ಲಾಮಿ ಹೆಸರುಗಳು ಇಟ್ಟರೆ ಕಾನೂನು ರೀತ್ಯ ಶಿಕ್ಷೆಗೆ ಒಳಪಡುತ್ತಾರೆ. ಯಾಕೆಂದರೆ ಕಾನೂನು ಇದಕ್ಕೆ ಅನುಮತಿ ನೀಡುವುದಿಲ್ಲ. ಈ ಕಾನೂನು ಇರುವವರಿಗೆ ಪರಿಸ್ಥಿತಿಗಳ ಬದಲಾವಣೆಯಾಗುವ ಯಾವ ಭರವಸೆಯೂ ಇಲ್ಲ ಎಂದರು.

ಮುಂದುವರಿಯುತ್ತಾ ಹುಝೂರ್ ಹೇಳಿದರು. ನಮ್ಮೊಡನೆ ಅನುಕಂಪ ಹೊಂದಿದವರಿಗೆ ನಾವು ಇದನ್ನೇ ಹೇಳುವುದು – ನೀವು ಪಾಕಿಸ್ತಾನದಲ್ಲಿ ಎಲ್ಲಾ ಮತೀಯರು ಭಾಗವಹಿಸುವಂತಹ ಸಾರ್ವತ್ರಿಕ ಚುನಾವಣೆ ಮಾಡಲು ಒತ್ತು ನೀಡಿ, Joint Election ಆಗಬೇಕು. ಜಾತಿ ಧರ್ಮಗಳ ಭೇದವಿಲ್ಲದೆ ಎಲ್ಲರಿಗೂ ಸಮಾನವಾಗಿ ಮತ ನೀಡುವ ಹಕ್ಕು ದೊರೆಯಬೇಕು. ನಮ್ಮನ್ನು ಮೊದಲು ಅಮುಸ್ಲಿಮ್ ಎಂದು ಒಪ್ಪಿಕೊಳ್ಳಲು ಹೇಳಲಾಗುತ್ತದೆ ಮತ್ತು ಅಮುಸ್ಲಿಮ್ ಕ್ಷೇತ್ರಗಳಲ್ಲಿ ಚುನಾವಣೆಗೆ ನಿಲ್ಲಲು ಹೇಳಲಾಗುತ್ತದೆ. ನಾವು ಹೇಳುವುದು – ನಾವು ಮುಸ್ಲಿಮರಾಗಿದ್ದೇವೆ. ನಮಗೆ ದೇಶದ ನಾಗರಿಕತ್ವದ ನೆಲೆಯಲ್ಲಿ ಮತ ಕೊಡುವ ಹಕ್ಕು ದೊರೆಯಬೇಕು ಎಂದು.

Blasphemy Laws ಕುರಿತು ಮಾತು ಬಂದಾಗ ಹುಝೂರ್(ಅಬಿಅ) ಹೇಳಿದರು. ಮೌಲ್ವಿಗಳ ಭಯದಿಂದ "ತೇಹಿನ್ ರಿಸಾಲತ್ ಕಾನೂನು" ಗಳನ್ನು ಅನರ್ಹಗೊಳಿಸಲು ಸಾಧ್ಯವಾಗುತ್ತಿಲ್ಲ ಎಂಬುದು ನನ್ನ ಭಾವನೆಯಾಗಿದೆ. Joint Election ನಡೆಸುವುದು ಇದಕ್ಕಿರುವ ಒಂದೇ ಒಂದು ಮಾರ್ಗವಾಗಿದೆ. ಆ ಮೂಲಕ ನಾವು ಪಾರ್ಲಿಮೆಂಟಿನಲ್ಲಿ ಭಾಗವಹಿಸಬಹುದು. ನಮ್ಮ ಧ್ವನಿಯನ್ನು ಎತ್ತಬಹುದು. ಅದರಿಂದ ನಮಗೆ ಕೆಲವು ಪ್ರಾಥಮಿಕ ಹಕ್ಕುಗಳು ದೊರೆಯಬಹುದಾಗಿದೆ. ಪ್ರಸಕ್ತ ಸರಕಾರವು ಹಿಂದಿನ ಸರಕಾರಗಳು ನಡೆದ ಪಥದಲ್ಲಿಯೇ ನಡೆಯುತ್ತಿದೆ.

ಹುಝೂರ್ ಹೇಳಿದರು. ಏನೇ ಆಗಲಿ. ನಾವು ಎಂದೂ ನಮ್ಮನ್ನು ಅಮುಸ್ಲಿಮರೆಂದು ಹೇಳಿಕೊಳ್ಳುವುದಿಲ್ಲ. ಏಕೆಂದರೆ ಇದು ತಮ್ಮ ಆತ್ಮಸಾಕ್ಷಿಗೆ ಹಾಗೂ ನಂಬಿಗೆಗೆ ವಿರುದ್ಧವಾಗಿದೆ.

* Frank Heinrich, ಪಾರ್ಲಿಮೆಂಟ್ ಸದಸ್ಯರು ಹೇಳಿದರು. ನಾನು ಸಹ ಜರ್ಮನ್ ಮಾನವ ಹಕ್ಕುಗಳ ಸಮಿತಿಯ ಸದಸ್ಯನಾಗಿದ್ದೇನೆ. ನಾನು ಹೇಳಬಯಸುವುದೇನೆಂದರೆ ನಮಗೆ ನಿಮ್ಮ ಮೇಲೆ ಆಗುತ್ತಿರುವ ದೌರ್ಜನ್ಯಗಳನ್ನು ಕಂಡು ತುಂಬ ದು:ಖವಾಗುತ್ತದೆ. ಯೂರೋಪಿನಲ್ಲಿ ಇತರ ಮುಸ್ಲಿಮರೊಂದಿಗೆ ನಿಮ್ಮ ಸಂಬಂಧ ಹೇಗಿದೆ ಎಂದು ನಾನು ತಿಳಿಯಬಯಸುತ್ತೇನೆ.

ಆಗ ಹುಝೂರ್ ಹೇಳಿದರು. ಪಶ್ಚಿಮ ಜಗತ್ತಿನಲ್ಲಿಯೂ ಅಹ್ಮದಿಯ ಜಮಾಅತಿನ ವಿರುದ್ಧ ಅಪಪ್ರಚಾರ ಮಾಡಲಾಗುತ್ತಿದೆ. ನಮ್ಮ ವಿರೋಧಿಗಳು ಹೇಳುವುದು – "ನಾವು ಒಬ್ಬ ಹೊಸ ಪ್ರವಾದಿಯನ್ನು ನಂಬುತ್ತೇವೆ ಮತ್ತು ನಾವು ರಸೂಲುಲ್ಲಾಹ್(ಸ) ರು "ಖಾತಮುನ್‌ಬಿಯ್ಯೀನ್" ಎಂದು ನಂಬುವುದಿಲ್ಲ ಮತ್ತು ಅವರ ಪ್ರವಾದಿತ್ವವನ್ನು ರದ್ದು ಮಾಡುತ್ತೇವೆ. ಅದರೆ ಈ ಮಾತು ಸರಿಯಲ್ಲ. ಅವರ ಮೌಲ್ವಿಗಳ ಮೂಲಕ ನಮ್ಮ ವಿರುದ್ಧ ಅಪಪ್ರಚಾರ ಮಾಡಲಾಗುತ್ತಿದೆ. ನಾವು ಖತಮೆ ನುಬುವ್ವತ್‌ಗೆ ವಿರುದ್ಧವಾಗಿದ್ದೇವೆ ಎಂದು. ನಮ್ಮ ವಿರೋಧಿಗಳು ಸಾಮಾನ್ಯ ಮುಸ್ಲಿಮರ ತಲೆಯನ್ನು ಕೆಡಿಸುತ್ತಿದ್ದಾರೆ. ಅದರೆ ಹಲವು ಮುಸ್ಲಿಮರು ಅಲ್ಲದೇ ವಿದ್ವಾಂಸರು ಮತ್ತು ತತ್ವಜ್ಞಾನಿಗಳು ಅಹ್ಮದಿಯರು ಅವರ ವಿಶ್ವಾಸದಲ್ಲಿ ಸರಿಯಾಗಿದ್ದಾರೆಂದು ನಂಬುತ್ತಾರೆ. ಅವರು ನಮ್ಮ ಜೊತೆಯಲ್ಲಿದ್ದಾರೆ ಮತ್ತು ನಮ್ಮ ಪರವಾಗಿ ಮಾತನಾಡುತ್ತಾರೆ. ಅಹ್ಮದಿಯರ ಮೇಲೆ ಆಗುವ ದೌರ್ಜನ್ಯಗಳನ್ನು ಖಂಡಿಸುತ್ತಾರೆ. ಆದರೆ ಸಾಮಾನ್ಯ ಜನರು ನಮ್ಮನ್ನು ವಿರೋಧಿಸುತ್ತಾರೆ. ಈ ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ಇತರ ಮುಸ್ಲಿಮರು ನಮ್ಮನ್ನು ನೇರವಾಗಿ ವಿರೋಧಿಸುವುದಿಲ್ಲ. ತಮ್ಮದೇ ರೀತಿಯಲ್ಲಿ ವಿರೋಧಿಸುತ್ತಾರೆ ಅಷ್ಟೇ. ಅಂತೂ ಅಪಪ್ರಚಾರದಿಂದಾಗಿ ಇತರ ದೇಶಗಳಲ್ಲಿಯೂ ನಾವು ಅವರ ಅನುಮಾನಗಳಿಗೆ ತುತ್ತಾಗಿದ್ದೇವೆ.

Omid Nouripoor ಕೇಳಿದ ಇನ್ನೊಂದು ಪ್ರಶ್ನೆಗೆ ಉತ್ತರಿಸುತ್ತ ಹುಝೂರ್ ಹೇಳಿದರು – ಪಾಕಿಸ್ತಾನದಲ್ಲಿ ಹಿಂದಿನ ಸಮಯದಲ್ಲಿ ಕೆಲವು ಕುಟುಂಬಗಳು ಅಹ್ಮದಿಯರೊಡನೆ ಒಳ್ಳೆಯ ರೀತಿಯಲ್ಲಿ ವ್ಯವಹರಿಸುತ್ತಿದ್ದವು. ಆದರೆ ವಿರೋಧಿಗಳ ಅಪಪ್ರಚಾರದಿಂದಾಗಿ ಈಗ ಅವರೂ ದೂರವಾಗುತ್ತಿದ್ದಾರೆ.

ಇಮ್ರಾನ್ ಖಾನ್ ಪ್ರಧಾನ ಮಂತ್ರಿ ಆದ ಮೇಲೆ ಏನಾದರೂ ಬದಲಾವಣೆ ಆಗಿದೆಯೇ ಎಂಬ ಪ್ರಶ್ನೆಗೆ ಉತ್ತರಿಸುತ್ತಾ ಹುಝೂರ್ ಹೇಳಿದರು – ಈ ಪ್ರಶ್ನೆಯ ಉತ್ತರವನ್ನು ನೀವು ಈ ಸಂಗತಿಯಿಂದ ಗ್ರಹಿಸಬಹುದು: ಇಮ್ರಾನ್ ಖಾನ್ ಆರ್ಥಿಕ ಸಲಹೆ ಸಮಿತಿ ರಚನೆ ಮಾಡುವಾಗ ಓರ್ವ ಅಹ್ಮದಿ ಸದಸ್ಯರನ್ನು ಆಯ್ಕೆ ಮಾಡಿಕೊಂಡಿದ್ದರು. ಮೌಲ್ವಿಗಳ ಬೊಬ್ಬೆ ಪ್ರಾರಂಭವಾಯಿತು. ಅದಕ್ಕೆ ಹೆದರಿ ನಿರ್ಣಯ ಹಿಂದಕ್ಕೆ ಪಡೆದರು. ಪ್ರಸಕ್ತ ಸರಕಾರವು ಮೌಲ್ವಿಗಳ ಮುಂದೆ ವಿವಶವಾಗಿದೆ. ಯಾವ ಬದಲಾವಣೆಯೂ ಆಗಿಲ್ಲ. ಬದಲಾಗಿ ಮೊದಲಗಿಂತ ಹೆಚ್ಚು ಪ್ರಕರಣಗಳು ನಮ್ಮ ವಿರುದ್ಧ ಬರತೊಡಗಿವೆ ಎಂದರು.

ಹುಝೂರ್ ಹೇಳಿದರು. ಹಲವು ರಾಜಕಾರಣಿಗಳು ಮೌಲ್ವಿಗಳ ಒತ್ತಡದಿಂದ ತಮ್ಮ ಕೈ ಕಟ್ಟಿದಂತಾಗಿದೆ ಎಂಬುದನ್ನು ಒಪ್ಪುತ್ತಾರೆ. ಯಾಕೆಂದರೆ ಮೌಲ್ವಿಗಳಿಗೆ ಜನರನ್ನು ಬೀದಿಗೆಳೆಯುವ ತಾಕತ್ತಿದೆ.

Frank Heinrich, ಪಾರ್ಲಿಮೆಂಟ್ ಸದಸ್ಯರು ಹುಝೂರ್ ಯು.ಕೆ ನಲ್ಲಿ ನೆಮ್ಮದಿಯಾಗಿರುವರೇ ಎಂದು ವಿಚಾರಿಸಿದರು. ಧಾರ್ಮಿಕ ಸ್ವಾಂತ್ರ್ಯವಿದ್ದಲ್ಲಿ, ಎಲ್ಲ ಜನರಿಗೆ ಸಮಾನ ನಾಗರಿಕ ಹಕ್ಕುಗಳನ್ನು ನೀಡಿರುವಲ್ಲಿ ತಾನು ನೆಮ್ಮದಿಯಾಗಿರುತ್ತೇನೆ ಎಂದು ಹುಝೂರ್ ಉತ್ತರಿಸಿದರು.

ಇನ್ನೊಂದು ಪ್ರಶ್ನೆಯ ಉತ್ತರವಾಗಿ ಹುಝೂರ್ ಹೇಳಿದರು. ಪಾಕಿಸ್ಥಾನದಲ್ಲಿ 40 ವರ್ಷಕ್ಕಿಂತ ಹೆಚ್ಚಿನ ಅವಧಿಯಿಂದ ನಾವು ದೌರ್ಜನ್ಯಗಳನ್ನು ಎದುರಿಸುತ್ತಿದ್ದೇವೆ. ಅಲ್ಲಿ ವಾಸಿಸುವ ಅಹ್ಮದಿಯರು ಮೌನವಾಗಿ ಈ ಕಷ್ಟಗಳನ್ನು ಸಹಿಸುತ್ತಿದ್ದಾರೆ. ಯಾರಿಗೆ ಸಹಿಸಲು ಆಗುತ್ತಿಲ್ಲವೋ ಅವರು ವಲಸೆ ಹೊಂದುತ್ತಿದ್ದಾರೆ. ಅಂತೂ ನನ್ನ ಕಾಳಜಿಯು ಲೋಕದಾದ್ಯಂತ ವಾಸಿಸುವ ಅಹ್ಮದಿಯರ ಪರವಾಗಿದೆ. ನೇಪಾಳ, ಮಲೇಷಿಯಾ, ಥಾಯ್‌ಲ್ಯಾಂಡ್, ಶ್ರೀಲಂಕಾ ಮುಂತಾದ ಹಲವು ದೇಶಗಳಲ್ಲಿ UNHCR ಕೇಸುಗಳನ್ನು ಆಲಿಸುತ್ತದೆ. ಮತ್ತೆ ಆ ಜನರು ಯೂರೋಪ್ ಅಥವಾ ಇತರ ದೇಶಗಳಿಗೆ ವಲಸೆ ಹೋಗುತ್ತಾರೆ. ಕೇವಲ ಪಾಕಿಸ್ತಾನದಲ್ಲಿ ಮಾತ್ರವೇ ನಮ್ಮನ್ನು ವಿರೋಧಿಸುತ್ತಿಲ್ಲ. ಉದಾಹರಣೆಗೆ ಮಲೇಶಿಯಾದ ಕೆಲವು ರಾಜ್ಯಗಳಲ್ಲಿ ಕೂಡಾ ಜನರು ನಮ್ಮನ್ನು ಅಮುಸ್ಲಿಮರು ಎಂದು ಭಾವಿಸುತ್ತಾರೆ.

ಮುಸ್ಲಿಂ ಪಾರ್ಲಿಮೆಂಟ್ ಸದಸ್ಯರಾದ Omid Nouripoor ಹೇಳಿದರು. ಮಲೇಷಿಯಾದಲ್ಲಿಯೂ ನೀವು ಸಮಸ್ಯೆಯನ್ನು ಎದುರಿಸುತ್ತಿದ್ದೀರಿ ಎಂದು ಕೇಳಿ ದುಃಖವಾಯಿತು. ಏಕೆಂದರೆ ನಾವು ಮುಸ್ಲಿಮ್ ರಾಷ್ಟ್ರಗಳಲ್ಲಿ ಅತ್ಯಂತ ಸಹನೆ ಹೊಂದಿದವರಾಗಿದ್ದೇವೆ ಎಂದು ಅವರು ಹೇಳುತ್ತಿದ್ದಾರೆ.

ಆಗ ಹುಝೂರ್ ಹೇಳಿದರು. ಸಾಮಾನ್ಯವಾಗಿ ಮೌಲ್ವಿಗಳು ಸಹನಾಶೂನ್ಯರಾಗಿದ್ದಾರೆ. ಎಲ್ಲ ಪಂಥದವರು ಒಬ್ಬರು ಇನ್ನೊಬ್ಬರ ಕೆಡುಕುಗಳನ್ನು ಹೇಳುತ್ತಾರೆ. ನಿಸ್ಸಂದೇಹವಾಗಿ ಅವರು ಇತರ ಪಂಥಗಳನ್ನು ನಮ್ಮಂತೆ ಅಮುಸ್ಲಿಮರೆಂದು ಘೋಷಿಸಿಲ್ಲ. ಆದರೆ ಪರಸ್ಪರರಲ್ಲಿ ಹಗೆತನವಿದೆ. ಆದರೆ ಪಾಕಿಸ್ಥಾನದಲ್ಲಿ ನಮ್ಮ ವಿರುದ್ಧ 1974 ರಲ್ಲಿ ಕಾನೂನು ಮಾಡಿದ್ದರು. "You are not a muslim for the purpose of law and constitution" ಈ ಕಾನೂನು ಮಾಡಿದಾಗಲೂ ಸಂಯುಕ್ತವಾಗಿಯೇ ಚುನಾವಣೆಗಳು ನಡೆಯುತ್ತಿದ್ದವು. ಅನಂತರ ಅದನ್ನು ಅಂತ್ಯಗೊಳಿಸಲಾಯಿತು. ಅನಂತರ 1984ರಲ್ಲಿ ಝಿಯಾವುಲ್ ಹಖ್ ತಂದ ಕಾನೂನುಗಳಲ್ಲಿ ಹೆಚ್ಚಿನ ನಿರ್ಬಂಧಗಳನ್ನು ಹೇರಲಾಯಿತು. ನಾವು ಮಸೀದಿಯನ್ನು ಮಸೀದಿ ಎಂದು ಹೇಳಬಾರದು. ಮಕ್ಕಳಿಗೆ ಅಹ್ಮದ್, ಮುಹಮ್ಮದ್ ಅಥವಾ ಯಾವುದೇ ಇಸ್ಲಾಮಿಕ್ ಹೆಸರುಗಳನ್ನು ಇಡಬಾರದು, ಅಸ್ಸಲಾಮು ಅಲೈಕುಮ್ ಹೇಳಬಾರದು ಮುಂತಾದ ಕಠಿಣವಾದ ಕಾನೂನುಗಳನ್ನು ನಮ್ಮನ್ನು ವಿರೋದಿಸಲಿಕ್ಕಾಗಿ ತಂದರು.

ಮಾತುಕತೆಯ ನಡುವೆ – ಜರ್ಮನ್ ಸರಕಾರ ಸೀರಿಯಾ ಸಮಸ್ಯೆಯನ್ನು ರಾಜಕೀಯವಾಗಿ ಪರಿಹರಿಸಲು ತುಂಬ ಸಕ್ರಿಯವಾಗಿದೆ ಎಂದು ಹೇಳಲಾಯಿತು. ಆಗ ಹುಝೂರ್(ಅಬಿಅ) ಅಲ್ಲಿ ಉಪಸ್ಥಿತರಿದ್ದ ರಾಜಕಾರಣಿಗಳನ್ನು ಉದ್ದೇಶಿಸಿ ಹೇಳಿದರು – ಪ್ರಸಕ್ತ ಸಮಯದಲ್ಲಿ ಕುರ್ದಿಶ್ ಜನರಿಗೆ ನಿಜವಾಗಿಯೂ ಜಾಗತಿಕ ಸಹೋದರರಿಂದ ಸಹಕಾರದ ಅವಶ್ಯಕತೆ ಇದೆ ಎಂದು.

* ಬಾಂಗ್ಲಾದೇಶದಲ್ಲಿ ಜಮಾಅತಿನ ಪರಿಸ್ಥಿತಿ ಹೇಗಿದೆ ಎಂಬ ಪ್ರಶ್ನೆಗೆ ಉತ್ತರಿಸುತ್ತ ಹುಝೂರ್ ಹೇಳಿದರು. ಬಾಂಗ್ಲಾದೇಶ ಸರಕಾರ ನ್ಯಾಯ ನೀಡಲು ಪ್ರಯತ್ನ ಮಾಡುತ್ತಿದೆ. ಆದರೆ ಕೆಳ ಮಟ್ಟದ ಕೆಲವು ಕ್ಷೇತ್ರಗಳಲ್ಲಿ

ಸ್ಥಳೀಯ ಅಧಿಕಾರಿಗಳಿಂದ, ಮುಲ್ಲಾಗಳ ಕಾಟದಿಂದಾಗಿ, ಸಮಸ್ಯೆಗಳಿವೆ. ಸರಕಾರ ನಮ್ಮ ವಿರುದ್ಧವಿಲ್ಲ. ಆದರೆ ಅಲ್ಲಿಯ ಮುಲ್ಲಾಗಳು ನಮ್ಮ ವಿರುದ್ಧವಾಗಿದ್ದಾರೆ. ಅವರಿಗೆ ತಿಳಿದಿದೆ. ನಾವು ಪಾಕಿಸ್ತಾನದ ರೀತಿಯಲ್ಲಿ ಅಹ್ಮದಿಯರೊಡನೆ ವರ್ತಿಸಿದರೆ ನಮ್ಮ ಗತಿಯೂ ಪಾಕಿಸ್ತಾನದಂತಾಗುವುದು. ಏಕೆಂದರೆ ಅದರಿಂದ ಉಗ್ರವಾದಕ್ಕೆ ಪುಷ್ಟಿ ದೊರಕುತ್ತದೆ.

ಈ ಸಭೆ 7 ಗಂಟೆಯವರೆಗೆ ನಡೆಯಿತು. ಅನಂತರ ಆ ಮೂವರೂ ಸದಸ್ಯರುಗಳು ಹುಝೂರ್(ಅಬಿಅ) ರವರ ಜೊತೆಯಲ್ಲಿ ಭಾವಚಿತ್ರ ತೆಗೆಯಿಸಿಕೊಳ್ಳುವ ಭಾಗ್ಯ ಪಡೆದರು.

ಅನಂತರ 7 ಗಂಟೆ 10 ನಿಮಿಷಕ್ಕೆ ಹುಝೂರ್ ಸಮಾರಂಭ ಏರ್ಪಡಿಸಿದ್ದ ಸಭಾಂಗಣಕ್ಕೆ ಆಗಮಿಸಿದರು. ಅಲ್ಲಿ ಹುಝೂರ್(ಅಬಿಅ) ಆಗಮಿಸುವ ಮುಂಚಿತವಾಗಿಯೇ ಅತಿಥಿಗಳು ತಮ್ಮ ಆಸನಗಳಲ್ಲಿ ಆಸೀನರಾಗಿದ್ದರು.

ಇಂದಿನ ಈ ಸಮಾರಂಭದಲ್ಲಿ ಭಾಗವಹಿಸಿದ ಅತಿಥಿಗಳಲ್ಲಿ 27 ಮಂದಿ ಜರ್ಮನಿಯ ರಾಷ್ಟ್ರೀಯ ಅಸೆಂಬ್ಲಿಯ ಸದಸ್ಯರಾಗಿದ್ದರು. ಅವರಲ್ಲಿ 14 ಮಂದಿ ಪಕ್ಷದ ಪ್ರತಿನಿಧಿಗಳಾಗಿ ಭಾಗವಹಿಸಿದ್ದರು. ಅವರಲ್ಲದೆ ವಿದೇಶಾಂಗ ಕಚೇರಿಯ 3 ಪ್ರತಿನಿಧಿಗಳೂ ಇದ್ದರು. ಅವರು "ಧಾರ್ಮಿಕ ಹಾಗೂ ರಾಜಕೀಯ" ನಿರ್ದೇಶಕರಾಗಿದ್ದರು. ಗೃಹ ಮಂತ್ರಾಲಯ ಮತ್ತು Development ಮಂತ್ರಾಲಯದ ಪ್ರತಿನಿಧಿಗಳೂ ಇದ್ದರು. ಜರ್ಮನಿ ಆರ್ಮಿಯ 3 ನಿರ್ದೇಶಕರೂ ಇದ್ದರು. U.S.A ಮತ್ತು ಫ್ರೆಂಚ್ ರಾಯಭಾರಿಗಳ ರಾಜಕೀಯ ಅಧಿಕಾರಿಗಳೂ ಇದ್ದರು. ನ್ಯಾಷನಲ್ ಅಸೆಂಬ್ಲಿ ಸದಸ್ಯರುಗಳ ಕಚೇರಿಯ 11 ಪ್ರತಿನಿಧಿಗಳೂ ಇದ್ದರು. ಪ್ರಸಾರ ಮಾಧ್ಯಮದ 6 ಪ್ರತಿನಿಧಿಗಳೂ ಭಾಗವಹಿಸಿದ್ದರು. 5 ಪ್ರೋಫೆಸರ್‌ಗಳು ಭಾಗವಹಿಸಿದ್ದರು. ಅವರಲ್ಲಿ ಬರ್ಲಿನ್ ಯೂನಿವರ್ಸಿಟಿ ಉಪಾಧ್ಯಕ್ಷರು ಮತ್ತು ಜರ್ಮನಿ ಮಧ್ಯ ಪ್ರಾಚ್ಯದಲ್ಲಿ ಆ ಸಮಯಕ್ಕೆ ಸನದು ಎಂಬ ಖ್ಯಾತಿ ಪಡೆದ ಪ್ರೋಫೆಸರ್ ಶಟಾಯಿನ್ ಬಾಖ್ ಅವರೂ ಭಾಗವಹಿಸಿದ್ದರು. ಅವರುಗಳಲ್ಲದೇ ಹಲವು ರಾಜಕಾರಿಣಿಗಳು, ಧಾರ್ಮಿಕ ಮುಖಂಡರು ಮತ್ತು Welfare Association ಹಾಗೂ Civil Society ಗೆ ಸಂಬಂಧಿಸಿದ ಜನರು ಭಾಗವಹಿಸಿದ್ದರು. ಹೀಗೆ ಒಟ್ಟು 82 ಅತಿಥಿಗಳು ಭಾಗವಹಿಸಿದ್ದರು.

ವೇದಿಕೆಯ ಮೇಲೆ ಹುಝೂರ್(ಅಬಿಅ) ರವರ ಜೊತೆಯಲ್ಲಿ Mr. Niels Annen ರಾಜ್ಯಮಂತ್ರಿಗಳು ಮತ್ತು ಉಪ ವಿದೇಶಾಂಗ ಮಂತ್ರಿ, Mr. Heinrich, ಸಂಸದರು ಮಾನವ ಹಕ್ಕುಗಳ ವಕ್ತಾರರು, Omid Nouripoor ಸಂಸದರು ವಿದೇಶಾಂಗ ಇಲಾಖೆಯ ವಕ್ತಾರರು ಆಸೀನರಾಗಿದ್ದರು.

ಕಾರ್ಯಕ್ರಮದ ಆರಂಭವು ಪವಿತ್ರ ಖುರ್‌ಆನ್ ಪಠಣದಿಂದಾಯಿತು. ಅದನ್ನು ಮುಕರ್‍ರಮ್ ಜರಿಯುಲ್ಲಾಹ್ ಜರ್ಮನಿಯ ಮುಬಲ್ಲಿಗರು ನೆರವೇರಿಸಿದರು. ಅನಂತರ ಅದರ ಅನುವಾದವನ್ನು ಜರ್ಮನ್ ಭಾಷೆಯಲ್ಲಿ ಪ್ರಸ್ತುತಪಡಿಸಿದರು. ಅನಂತರ ಮುಕರ್‍ರಮ್ ದಾವೂದ್ ಅಹ್ಮದ್ ಮಜೂಕ, ನೇಶನಲ್ ಸೆಕ್ರೆಟರಿ ಉಮೂರೇ ಖಾರಿಜ ಜರ್ಮನಿ ಅವರು ಜಮಾಅತಿನ ಪರಿಚಯ ಮಾಡಿಕೊಟ್ಟರು.

ಅನಂತರ ಮುಕರ್‍ರಮ್ ಅಮೀರ್ ಸಾಹಿಬ್ ಜರ್ಮನಿ ಅಬ್ದುಲ್ಲ ವಾಗಸ್ ಹೌಝುರ್ ಸಾಹಿಬ್ ತಮ್ಮ ಪರಿಚಯ ಭಾಷಣ ಪ್ರಸ್ತುತಪಡಿಸಿದರು ಮತ್ತು ಅತಿಥಿಗಳಿಗೆ ಶುಭಾಗಮನ ಬಯಸಿದರು. ಅಮೀರ್ ಸಾಹಿಬ್ ಹೇಳಿದರು. ಅಹ್ಮದಿಯಾ ಮುಸ್ಲಿಮ್ ಜಮಾಅತ್ ಒಂದು ಆಧ್ಯಾತ್ಮಿಕ ಸಂಘಟನೆಯಾಗಿದೆ. ಅದು 200 ಕ್ಕಿಂತ ಹೆಚ್ಚಿನ ದೇಶಗಳಲ್ಲಿ ಸ್ಥಾಪಿತಗೊಂಡಿದೆ. ಅದರಲ್ಲಿ ಹಲವು ಮಿಲಿಯನ್ ಸದಸ್ಯರಿದ್ದಾರೆ. ಜಮಾಅತ್ ಮತ್ತು ಅದರ ಸದಸ್ಯರು ಎಂದೆಂದೂ ಅಲ್ಲಾಹನ ರಹ್ಮಾನಿಯತ್ ಗುಣವನ್ನು ಧಾರಣೆ ಮಾಡಲು, ಸಮಾಜದಲ್ಲಿ ಶಾಂತಿ ಸ್ಥಾಪಿಸಲು ಮತ್ತು ಮಾನವಕುಲದ ಕಷ್ಟ ಕಾರ್ಪಣ್ಯಗಳನ್ನು ದೂರ ಮಾಡಲು ಹವಣಿಸುತ್ತಾರೆ. ಧರ್ಮದ ಮೂಲಕವೇ ಮನುಷ್ಯರಲ್ಲಿ ಏಕತೆ ಸಾಧಿಸಬಹುದು ಎಂದು ನಮಗೆ ದೃಢ ವಿಶ್ವಾಸವಿದೆ. ಏಕೆಂದರೆ ಒಬ್ಬ ಮುಸಲ್ಮಾನನಿಗೆ ಎಲ್ಲ ಪ್ರವಾದಿಗಳ ಮತ್ತು ಪವಿತ್ರ ಗ್ರಂಥಗಳ ಮೇಲೆ ವಿಶ್ವಾಸ ಹೊಂದುವುದು ಅನಿವಾರ್ಯವಾಗಿದೆ.

ಅಮೀರ್ ಸಾಹಿಬ್ ಹೇಳಿದರು. ಐತಿಹಾಸಿಕ ನೆಲೆಯಲ್ಲಿ ನೋಡುವುದಾದರೆ 1928 ರಿಂದಲೇ ಅಹ್ಮದಿಯಾ ಜಮಾಅತ್ ಜರ್ಮನಿಯಲ್ಲಿ ಪ್ರವೇಶ ಮಾಡಿದೆ. ಆಗ ಬರ್ಲಿನ್‌ನಲ್ಲಿ ಒಂದು ಮಸೀದಿಗೆ ಅಡಿಗಲ್ಲು ಹಾಕಲಾಗಿತ್ತು. ಆದರೆ ಅವರ ನಿರ್ಮಾಣ ಕಾರ್ಯ inflation ಮತ್ತು ಆ ಸಮಯದ ಆರ್ಥಿಕ ಸಮಸ್ಯೆಗಳಿಂದಾಗಿ ಪರಿಪೂರ್ಣವಾಗಿರಲಿಲ್ಲ. ಆ ನೆಲೆಯಲ್ಲಿ ಪ್ರಥಮ ಮಸೀದಿಯು 1957 ರಲ್ಲಿ ಯುದ್ಧ ನಂತರ ಹೆಂಬರ್ಗಿನಲ್ಲಿ ನಿರ್ಮಾಣಗೊಂಡಿತು. ಸರಿಯಾಗಿ 60 ವರ್ಷಗಳ ಮುಂಚೆ ಅಂದರೆ 1959 ರಲ್ಲಿ ಫ್ರೆಂಕ್‌ಫರ್ಟ್‌ನಲ್ಲೂ ಒಂದು ಮಸೀದಿ ನಿರ್ಮಿಸಲಾಯಿತು. ಇವು ಜರ್ಮನಿಯ ಮೊದಲ ಎರಡು ಮಸೀದಿಗಳಾಗಿದ್ದವು. ಅದು ಯುದ್ಧದ ನಂತರ ನಿರ್ಮಿಸಲಾಗಿತ್ತು. ಇಂದು ಅಹ್ಮದಿಯಾ ಜಮಾಅತ್ ಜರ್ಮನಿಯ ನಮೂದಿತ ಸಂಖ್ಯೆ 5000ಕ್ಕೆ ಸಮೀಪವಿದೆ. ಅದು ಸ್ಥಳೀಯ ನೆಲೆಯಲ್ಲಿ 255 ಜಮಾಅತುಗಳಲ್ಲಿ ವಿಂಗಡಿಸಲ್ಪಟ್ಟಿದೆ. ಜಮಾಅತ್ತಿನ ಸದಸ್ಯರು ಸ್ಥಳೀಯ ನೆಲೆಯಲ್ಲಿ ವಿವಿಧ ರೀತಿಯಲ್ಲಿ ಸಮಾಜದ ಏಳಿಗೆಗಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಸರ್ವಧರ್ಮಗಳಲ್ಲಿ ಏಕತೆಗಾಗಿ ಶ್ರಮಿಸುತ್ತಿದ್ದಾರೆ. ಸರ್ವಧರ್ಮಗಳ ಯುದ್ಧ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಾರೆ. ಹೊಸ ವರ್ಷದ ಸಂದರ್ಭದಲ್ಲಿ **"ವಖಾರೆ ಅಮಲ್" (ಸೇವಾ ಕಾರ್ಯ),** ರಕ್ತದಾನ, Charity walks ಮತ್ತು tree-planting (ಸಸ್ಯ ನೆಡುವಿಕೆ) ಇತ್ಯಾದಿ. ಅದಲ್ಲದೇ 2008 ರಲ್ಲಿ ಜಾಮಿಯಾ ಅಹ್ಮದಿಯಾ ಜರ್ಮನಿ ಸ್ಥಾಪನೆಯಾಯಿತು. ಇದು ಮುಬಲ್ಲಿಗ್ ಶಿಕ್ಷಣದ ಪ್ರಥಮ ಸಂಸ್ಥೆಯಾಗಿದೆ. ಇದು 7 ವರ್ಷಗಳ ಕಾಲದ ಶಿಕ್ಷಣಾರ್ಥಿ ಒಳಗೊಂಡಿರುತ್ತದೆ. ಇಲ್ಲಿಯವರೆಗೆ 60 ಯುವಕರು ಈ ಅವದಿಯನ್ನು ಮುಗಿಸಿರುತ್ತಾರೆ. ಅದಲ್ಲದೇ ಒಂದು ವರ್ಷ ಮುಂಚೆ ಒಂದು welfare organization (ಸಮಾಜ ಕಲ್ಯಾಣ) ಸಂಸ್ಥೆಯನ್ನು ಸ್ಥಾಪಿಸಲಾಯಿತು. ಅದು ವಲಸಿಗರ, ನಿರ್ವಸತಿ ಜನರ ಮತ್ತು ಕಿಂಡರ್‌ಗಾರ್ಡನ್‌ಗಳಿಗೆ ನೆರವು ನೀಡುವ ಕಾರ್ಯ ಮಾಡುತ್ತಿದೆ.

ಅಮೀರ್ ಸಾಹಿಬ್ ಹೇಳಿದರು. ಅಹ್ಮದಿಯಾ ಮುಸ್ಲಿಂ ಜಮಾಅತ್ ದೇಶದ ಎಲ್ಲ ಕಾನೂನುಗಳನ್ನು ಪಾಲಿಸುವುದು ಅನಿವಾರ್ಯ ಎಂದು ಭಾವಿಸುತ್ತಿದೆ. ಜಮಾಅತ್ ಸದಸ್ಯರಿಗೆ ಜರ್ಮನಿ ಅವರ ಜನ್ಮಸ್ಥಳವಾಗಿದೆ. ಏಕೆಂದರೆ ಈಗ ಎಷ್ಟೋ ಪೀಳಿಗೆಗಳು ಜರ್ಮನಿನಲ್ಲಿ ವಾಸಿಸುತ್ತ ಬಂದಿವೆ.

ಅನಂತರ Mr. Frank Heinrich ಸಾಹಿಬ್ ತಮ್ಮ ಪರಿಚಯ ಭಾಷಣ ಪ್ರಸ್ತುತಪಡಿಸಿದರು. ಅವರ ಸಂಬಂಧ CDU ಪಕ್ಷದೊಂದಿಗಿದೆ. ಅವರು ನ್ಯಾಷನಲ್ ಅಸೆಂಬ್ಲಿಯ ಸದಸ್ಯರೂ ಆಗಿದ್ದಾರೆ. ಅವರು ತಮ್ಮ ಭಾಷಣದಲ್ಲಿ ಪ್ರಪ್ರಥಮವಾಗಿ ಹುಝೂರರಿಗೆ ಮತ್ತು ಎಲ್ಲ ಸಭಿಕರಿಗೆ ಶುಭಾಗಮನ ಕೋರಿದರು. ಸಲಾಂ ಹೇಳಿದರು ಮತ್ತು ಅದರ ಜೊತೆಯಲ್ಲಿ ತಮ್ಮನ್ನು ಮತ್ತು ಅದೇ ರೀತಿಯಲ್ಲಿ ಇತರ ನ್ಯಾಷನಲ್ ಅಸೆಂಬ್ಲಿ ಸದಸ್ಯರನ್ನು ಈ ಕಾರ್ಯಕ್ರಮಕ್ಕೆ ಆಹ್ವಾನಿಸಿದುದಕ್ಕೆ ಕೃತಜ್ಞತೆಗಳನ್ನು ಸಲ್ಲಿಸಿದರು.

ಅವರು ಹೇಳಿದರು. ನಾನು ಅಹ್ಮದಿಯಾ ಜಮಾಅತಿನ ಬಗ್ಗೆ ಯೋಚಿಸಿದರೆ ಎರಡು ವಿಭಿನ್ನ ಭಾವನೆಗಳು ನನ್ನ ಹೃದಯದಲ್ಲಿ ಮೂಡುತ್ತವೆ. ಒಂದೆಡೆ ನನ್ನ ಹೃದಯವು ಸಂತೋಷ ಹಾಗೂ ಕೃತಜ್ಞತೆಯ ಭಾವದಿಂದ ತುಂಬುತ್ತದೆ. ಇನ್ನೊಂದೆಡೆ ನೋವು ಮತ್ತು ದುಃಖದ ಭಾವನೆಗಳು ಕಾಡುತ್ತವೆ. ಈಗ ಈ ಮಾತುಗಳನ್ನು ಉಲ್ಲೇಖಿಸಿ ಹೇಳಬಯಸುತ್ತೇನೆ. ನಿಮ್ಮೊಡನೆ ಭೇಟಿಯಾಗುವಾಗ ನಮ್ಮ ಈ ಧ್ಯೇಯ – "ಪ್ರೀತಿ ಎಲ್ಲರಲ್ಲೂ ದ್ವೇಷವಿಲ್ಲ ಯಾರಲ್ಲೂ" ಸ್ಪಷ್ಟವಾಗಿರುತ್ತದೆ. ನನ್ನನ್ನು ಜಲ್ಸ ಸಾಲಾನ ಜರ್ಮನಿಗೂ ಆಹ್ವಾನಿಸಲಾಗಿತ್ತು. ಮತ್ತು ನನಗೆ ಭಾಗವಹಿಸುವ ಸಂದರ್ಭವು ಒದಗಿ ಬಂದಿತ್ತು. ಅಲ್ಲಿ 34 ಸಾವಿರ ಸ್ತ್ರೀ ಪುರುಷ ಬಾಂಧವರು ಸೇರಿದ್ದರು. ನನಗೂ ಎರಡು ಮಾತುಗಳನ್ನು ಹೇಳುವ ಅವಕಾಶ ದೊರಕಿತ್ತು. ಆ ಜಲ್ಸ ಮೂಲಕ ನನ್ನ ಎಲ್ಲ ತಪ್ಪು ಕಲ್ಪನೆಗಳು ದೂರವಾದವು ಮತ್ತು ಇಸ್ಲಾಮಿನ ವಾಸ್ತವಿಕತೆ ನನಗೆ ಮನವರಿಕೆಯಾಯಿತು. ಆ ಕಾರಣದಿಂದ ನಿಮಗೆಲ್ಲರಿಗು ನಾನು ತುಂಬ ಕೃತಜ್ಞನಾಗಿದ್ದೇನೆ. ಅಲ್ಲದೇ ನಾನು ನಿಮಗೆ chammitz ನಗರದಿಂದಲೂ ಅರಿತವನಾಗಿದ್ದೇನೆ. ವಿಶೇಷವಾಗಿ ಹೊಸ ವರ್ಷದ ಸ್ವಚ್ಛತಾಕಾರ್ಯಗಳ ನಿಮಿತ್ತ ಎಂದು ಅವರು ಹೇಳಿದರು. ಇನ್ನೊಂದೆಡೆ ಪಾಕಿಸ್ತಾನದ ಸುದ್ದಿಗಳನ್ನು ಕೇಳಿ ನನಗೆ ತುಂಬ ದುಃಖ ಉಂಟಾಗುತ್ತದೆ. ಹಾಗೆಯೇ En funt ನಲ್ಲಿ ನಿಮಗೆ ಮಸೀದಿ ನಿರ್ಮಾಣ ಕಾರ್ಯದಲ್ಲಿ ತೊಡಕಾದ ವಿಷಯವನ್ನು ತಿಳಿದೂ ತುಂಬ ದುಃಖವಾಗುತ್ತದೆ ಎಂದರು.

Hienrich ಪಾರ್ಲಿಮೆಂಟ್ ಸದಸ್ಯರು ಮುಂದುವರೆದು ಹೇಳಿದರು. ನಾನು ಮೊದಲು ಒಬ್ಬ ಪಾದರಿಯಾಗಿದ್ದೆ. ನನ್ನ ದೃಷ್ಟಿಯಲ್ಲಿ ಒಂದು ಬಹು ಮುಖ್ಯ ಮಾತು ಏನೆಂದರೆ ಕೇವಲ ಮಾತನಾಡಬಾರದು. ಮಾತುಗಳಂತೆ ಕೃತಿಯಲ್ಲಿಯೂ ಕಾಣುವಂತಾಗಬೇಕು. ಇದು ನಿಮ್ಮ ಜಮಾಅತಿನಲ್ಲಿ ನನಗೆ ಕಂಡು ಬರುತ್ತಿದೆ. ನನಗೆ ತುಂಬ ಸಂತೋಷವಿದೆ. ನೀವು ಖಲೀಫರ ನೇತೃತ್ವದಲ್ಲಿ ಇಸ್ಲಾಮಿನ ಶಿಕ್ಷಣವನ್ನು ಪುನಃ ಜನರ ಮುಂದೆ ಪ್ರಸ್ತುತಪಡಿಸುತ್ತಿದ್ದೀರಿ. ಅದರ ಮೌಲ್ಯಗಳನ್ನು ಸ್ಥಾಪಿಸುತ್ತಿದ್ದೀರಿ ಮತ್ತು ಈ ಸಂದೇಶ ಜನರಿಗೆ ತಲುಪಿಸುತ್ತಿದ್ದೀರಿ. ನೀವು ನಿಜವಾಗಿಯೂ ಇತರ ಧರ್ಮೀಯ ಜಮಾಅತುಗಳಿಂದ ಭಿನ್ನರಾಗಿದ್ದೀರಿ. ನನಗೆ ಈ ಮಾತಿನ ಸಂತೋಷವೂ ಇದೆ ಮತ್ತು ಆಶಯವೂ ಇದೆ. ಇಂದು ಏರ್ಪಡಿಸಿದಂತಹ ಕಾರ್ಯಕ್ರಮಗಳನ್ನು ಏರ್ಪಡಿಸುವುದಲ್ಲದೇ ಅದನ್ನು ಜನರಿಗೆ ಮನವರಿಕೆಯಾಗುವಂತೆ ಪ್ರಸಾರ ಮಾಡಬೇಕು.

**(ಮುಂದುವರಿಯುವುದು)**

**ಇನ್ಸಾನಿಯತ್ ಝಿಂದಾಬಾದ್**
**ಮಾನವೀಯತೆ ಚಿರಕಾಲ ಬಾಳಲಿ**

EDITOR
TARIQ AHMED IDRIS.
Mobile : +91 8050330779
e-mail: kannadabadar@gmail.com
website:www.akhbarbadarqadian.in

TITLE NO: PUNKAN00001
Weekly **BADAR** Qadian
Distt: Gurdaspur (Pb.) INDIA Qadian - 143516
Vol No.1 Thursday, 11 June 2020 Issue No. 22

MANAGER
NAWAB AHMAD.
Mobile : +91 94170-20616
e-mail:managerbadrqnd@gmail.com
www.alislam.org/badr

ANNUAL SUBSCRIPTION:Rs.500/- (Per Issue: 10/- ) (WEIGHT: 20-50, grms / issue)

## *ಸಯ್ಯದನಾ ಹಝ್ರತ್ ಅಮೀರುಲ್ ಮೂಮಿನೀನ್ ಖಲೀಫತುಲ್ ಮಸೀಹ್ ಖಾಮಿಸ್‌ರವರ ಯೂರೋಪ್ ಪ್ರವಾಸ (ಸೆಪ್ಟೆಂಬರ್, ಅಕ್ಟೋಬರ್ 2019)*

**(ಬದರ್ ಸಂಚಿಕೆ 21ರ ವರದಿಯ ಉಳಿದ ಭಾಗ)**

ಹುಝೂರ್ ಅನ್ವರ್ ಮುಂದುವರಿಸುತ್ತಾ ಹೇಳಿದರು. Round table of Fulda ಪ್ರತಿನಿಧಿಯೊಬ್ಬರು – ಇಲ್ಲಿ ಒಂದು ನೂರಕ್ಕಿಂತ ಅಧಿಕ ದೇಶದ ಜನರು ವಾಸಿಸುತ್ತಾರೆ. ವಿವಿಧ ಧರ್ಮಗಳ ಜನರು ಇಲ್ಲಿ ಒಟ್ಟುಗೂಡುತ್ತಾರೆ ಎಂಬ ಮಾತನ್ನು ಹೇಳಿದ್ದಾರೆ. ಇದು ಅತ್ಯಂತ ಒಳ್ಳೆಯ ಮಾತಾಗಿದೆ. ಸರ್ವ ಧರ್ಮಗಳ ಜನರು ಒಟ್ಟುಗೂಡುತ್ತಾರೆ. ಪ್ರತಿ ವರ್ಷ ವಿಧಿಬದ್ಧವಾಗಿ ಸಮಾರಂಭಗಳನ್ನು ಏರ್ಪಡಿಸುತ್ತಾರೆ. ಅವರಿಂದ ಈ ಮಾತು ಕೇಳಿ ತುಂಬ ಸಂತೋಷವಾಗಿದೆ. ಆ ಸಮಾರಂಭದಲ್ಲಿ ಅಹ್ಮದಿಯಾ ಜಮಾಅತಿನ ಪ್ರತಿನಿಧಿಯೂ ಭಾಗವಹಿಸಿದ್ದರು. ಅವರು ಬಹಳ ಒಳ್ಳೆಯ ಮಾತನ್ನು ಹೇಳಿದ್ದಾರೆ. ಮಾನವ ಮೌಲ್ಯಗಳೇ ನಿಜವಾದ ಜೀವನ ಮೌಲ್ಯಗಳಾಗಿವೆ. ಅದುವೇ ನಮಗೆ ಇತರರ ಮೇಲೆ ಶ್ರೇಷ್ಠತೆಯನ್ನು ಕೊಡುತ್ತದೆ. ಅಲ್ಲಾಹನು ಮನುಷ್ಯನನ್ನು ಶ್ರೇಷ್ಟ ಸೃಷ್ಟಿಯನ್ನಾಗಿ ಮಾಡಿದ್ದಾನೆ. ನಾವು ಇತರ ಪ್ರಾಣಿಗಳಂತೆ ಒಬ್ಬನು ಇನ್ನೊಬ್ಬನೊಡನೆ ಕಚ್ಚಾಡಿದರೆ, ಕಷ್ಟಕ್ಕೆ ಗುರುಪಡಿಸಿದರೆ ನಮಗೆ ಮತ್ತು ಪ್ರಾಣಿಗಳಿಗೆ ಇರುವ ವ್ಯತ್ಯಾಸವಾದರೂ ಏನು? ಅಲ್ಲಾಹನು ನಮಗೆ ಬುದ್ಧಿಶಕ್ತಿಯನ್ನು ನೀಡಿದ್ದಾನೆ. ಅದನ್ನು ಸಂದರ್ಭಾನುಸಾರವಾಗಿ ಉಪಯೋಗಿಸಿಕೊಳ್ಳದಿದ್ದರೆ ನಾವು ಸೃಷ್ಟಿ ಶ್ರೇಷ್ಠರಾಗಿದ್ದರೂ ಏನು ಪ್ರಯೋಜನ? ನಾವು ನಮ್ಮ ಮೌಲ್ಯಗಳ ಮೂಲಕವೇ ಶ್ರೇಷ್ಠತೆಯನ್ನು ಪಡೆಯುತ್ತೇವೆ. ಅದು ಅಲ್ಲಾಹನು ಮಾನವನಗೆ ನೀಡಿದ ಶ್ರೇಷ್ಟ ಕೊಡುಗೆಯಾಗಿದೆ. ಆ ಮೂಲಕವೇ ಮಾನವ ಮೌಲ್ಯಗಳನ್ನು ಸ್ಥಾಪಿಸಬಹುದಾಗಿದೆ.

ಹುಝೂರ್(ಅಬಿಅ) ಹೇಳಿದರು. ಅಹ್ಮದಿಯಾ ಜಮಾಅತಿನ ಸ್ಥಾಪಕರನ್ನು ನಾವು ವಾಗ್ದತ್ತ ಮಸೀಹ್ ಎಂದು ನಂಬುತ್ತೇವೆ. ಅವರ ಕಾಲದಲ್ಲಿಯೂ ಸರ್ವಧರ್ಮ ಸಮ್ಮೇಳನವನ್ನು ಏರ್ಪಡಿಸಲಾಗಿತ್ತು. ಆ ಸಮ್ಮೇಳನದಲ್ಲಿ ವಿಧಿಸಲಾಗಿದ್ದ ಶರತ್ತುಗಳೆಂದರೆ, ಪ್ರತಿ ಧರ್ಮದವರು ತನ್ನ ಧರ್ಮದ ವಿಷಯವಾಗಿಯೇ ಉಪನ್ಯಾಸ ನೀಡಬೇಕು. ಬೇರೆ ಯಾವ ಧರ್ಮದ ನ್ಯೂನತೆಗಳನ್ನು ಹೇಳಬಾರದು. ಯಾವ ಧರ್ಮವನ್ನೂ ಹೀಯಾಳಿಸಬಾರದು. ತಮ್ಮ ಧರ್ಮದ ಒಳಿತುಗಳನ್ನಷ್ಟೇ ಜನರ ಮುಂದಿಡಬೇಕು. ನಾನು ಹೇಳಿದಂತೆ ಅಲ್ಲಾಹನು ಮನುಷ್ಯನಗೆ ಬುದ್ಧಿ ಕೊಟ್ಟಿದ್ದಾನೆ. ಸೃಷ್ಟಿಶ್ರೇಷ್ಠನನ್ನಾಗಿ ಮಾಡಿದ್ದಾನೆ. ಹಾಗಾಗಿ ಪ್ರತಿಯೊಬ್ಬ ಮಾನವನೂ ಒಳಿತುಗಳನ್ನು ನೋಡಿ ಸ್ವಯಂ ನಿರ್ಣಯಿಸಬೇಕು. ಅಲ್ಲಾಹನು ಪವಿತ್ರ ಖುರ್‌ಆನ್‌ನಲ್ಲಿ ಹೇಳುತ್ತಾನೆ. ಧರ್ಮದಲ್ಲಿ ಯಾವ ರೀತಿಯ ಬಲಾತ್ಕಾರವೂ ಇಲ್ಲ ಎಂದು. ಒಬ್ಬನು ಇನ್ನೊಬ್ಬನ ಧ'ರ್ಮವನ್ನು ಬಲವಂತವಾಗಿ ಬದಲಿಸುವಂತಿಲ್ಲ. ಮನುಷ್ಯ ಬುದ್ಧಿಯುಳ್ಳವನಾಗಿದ್ದಾನೆ. ಅವನಿಗೆ ಯೋಚಿಸುವ, ತಿಳಿದುಕೊಳ್ಳುವ ಮತ್ತು ನಿರ್ಣೈಸುವ ಸಾಮರ್ಥ್ಯವನ್ನು ಅಲ್ಲಾಹನು ನೀಡಿರುತ್ತಾನೆ. ಹಾಗಾಗಿ ಅವನು ಎಲ್ಲಾ ಧರ್ಮಗಳ ಉಪದೇಶಗಳನ್ನು ಕೇಳಬೇಕು. ಪ್ರತಿಯೊಂದು ಧರ್ಮದ ಶಿಕ್ಷಣವನ್ನು ತಿಳಿದುಕೊಳ್ಳಬೇಕು. ಪರೀಕ್ಷಿಸಬೇಕು. ಇದು ಹೃದಯ ವೈಶಾಲತೆಯನ್ನು ಸೂಚಿಸುತ್ತದೆ. ಇದರಿಂದ ಮಾನವ ಮೌಲ್ಯಗಳನ್ನು ಎತ್ತಿ ಹಿಡಿಯುವಂತಾಗುತ್ತದೆ ಹಾಗೂ ಪ್ರೀತಿಯ ಮತ್ತು ಶಾಂತಿಯ ಸಂದೇಶ ಒಡಮೂಡುತ್ತದೆ ಮತ್ತು ಪ್ರಸಾರಗೊಳ್ಳುತ್ತದೆ. ಆದುದರಿಂದ ನಾವು ಯಾವಾಗಲೂ ಮಾನವ ಮೌಲ್ಯಗಳನ್ನು ಸ್ಥಾಪಿಸುವ ಪ್ರಯತ್ನ ಮಾಡಬೇಕಾಗಿದೆ. ಇದು ಒಬ್ಬರು ಇನ್ನೊಬ್ಬರನ್ನು ಅರ್ಥ ಮಾಡಿಕೊಂಡಾಗ, ಅವರ ಭಾವನೆಗಳನ್ನು ಗೌರವಿಸುವಾಗ ಮತ್ತು ಸೇವಾ ಭಾವನೆ ಹೊಂದುವಾಗ ಮಾತ್ರ ಸಾಧ್ಯವಾಗುತ್ತದೆ.

ಹುಝೂರ್ ಹೇಳಿದರು. ಪವಿತ್ರ ಖುರ್‌ಆನಿನಲ್ಲಿ ಅಲ್ಲಾಹನು ಮುಸಲ್ಮಾನರಿಗೆ ಈ ಉಪದೇಶ ನೀಡುತ್ತಾನೆ. ಏನೆಂದರೆ ಕೆಲವು ಜನರ ನಮಾಝುಗಳು ಅವರ ವಿನಾಶಕ್ಕೆ ಕಾರಣವಾಗುತ್ತವೆ. ಏಕೆಂದರೆ ಇಂತಹವರು ತಬ್ಬಲಿಗಳನ್ನು ಮತ್ತು ನಿರ್ಗತಿಕರನ್ನು ರಕ್ಷಿಸುವುದಿಲ್ಲ, ಶಾಂತಿಯನ್ನು ಕದಡುತ್ತಾರೆ. ಮಾನವ ಮೌಲ್ಯಗಳನ್ನು ಎತ್ತಿ ಹಿಡಿಯುವುದಿಲ್ಲ. ಆದ್ದರಿಂದ ಅವರ ಆರಾಧನೆಗಳು ನಿರರ್ಥಕವಾಗುತ್ತವೆ. ಅಲ್ಲಾಹನು ಇಂತಹ ಆರಾಧನೆಗಳನ್ನು ಸ್ವೀಕರಿಸುವುದಿಲ್ಲ. ಆರಾಧಿಸಿರಿ, ಐದು ಹೊತ್ತು ಪ್ರಾರ್ಥಿಸಿರಿ. ಅದರ ಜೊತೆಯಲ್ಲಿ ಮಾನವ ಸೇನೆಯನ್ನೂ ಮಾಡಿರಿ ಮಾನವ ಮೌಲ್ಯಗಳನ್ನು ಸ್ಥಾಪಿಸಿರಿ. ಇದುವೇ ಇಸ್ಲಾಮಿನ ಪ್ರಾಥಮಿಕ ಶಿಕ್ಷಣವಾಗಿದೆ. ಇದನ್ನು ಅಹ್ಮದಿಯಾ ಜಮಾಅತ್ ಲೋಕದಲ್ಲಿ ಸ್ಥಾಪಿಸುವ ಪ್ರಯತ್ನದಲ್ಲಿದೆ. ಈ ಮಸೀದಿ ನನ್ನ ಇಂತಹ ಒಂದು ಆಶಯವಾಗಿದೆ. ನಾವು ಈ ಮಸೀದಿಯ ಮೂಲಕ ಮಾನವೀಯತೆಯ ಸೇವೆಯನ್ನು ಮುಂದುವರೆಸುವೆವು ಮತ್ತು ಮಾನವ ಮೌಲ್ಯಗಳನ್ನ ಸ್ಥಾಪಿಸುವೆವು. ಇತರರೊಡನೆ ಸೌಮ್ಯವಾಗಿ ವರ್ತಿಸುವೆವು. ಸಹನಶೀಲತೆಯನ್ನು ತೋರಿಸುವೆವು. ಇತರರ ಧರ್ಮಗಳನ್ನು ಗೌರವಿಸುವೆವು.

ಅಲ್ಲಾಹನು ಈ ಮಸೀದಿಯ ಮೂಲಕ ಇಸ್ಲಾಮಿನ ನಿಜವಾದ ಸಂದೇಶವನ್ನು ತಲುಪಿಸುವಂತೆ ಅನುಗ್ರಹಿಸಲಿ ಎಂದು ಹುಝೂರ್ ಪ್ರಾರ್ಥಿಸಿದರು. ಅಹ್ಮದಿಯರು ಮೊದಲಿಗಿಂತ ಹೆಚ್ಚಾಗಿ ಈ ದೇಶದ, ಈ ನಗರದ ಜನರ ಸೇವೆ ಮಾಡುವಂತಾಗಲಿ. ಮಾನವ ಮೌಲ್ಯಗಳನ್ನು ಸ್ಥಾಪಿಸುವವರಾಗಲಿ ಮತ್ತು ಶಾಂತಿ ಸುರಕ್ಷತೆಗಾಗಿ ಎಲ್ಲ ರೀತಿಯ ಪ್ರಯತ್ನಗಳನ್ನು ಮಾಡುವಂತವರಾಗಲಿ ಎಂದು ಪ್ರಾರ್ಥಿಸಿದರು.

ಹುಝೂರ್ ಅವರ ಈ ಭಾಷಣ 6 ಗಂಟೆ 45 ನಿಮಿಷದವರೆಗೆ ಮುಂದುವರಿಯಿತು. ಅನಂತರ ದುಆ ಮಾಡಿಸಿದರು. ಅತಿಥಿಗಳು ಅವರ ಜೊತೆಯಲ್ಲಿ ಊಟ ಮಾಡಿದರು. ಊಟವಾದ ನಂತರ ಕೆಲವು ಅತಿಥಿಗಳು ಹುಝೂರ್(ಅಬಿಅ) ರನ್ನು ಭೇಟಿಯಾಗುವ ಭಾಗ್ಯ ಪಡೆದರು ಮತ್ತು ಭಾವಚಿತ್ರಗಳನ್ನು ತೆಗೆಸಿಕೊಂಡರು. ಅನಂತರ ಕಾರ್ಯಕ್ರಮದನ್ವಯ ಮರಳಿ ಬೈತುಸ್ಸುಬೂಹ್‌ಗೆ ಪ್ರಯಾಣಿಸಿದರು. ಪೋಲೀಸರು ನಗರದಿಂದ ಹೊರಡುವಾಗ ಮೋಟರ್–ವೇ–ವರೆಗೆ ಬೆಂಗಾವಲು (Escort) ನೀಡಿದರು.

7 ಗಂಟೆ 10 ನಿಮಿಷಕ್ಕೆ ಇಲ್ಲಿಂದ ಹೊರಟು 8 ಗಂಟೆ 55 ನಿಮಿಷಕ್ಕೆ ಹುಝೂರ್(ಅಬಿಅ) ಬೈತುಸ್ಸುಬೂಹ್‌ಗೆ ತಲುಪಿದರು. ಅನಂತರ ಮಗ್ರಿಬ್ ಮತ್ತು ಇಶಾಅ ನಮಾಝುಗಳನ್ನು ಜಮಾ ಮಾಡಿ ನಿರ್ವಹಿಸಿಕೊಟ್ಟರು. ನಮಾಝುಗಳ ನಿರ್ವಹಣೆಯ ನಂತರ ತಮ್ಮ ವಸತಿನಿಲಯಕ್ಕೆ ತೆರಳಿದರು.

**ಅತಿಥಿಗಳ ಅನಿಸಿಕೆಗಳು**

ಹುಝೂರ್(ಅಬಿಅ) ಇಂದಿನ ಭಾಷಣವು ಭಾಗವಹಿಸಿದ ಅತಿಥಿಗಳ ಮೇಲೆ ಆಳವಾದ ಪ್ರಭಾವ ಬೀರಿತು. ಹಲವು ಅತಿಥಿಗಳು ತಮ್ಮ ಅನಿಸಿಕೆಗಳನ್ನು ಈ ಕೆಳಗಿನಂತೆ ಹಂಚಿಕೊಂಡಿದ್ದಾರೆ.

* Miss Kirah Hanemann ಸಾಹಿಬಾ ಅವರು ಪೋಲೀಸ್ ಇಲಾಖೆಗೆ ಸಂಬಂಧಿಸಿದವರಾಗಿದ್ದಾರೆ. ತಮ್ಮ ಭಾವನೆಗಳನ್ನು ಅವರು ಹೀಗೆ ಹಂಚಿಕೊಂಡರು ನಿಮ್ಮ ಖಲೀಫರು ಸಭಾಂಗಣಕ್ಕೆ ಪ್ರವೇಶಿಸಿದಂತೆಯೇ ನನ್ನ ಮೇಲೆ ಒಂದು ಅವಿಸ್ಮರಣೀಯ ಆಧ್ಯಾತ್ಮಿಕ ಪ್ರಭಾವ ಬೀರಿತು. ನನ್ನ ಭಾವನೆಯಲ್ಲಿ ಇದು ಪವಿತ್ರ ಖುರ್‌ಆನಿನ ಪವಾಡ ಸದೃಶ್ಯವಾಗಿರಬಹುದು. ಅದು ಇಮಾಮ್ ಜಮಾಅತ್ ಅಹ್ಮದಿಯಾ ಅವರಿಗೆ ನೋಡಿದ ಪ್ರಯುಕ್ತ ಉಂಟಾಯಿತು. ನನ್ನ ಜೀವನದಲ್ಲಿ ಇಂತಹ ಪ್ರಭಾವ ಬೀರಿದ ವ್ಯಕ್ತಿಗಳಲ್ಲಿ ಇವರೇ ಪ್ರಥಮರಾಗಿದ್ದಾರೆ. ಆದುದರಿಂದ ನನ್ನ ಬಯಕೆ ಏನೆಂದರೆ ನಾನು ಅಹ್ಮದಿಯಾ ಜಮಾಅತಿನೊಂದಿಗೆ ಸಂಬಂಧ ಬೆಳೆಸುವೆನು ಮತ್ತು ಬರುವ ರಮಝಾನ್ ತಿಂಗಳು ನಿಮ್ಮ ಜೊತೆಯಲ್ಲಿ ಕಳೆಯುವೆನು. ಅದರಿಂದ ನನ್ನ ಆಧ್ಯಾತ್ಮಿಕ ಶಕ್ತಿ ಇಮ್ಮಡಿಯಾಗಬಹುದು.

* ಇನ್ನೋರ್ವ ಅತಿಥಿ Harald Bonesel ತಮ್ಮ ಅನಿಸಿಕೆಗಳನ್ನು ಹೀಗೆ ವ್ಯಕ್ತಪಡಿಸಿದರು: ಇಮಾಮ ಜಮಾಅತ್ ಅಹ್ಮದಿಯಾ ತಮ್ಮ ಭಾಷಣದಲ್ಲಿ ಪರಸ್ಪರ ಐಕ್ಯಮತ ಹೊಂದುವ ವಿಷಯದಲ್ಲಿ ಒಗ್ಗೂಡಲು ಹೇಳಿದರು. ಏಕೆಂದರೆ ಇಂದು ಲೋಕವು Global Village ನಂತಾಗಿದೆ. ಅದನ್ನು ಬುನಾದಿಯನ್ನಾಗಿ ಮಾಡಿಕೊಂಡು ನಾವು ಶಾಂತಿಯನ್ನು ಸಾಧಿಸಬಹುದೆಂಬ ಮಾತು ತುಂಬ ತಾರ್ಕಿಕವಾಗಿದೆ. ಇಂದು ಲೋಕಕ್ಕೆ ಇದರ ಅವಶ್ಯಕತೆ ಇದೆ. ಇದಕ್ಕಿಂತ ಮುಂಚೆ ನನಗೆ ಸರಿಯಾಗಿ ಇಸ್ಲಾಮಿನ ಪರಿಚಯವಾಗಿರಲಿಲ್ಲ. ಆದುದರಿಂದ

*(ಉಳಿದ ವರದಿ ಪುಟ ಸಂಖೆ 07 ರಲ್ಲಿ ಓದಿರಿ)*

ಇಸ್ಲಾಮ್ ಮತ್ತು ಅಹ್ಮದಿಯ್ಯತ್‌ನ ಮಾಹಿತಿಗಾಗಿ ನಮ್ಮನ್ನು ಸಂಪರ್ಕಿಸಿ:
**NATIONAL TOLL FREE**
**1800–103–2131**

Printed & Published by: Jameel Ahmed Nasir on behalf of Nigran Board of Badar. Name of Owner: Nigran Board of Badar. And printed at Fazle-Umar Printing Press. Harchowal Road, Qadian, Distt. Gurdaspur-143516, Punjab. And published at office of the Weekly Badar Mohallah - Ahmadiyya, Qadian Distt. Gsp-143516, Punjab. India. Editor: Tariq Ahmed Idris.